6) ಅನಿಯಮಿತ ಹೊಣೆಗಾರಿಕೆ:

ಪಾಲುದಾರರ ಹೊಣೆಗಾರಿಕೆಯು ಅನಿಯಮಿತವಾಗಿರುತ್ತದೆ ಅಲ್ಲದೆ ಎಲ್ಲಾ ಪಾಲುದಾರರು ಸಂಯುಕ್ತವಾಗಿ ಮತ್ತು ವೈಯಕ್ತಿಕವಾಗಿ ಪಾಲುಗಾರಿಕೆಯ ಸಾಲವನ್ನು ಪಾವತಿ ಮಾಡಲು ಹೊಣೆಗಾರರಾಗಿರುತ್ತಾರೆ.

2.2. ಪಾಲುಗಾರಿಕೆಯ ಒಪ್ಪಂದ:

ಪಾಲುಗಾರಿಕೆಯು ಅಸ್ತಿತ್ವದಲ್ಲಿ ಬರಬೇಕಾದರೆ ಪಾಲುಗಾರರೆಲ್ಲರೂ ವ್ಯವಹಾರದ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಇಂತಹ ಒಪ್ಪಂದವು ಬರಹದಲ್ಲಿರಬಹುದು ಇಲ್ಲವೆ ಬಾಯಿಮಾತಿನಿಂದ ಮುಗಿಸಬಹುದು. ಸಾಮಾನ್ಯವಾಗಿ ಒಪ್ಪಂದವನ್ನು ಬರಹದಲ್ಲಿಡುವದಕ್ಕೆ ಪಾಲುಗಾರರು ಇಚ್ಛಿಸುತ್ತಾರೆ. ಏಕೆಂದರೆ ಮುಂದೆ ಸಂಭವಿಸಬಹುದಾದ ತಪ್ಪು ತಿಳುವಳಿಕೆ ಅಥವಾ ವಾದವಿವಾದಗಳನ್ನು ಸುಲಭವಾಗಿ ನಿವಾರಿಸಲು ಲಿಖಿತ ಒಪ್ಪಂದವು ಬಹಳ ನೆರವಾಗುವುದು. ಒಪ್ಪಂದವು ಬರಹದಲ್ಲಿರದಿದ್ದರೆ ಆಗ ಪಾಲುಗಾರಿಕೆಯ ಕಾನೂನಿನಲ್ಲಿ ಕೊಟ್ಟ ಮಾದರಿಯ ಒಪ್ಪಂದವು ಮಾತ್ರ ಅನ್ವಯಿಸಲ್ಪಡುತ್ತದೆ. ಪಾಲುದಾರರು ತಮ್ಮ ಕರಾರುಗಳನ್ನು ಬರೆದು ಎಲ್ಲಾ ಪಾಲುದಾರರು ಒಪ್ಪಿ ಸಹಿ ಮಾಡಿರುತ್ತಾರೆಯೋ ಅಂತಹ **ಲಿಖಿತ ದಾಖಲೆಯನ್ನು ಪಾಲುಗಾರಿಕೆ ಒಪ್ಪಂದ ಪತ್ರ** ಎಂದು ಕರೆಯುತ್ತಾರೆ. ಈ ಲಿಖಿತ ಒಡಂಬಡಿಕೆಗೆ ಭಾರತೀಯ ಸ್ಟ್ಯಾಂಪ್ ಕಾನೂನಿನನ್ವಯ ಸ್ಟ್ಯಾಂಪ್ ಲಗತ್ತಿಸರಬೇಕು. ಪಾಲುಗಾರಿಕೆಯ ಒಪ್ಪಂದಕ್ಕೆ **"ಪಾಲುಗಾರಿಕೆ ನಿಬಂಧನೆಗಳು"** ಎಂದು ಕರೆಯುತ್ತಾರೆ.

ಪಾಲುಗಾರಿಕೆಯ ಒಪ್ಪಂದವು ಸಂಸ್ಥೆಯ ಒಳಾಡಳಿತದ ಬಗ್ಗೆಯೂ ಹಾಗೂ ಪಾಲುಗಾರರ ಹಕ್ಕು ಬಾಧ್ಯತೆಗಳ ಬಗ್ಗೆಯೂ ನಿಯಮಗಳನ್ನು ಒಳಗೊಂಡಿರುತ್ತದೆ. ಪಾಲುಗಾರಿಕೆಯ ಒಪ್ಪಂದವು ಸಾಮಾನ್ಯವಾಗಿ ಕೆಳಗಿನ ಅಂಶಗಳ ಬಗ್ಗೆ ಬೆಳಕನ್ನು ಚೆಲ್ಲುತ್ತದೆ:

1. ಪಾಲುಗಾರಿಕೆಯ ಹೆಸರು, ವ್ಯವಹಾರದ ಸ್ಥಳ ಮತ್ತು ವ್ಯವಹಾರದ ಸ್ವರೂಪ.
2. ಪಾಲುಗಾರರ ಹೆಸರು ಮತ್ತು ವಿಳಾಸ.
3. ಪಾಲುಗಾರರು ತೊಡಗಿಸಿದ ಬಂಡವಾಳ ಪ್ರಮಾಣ
4. ವ್ಯವಹಾರದಲ್ಲಾದ ಲಾಭವನ್ನು ಹಂಚಿಕೊಳ್ಳುವ ಪ್ರಮಾಣ.
5. ಪಾಲುಗಾರರು ಅಧಿಕ ಬಂಡವಾಳ ಮತ್ತು ಸಾಲಕೊಡುವ ಬಗ್ಗೆ ನಿಯಮಗಳು.
6. ಪಾಲುಗಾರರು ತಮ್ಮ ಸ್ವಂತದ ಖರ್ಚಿಗಾಗಿ ಹಿಂತೆಗೆದುಕೊಳ್ಳುವ ಹಣದ ಮಿತಿ
7. ಬಂಡವಾಳ, ಹಿಂತೆಗೆದುಕೊಂಡ ಹಣ, ಸಾಲದ ಮೊತ್ತ ಇವುಗಳ ಮೇಲೆ ಆಕರಿಸಬೇಕಾದ ಬಡ್ಡಿ.
8. ಪಾಲುಗಾರರಿಗೆ ಸಂಬಳ, ದಲಾಲಿ ಅಥವಾ ಬೋನಸ್ ಕೊಡುವದಿದ್ದರೆ ಅದರ ಬಗ್ಗೆ ನಿಯಮಾವಳಿಗಳು.
9. ಪಾಲುಗಾರಿಕೆಯ ಅವಧಿ.
10. ಪಾಲುಗಾರಿಕೆಯ ವಿಸರ್ಜನೆಯ ನಿಯಮಗಳು.
11. ಪಾಲುಗಾರರಲ್ಲಿ ಉದ್ಭವಿಸುವ ವಾದ-ವಿವಾದಗಳನ್ನು ಬಗೆಹರಿಸುವ ವಿಧಾನ.
12. ಲೆಕ್ಕ ಪತ್ರಗಳನ್ನಿಡುವ ವಿಧಾನ, ಇತ್ಯಾದಿ.

2.3. ಪಾಲುಗಾರಿಕೆಯ ಅನುಪಸ್ಥಿತಿ ಅಥವಾ ಒಪ್ಪಂದವಿಲ್ಲದಿದ್ದಲ್ಲಿ ಪಾಲುಗಾರರು ಅನುಸರಿಸಬೇಕಾದ ನಿಯಮಗಳು

ಯಾವುದೇ ವಿಷಯಕ್ಕೆ ಸಂಬಂಧ ಪಟ್ಟಂತೆ ಪಾಲುಗಾರಿಕೆಯ ಒಪ್ಪಂದ ಒಡಂಬಡಿಕೆ ಇಲ್ಲದಿದ್ದಲ್ಲಿ ಅಂತಹ ಸಂದರ್ಭದಲ್ಲಿ ಭಾರತೀಯ ಪಾಲುಗಾರಿಕೆ ಕಾಯ್ದೆ 1932ರ ಕಲಂಗಳು ಅನ್ವಯವಾಗುತ್ತದೆ. ಭಾರತೀಯ ಪಾಲುಗಾರಿಕೆಯ ಕಾನೂನು 1932ರ ಪ್ರಕಾರ ಈ ಕೆಳಗೆ ಕೊಟ್ಟ ನಿಯಮಗಳು ಅನ್ವಯಿಸುತ್ತವೆ.

1) ಲಾಭದ ಹಂಚಿಕೆ:

ಎಲ್ಲಾ ಪಾಲುಗಾರರು ಸಂಸ್ಥೆಯ ಲಾಭವನ್ನು ಸಮನಾಗಿ ಹಂಚಿಕೊಳ್ಳಬೇಕು.

2) ಬಂಡವಾಳದ ಮೇಲೆ ಬಡ್ಡಿ

ಪಾಲುಗಾರರು ತಾವು ತೊಡಗಿಸಿದ ಬಂಡವಾಳದ ಮೇಲೆ ಬಡ್ಡಿಯನ್ನು ಕೇಳುವ ಅಧಿಕಾರವಿಲ್ಲ.

3) ಸ್ವಂತ ವೆಚ್ಚ ಹಿಂತೆಗೆತದ ಮೇಲೆ ಬಡ್ಡಿ

ಪಾಲುಗಾರರು ತಾವು ತಮ್ಮ ಸ್ವಂತದ ಖರ್ಚಿಗೆ ಹಿಂತೆಗೆದುಕೊಂಡ ಹಣದ ಮೇಲೆ ಸಂಸ್ಥೆಗೆ ಬಡ್ಡಿ ಕೊಡಲು ಬಾಧ್ಯಸ್ಥರಾಗುವುದಿಲ್ಲ.

4) ಸಾಲದ ಮುಂಗಡದ ಮೇಲೆ ಬಡ್ಡಿ

ಪಾಲುಗಾರರು ಸಂಸ್ಥೆಗೆ ಸಾಲವನ್ನು ಕೊಟ್ಟಲ್ಲಿ ಅದರ ಮೇಲೆ ಶೇ. 6ರಂತೆ ಸಂಸ್ಥೆಯು ಅವನಿಗೆ ಬಡ್ಡಿಯನ್ನು ಕೊಡಬೇಕಾಗುತ್ತದೆ.

5) ಸಂಭಾವನೆ:

ತನ್ನ ಸಂಸ್ಥೆಯ ವ್ಯವಹಾರದಲ್ಲಿ ಸೇವೆ ಸಲ್ಲಿಸಿದಕ್ಕಾಗಿ ಪಾಲುಗಾರನಿಗೆ ಸಂಭಾವನೆ ಕೇಳುವ ಅಧಿಕಾರವಿಲ್ಲ.

ನಿದರ್ಶನ 1:

ದಿನಾಂಕ: 1–04–2012ರಿಂದ ಕವಿತ ಮತ್ತು ಸವಿತ ಪಾಲುಗಾರಿಕೆಯ ವ್ಯವಹಾರ ನಡೆಸುತ್ತಿದ್ದು ಅವರಲ್ಲಿ ಯಾವುದೇ ವಿಷಯಕ್ಕೆ ಒಡಂಬಡಿಕೆ ಯಾಗಿರುವುದಿಲ್ಲ. ಅವರು ಕ್ರಮವಾಗಿ ₹ 2,00,000 ಮತ್ತು ₹ 5,00,000 ಬಂಡವಾಳ ತೊಡಗಿಸಿರುತ್ತಾರೆ. ದಿನಾಂಕ: 1–10–2012ರಂದು ₹ 50,000ಗಳನ್ನು ಕವಿತ ಸಾಲವಾಗಿ ಸಂಸ್ಥೆಗೆ ಕೊಟ್ಟಿರುತ್ತಾಳೆ. ವರ್ಷಾವದಿಯಲ್ಲಿ ₹ 10,000 ಗಳನ್ನು ಸವಿತಳು ತನ್ನ ಸ್ವಂತ ವೆಚ್ಚಕ್ಕಾಗಿ ವ್ಯವಹಾರದಿಂದ ಹಣವನ್ನು ಹಿಂತೆಗೆದುಕೊಂಡಿರುತ್ತಾಳೆ. ದೀರ್ಘ ಕಾಯಿಲೆಯಿಂದ ಬಳಲುತ್ತಿದ್ದ ಕವಿತ ದಿನಾಂಕ: 1–8–2012ರಿಂದ ದಿನಾಂಕ: 30–09–2012ರವರೆಗೆ ವ್ಯವಹಾರದಲ್ಲಿ ಬಾಗವಹಿಸಲು ಸಾಧ್ಯವಾಗಿರುವುದಿಲ್ಲ. ಮಾರ್ಚ್ 2013ಕ್ಕೆ ಮುಗಿಯುವ ವರ್ಷ ಅವಧಿಯಲ್ಲಿ ಅವರು ₹ 90,000 ಲಾಭವನ್ನು ಗಳಿಸಿರುತ್ತಾರೆ.

ಅವರಲ್ಲಿ ಲಾಭ ಹಂಚಿಕೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ವಿವಾದಗಳು ಉಂಟಾಗಿರುತ್ತವೆ.

ಕವಿತಳ ಹಕ್ಕು ಏನೆಂದರೆ:

1) ತನಗೆ ಬಂಡವಾಳದ ಮೇಲೆ ಶೆ. 10 ರಷ್ಟು ಬಡ್ಡಿಯನ್ನು ನೀಡಬೇಕು.

2) ಲಾಭವನ್ನು ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿ ಹಂಚಿಕೊಳ್ಳಬೇಕು.

3) ಸವಿತಾಳ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೆ. 10 ರಷ್ಟು ಬಡ್ಡಿಯನ್ನು ಆಕರಿಸಬೇಕು.

ಸವಿತಾಳ ಹಕ್ಕು ಏನೆಂದರೆ:

1) ಲಾಭವನ್ನು ಸಮನಾಗಿ ಹಂಚಿಕೊಳ್ಳಬೇಕು.

2) ಕವಿತಳ ಖಾಯಿಲೆಯ ಅವಧಿಗೆ ಸಂಬಂಧಿಸಿದಂತೆ ನನಗೆ ಪ್ರತಿ ತಿಂಗಳಿಗೆ ₹ 2,000/– ದಂತೆ ಸಂಭಾವನೆ ನೀಡಬೇಕು.

3) ಸಾಲದ ಮೇಲೆ ವಾರ್ಷಿಕ ಶೆ. 6ರಂತೆ ಬಡ್ಡಿಯನ್ನು ಅಕರಿಸಬೇಕು ಮತ್ತು ಬಂಡವಾಳದ ಮೇಲಾಗಲಿ ಅಥವಾ ಸ್ವಂತ ವೆಚ್ಚದ ಮೇಲಾಗಲಿ ಬಡ್ಡಿಯನ್ನು ಕೊಡುವಹಾಗಿಲ್ಲ.

ಕವಿತ ಮತ್ತು ಸವಿತಳ ವಿವಾದವನ್ನು ಬಗೆಹರಿಸಿ ಲಾಭ ನಷ್ಟದ ಹಂಚಿಕೆಯನ್ನು ತೋರಿಸಿರಿ.

ಉತ್ತರ :

ಯಾವುದೇ ವಿಷಯದ ಬಗೆಗೆ ಪಾಲುದಾರರಲ್ಲಿ ಒಪ್ಪಂದವಿರದಿದ್ದರೆ ಭಾರತೀಯ ಪಾಲುಗಾರಿಕೆ ಕಾಯ್ದೆ 1932ರ ನಿಯಮಗಳಂತೆ ಪಾಲುದಾರರ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕಾಗುತ್ತದೆ.

1. ತನ್ನ ಬಂಡವಾಳದ ಜೊತೆಗೆ ಹೆಚ್ಚಿನ ಹಣವನ್ನು ಸಾಲವಾಗಿ ನೀಡಿದ್ದಲ್ಲಿ, ಪಾಲುಗಾರನು ಶೇ. 6 ರಂತೆ ಅದರ ಮೇಲೆ ಬಡ್ಡಿಯನ್ನು ಕೇಳಬಹುದು. ಅದ್ದರಿಂದ ಶೆ. 6 ರಂತೆ ಕವಿತಳ ಸಾಲದ ಮೇಲೆ ಬಡ್ಡಿಯನ್ನು ಕೊಡಬೇಕೆ ವಿನಹಾ ಶೇ. 10 ರಷ್ಟು ಅಲ್ಲ.
2. ಪಾಲುದಾರರು ತೊಡಗಿಸಿದ ಬಂಡವಾಳದ ಮೇಲೆ ಬಡ್ಡಿಯನ್ನು ಕೇಳುವು ಹಕ್ಕು ಇಲ್ಲವಾದ್ದರಿಂದ ಕವಿತಳ ಮತ್ತು ಸವಿತಳ ಬಂಡವಾಳದ ಮೇಲೆ ಬಡ್ಡಿಯನ್ನು ಕೊಡಲು ಬರುವುದಿಲ್ಲ.
3. ಪಾಲುದಾರರು ತಮ್ಮ ಸ್ವಂತ ವೆಚ್ಚಕ್ಕಾಗಿ ವ್ಯವಹಾರದ ಹಣವನ್ನು ಹಿಂತೆಗದರೆ ಅಂತಹ ಹಣದ ಮೇಲೆ ಬಡ್ಡಿಯನ್ನು ಆಕರಿಸಲು ಬರುವುದಿಲ್ಲ.
4. ಯಾವುದೇ ಪಾಲುದಾರನು ವ್ಯವಹಾರದ ಚಟುವಟಿಕೆಯಲ್ಲಿ ಭಾಗವಹಿಸಿದರೆ ಪ್ರತಿಫಲವಾಗಿ ಸಂಭಾವನೆ ಕೇಳುವ ಹಾಗಿಲ್ಲ ಆದ್ದರಿಂದ ಕವಿತಳಿಗೆ ಯಾವುದೇ ಸಂಭಾವನೆ ದೊರೆಯುವುದಿಲ್ಲ.
5. ಲಾಭ ಅಥವಾ ನಷ್ಟವನ್ನು ಸಮನಾಗಿ ಹಂಚಿಕೊಳ್ಳಬೇಕೇ ವಿನಃ ಅವರ ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿ ಅಲ್ಲ.

ಕವಿತ ಮತ್ತು ಸವಿತಳ ಲಾಭದ ಹಂಚಿಕೆ

ವಿವರಣೆ	₹	₹
ನಿವ್ವಳ ಲಾಭ (ಸಾಲದ ಮೇಲಿನ ಬಡ್ಡಿ ಆಕರಿಸುವುದಕ್ಕಿಂತ ಮುಂಚೆ)		90,000
ಕಡಿತ: ಕವಿತಳ ಸಾಲದ ಮೇಲಿನ ಬಡ್ಡಿ $\left(\frac{50,000 \times 6}{100} \times \frac{6}{12}\right)$		1,500
ನಿವ್ವಳ ಲಾಭ		88,500
ಕವಿತಳ ಲಾಭ – 88,500 x ½ =	44,250	
ಸವಿತಳ ಲಾಭ – 88,500 x ½ =	44,250	

ಪಾಲುಗಾರಿಕೆಯ ಲೆಕ್ಕಪತ್ರಗಳು

ಸಾಮಾನ್ಯವಾಗಿ ಏಕವ್ಯಕ್ತಿ ಒಡೆತನದ ಸಂಸ್ಥೆ ಮತ್ತು ಪಾಲುಗಾರಿಕೆ ಸಂಸ್ಥೆಯ ಲೆಕ್ಕ ಪತ್ರಗಳಲ್ಲಿ ವ್ಯತ್ಯಾಸವೇನೂ ಇಲ್ಲ. ಆದರೆ, ಪಾಲುಗಾರಿಕೆಯಲ್ಲಿ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ಮಾಲಿಕರಿರುವುದರಿಂದ ಬಂಡವಾಳದ ಖಾತೆಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಅಲ್ಲದ ಪಾಲುದಾರಿಕೆ ಸಂಸ್ಥೆಯಲ್ಲಿ (ಅ) ಪಾಲುಗಾರರ ಪ್ರವೇಶ (ಆ) ಪಾಲುಗಾರರ ನಿವೃತ್ತಿ (ಇ) ಪಾಲುಗಾರನ ನಿಧನ ಹಾಗೂ (ಈ) ಪಾಲುಗಾರಿಕೆಯ ವಿಸರ್ಜನೆ ಇವುಗಳಿರುವುದರಿಂದ ಅವಶ್ಯಕ ಬದಲಾವಣೆಗಳಿರುತ್ತವೆ.

2.4. ಪಾಲುಗಾರರ ಬಂಡವಾಳ ಖಾತೆಗಳನ್ನು ನಿರ್ವಹಿಸುವ ವಿಧಾನ :

ಪಾಲುಗಾರರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾಲುಗಾರಿಕೆ ಸಂಸ್ಥೆಯ ಪುಸ್ತಕದಲ್ಲಿ ಪಾಲುಗಾರರು ತೊಡಗಿಸಿರುವ ಬಂಡವಾಳ, ಸ್ವಂತ ವೆಚ್ಚದ ಹಿಂತೆಗೆತ, ಲಾಭದ ಹಂಚಿಕೆ, ಬಂಡವಾಳದ ಮೇಲಿನ ಬಡ್ಡಿ, ಸ್ವಂತ ವೆಚ್ಚ ಹಿಂತೆಗತ ಮೇಲಿನ ಬಡ್ಡಿ, ಹಾಗೂ ಸಂಭಾವನೆಗಳನ್ನು ಬರೆಯಲಾಗುತ್ತಿದೆ.

ಪಾಲುಗಾರರ ಬಂಡವಾಳ ಖಾತೆಗಳನ್ನು ಎರಡು ವಿಧಗಳಲ್ಲಿ ನಿರ್ವಹಿಸಲಾಗುತ್ತದೆ. ಅವುಗಳೆಂದರೆ

1) ಸ್ಥಿರ ಬಂಡವಾಳದ ಪದ್ಧತಿ

2) ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿ.

ಸ್ಥಿರ ಬಂಡವಾಳ ಪದ್ಧತಿ :

ಸ್ಥಿರ ಬಂಡವಾಳ ಪದ್ಧತಿಯಲ್ಲಿ ಪಾಲುದಾರನು **ತೊಡಗಿಸಿರುವ ಬಂಡವಾಳವನ್ನು ಮಾತ್ರ** ಬಂಡವಾಳ ಖಾತೆಯಲ್ಲಿ ಬರೆಯಲಾಗುತ್ತದೆ. ಇತರ ಹೊಂದಾಣಿಕೆಗಳಾದ, **ಸ್ವಂತದ ವೆಚ್ಚ, ಲಾಭ ಅಥವಾ ನಷ್ಟದ** ಪಾಲು, **ಬಂಡವಾಳದ ಮೇಲಿನ** ಬಡ್ಡಿ, **ಸ್ವಂತದ ವೆಚ್ಚದ ಮೇಲಿನ ಬಡ್ಡಿ,** ಸಂಬಳ ಅಥವಾ ದಲ್ಲಾಳಿ. ಇವುಗಳನ್ನು ಪಾಲುದಾರನ ಚಾಲ್ತಿ ಖಾತೆಯಲ್ಲಿ ಬರೆಯಲಾಗುತ್ತದೆ. ಅದ್ದರಿಂದ ಪಾಲುದಾರನ ಬಂಡವಾಳ ಖಾತೆಯು ಯಾವಾಗಲೂ ಸ್ಥಿರವಾಗಿರುತ್ತದೆ ಏರು ಪೇರು ಆಗುವುದಿಲ್ಲ, ಅದ್ದರಿಂದ ಇದನ್ನು ಸ್ಥಿರ **ಬಂಡವಾಳ** ಖಾತೆ ಎಂದು ಕರೆಯುತ್ತಾರೆ.

ಸ್ಥಿರ ಬಂಡಾವಳ ಪದ್ಧತಿಯಲ್ಲಿ ಪಾಲುದಾರನ ಹೆಸರಿನಲ್ಲಿ ಎರಡು ಖಾತೆಗಳನ್ನು ತೆರೆಯಲಾಗುತ್ತದೆ.

1) ಪಾಲುದಾರನ ಬಂಡವಾಳ ಖಾತೆ ಹಾಗೂ

2) ಪಾಲುದಾರನ ಚಾಲ್ತಿ ಖಾತೆ.

ಪ್ರತಿಯೊಬ್ಬ ಪಾಲುದಾರನ ಚಾಲ್ತಿ ಖಾತೆಯಲ್ಲಿ ಈ ಕೆಳಗಿನವುಗಳನ್ನು ನಮೂದಿಸಲಾಗುತ್ತದೆ

ಅ) ಅವನ ಸ್ವಂತದ ವೆಚ್ಚ ಆ) ಸ್ವಂತದ ವೆಚ್ಚದ ಮೇಲಿನ ಬಡ್ಡಿ

ಇ) ಅವನ ಪಾಲಿನ ನಷ್ಟ

ಜಮ ಮಾಡಲಾಗುವುದು

ಅ) ಬಂಡವಾಳದ ಮೇಲಿನ ಬಡ್ಡಿ ಆ) ಸಂಬಳ ಅಥವಾ ದಲ್ಲಾಳಿ

ಇ) ಅವನ ಪಾಲಿನ ಲಾಭ.

ನಂತರ ಪಾಲುದಾರನ ಚಾಲ್ತಿ ಖಾತೆಯನ್ನು ಮುಚ್ಚಲಾಗುವುದು ಮತ್ತು ಚಾಲ್ತಿ ಖಾತೆಯ ಶಿಲ್ಕನ್ನು ಅವನ ಬಂಡವಾಳ ಖಾತೆಗೆ ವರ್ಗಾಹಿಸದೆ ಪ್ರತ್ಯೇಕ್ಷವಾಗಿ, ತಾಳೆ ಪಟ್ಟಿಯಲ್ಲಿ ತೋರಿಸಲಾಗುವುದು. ಚಾಲ್ತಿ ಖಾತೆಯು ಜಮೆಯ ಶಿಲ್ಕನ್ನಾದರೂ ತೋರಿಸಬಹುದು ಇಲ್ಲವೆ ಖರ್ಚಿನ ಶಿಲ್ಕನ್ನಾದರೂ ತೋರಿಸಬಹುದು, ಜಮೆಯ ಶಿಲ್ಕನ್ನು ತೋರಿಸಿದರೆ. ತಾಳೆ ಪಟ್ಟಿಯ ಬಾಗದಲ್ಲಿಯೂ, ಖರ್ಚಿನ ಶಿಲ್ಕನ್ನು ತೋರಿಸಿದರೆ, ಖರ್ಚಿನ ಭಾಗದ ಕಡೆಗೆ ತೋರಿಸಲಾಗುವುದು.

ಈ ಪದ್ಧತಿಯಲ್ಲಿ ಸ್ಥಿರ ಬಂಡವಾಳ ಖಾತೆಯು ಯಾವಗಲೂ **ಜಮೆಯ ಶಿಲ್ಕನ್ನು** ತೋರಿಸುತ್ತದೆ. ಜಮೆಯ ಶಿಲ್ಕನ್ನು ತಾಳೆ ಪಟ್ಟಿಯ ಭಾಗದಲ್ಲಿ ತೋರಿಸಲಾಗುತ್ತದೆ.

ಸ್ಥಿರ ಬಂಡವಾಳ ಪದ್ಧತಿಯಲ್ಲಿ ಪಾಲುಗಾರನ ಖಾತೆಗಳ ಮಾದರಿಗಳನ್ನು ಈ ಕೆಳಗೆ ಕೊಟ್ಟಿದೆ.

ಪಾಲುಗಾರನ ಬಂಡವಾಳ ಖಾತೆ

ಖರ್ಚು ಜಮಾ

ವಿವರ	₹	ವಿವರ	₹
ಗೆ ಬ್ಯಾಂಕು / ನಗದು ಖಾತೆ (ಬಂಡವಾಳದ ಹಿಂತೆಗೆತ)	xxx	ಇಂದ ಪ್ರಾರಂಭದ ಶಿಲ್ಕು (ಬಂಡವಾಳದ ಪ್ರಾರಂಭದ ಶಿಲ್ಕು)	xxx
ಗೆ ಅಂತಿಮ ಶಿಲ್ಕು	xxx	ಇಂದ ಬ್ಯಾಂಕು/ ನಗದು ಖಾತೆ	xxx
(ಅಂತಿಮ ಜಮಾ ಶಿಲ್ಕು)	xxx	(ಹೆಚ್ಚುವರಿ ಬಂಡವಾಳ)	xxx
		ಇಂದ ಪ್ರಾರಂಭದ ಶಿಲ್ಕು	xxx

ಪಾಲುಗಾರನ ಚಾಲ್ತಿ ಖಾತೆ

ಖರ್ಚು ಜಮಾ

ವಿವರ	₹	ವಿವರ	₹
ಗೆ ಆರಂಭದ ಶಿಲ್ಕು (ಆರಂಭದ ಖರ್ಚು ಶಿಲ್ಕು)	xxx	ಇಂದ ಆರಂಭದ ಶಿಲ್ಕು (ಆರಂಭದ ಜಮಾ ಶಿಲ್ಕು)	xxx
ಗೆ ಹಣ ಹಿಂತೆಗೆತದ ಖಾತೆ	xxx	ಇಂದ ಬಂಡವಾಳದ ಬಡ್ಡಿಯ ಖಾತೆ	xxx
ಗೆ ಹಣ ಹಿಂತೆಗೆತದ ಮೇಲೆ ಬಡ್ಡಿ ಖಾತೆ	xxx	ಇಂದ ವೇತನ ಖಾತೆ	xxx
ಗೆ ಲಾಭ-ನಷ್ಟ ಹಂಚಿಕೆಯ ಖಾತೆ (ನಷ್ಟದ ಪಾಲು)	xxx	ಇಂದ ದಲ್ಲಾಳಿ ಖಾತೆ	xxx
		ಇಂದ ಲಾಭ-ನಷ್ಟಗಳ ಹಂಚಿಕೆಯ ಖಾತೆ (ಲಾಭದ ಪಾಲು)	xxx
ಗೆ ಅಂತಿಮ ಶಿಲ್ಕು (ಅಂತಿಮ ಜಮಾ ಶಿಲ್ಕು)	xxx	ಇಂದ ಅಂತಿಮ ಶಿಲ್ಕು (ಅಂತಿಮ ಖರ್ಚು ಶಿಲ್ಕು)	xxx
	xxxx		**xxxx**

ಹೆಚ್ಚು ಕಡಿಮೆಯಾಗುವ ಬಂಡವಾಳ ಪದ್ಧತಿ :

ಈ ಪದ್ಧತಿಯಲ್ಲಿ ಪಾಲುಗಾರನ ಬಂಡವಾಳ ಖಾತೆಯು ವರ್ಷ ದಿಂದ ವರ್ಷಕ್ಕೆ ಹೆಚ್ಚುಕಡಿಮೆಯಾಗುತ್ತಾ ಹೋಗುತ್ತದೆ, ಕಾರಣ, ಎಲ್ಲಾ ಹೊಂದಾಣಿಕೆಗಳಾದ ಸ್ವಂತ ವೆಚ್ಚ, ಬಂಡವಾಳದ ಮೇಲಿನ ಬಡ್ಡಿ, ಸ್ವಂತ ವೆಚ್ಚದ ಮೇಲಿನ ಬಡ್ಡಿ, ಸಂಬಳ ಅಥವಾ ದಲ್ಲಾಳಿ, ಲಾಭ ಅಥವಾ ನಷ್ಟದ ಪಾಲು, ಇತ್ಯಾದಿಗಳನ್ನು ಬಂಡವಾಳದ ಖಾತೆಯಲ್ಲಿ ಬರೆಯುವುದರಿಂದ, ಬಂಡವಾಳ ಖಾತೆಯ ಶಿಲ್ಕು ಹೆಚ್ಚು ಕಡಿಮೆಯಾಗುತ್ತ ಹೋಗುತ್ತದೆ. ಅದ್ದರಿಂದ ಇದನ್ನು ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿ ಎಂದು ಕರೆಯುತ್ತಾರೆ.

ಈ ಪದ್ಧತಿಯಲ್ಲಿ ಪಾಲುಗಾರನ ಬಂಡವಾಳ ಖಾತೆಯು ಜಮೆ ಶಿಲ್ಕು ಅಥವಾ ಖರ್ಚಿನ ಶಿಲ್ಕನ್ನು ತೋರಿಸಬಹುದು. ಪಾಲುದಾರನ ಬಂಡವಾಳ ಖಾತೆಯು ಜಮೆಯ ಶಿಲ್ಕಾಗಿದ್ದಾರೆ ಹೊಣೆಗಾರಿಕೆಯ ಭಾಗದಲ್ಲಿ, ಇಲ್ಲವೆ ಖರ್ಚಿನ ಶಿಲ್ಕಾಗಿದ್ದಾರೆ ಆಸ್ತಿಯ ಭಾಗದಲ್ಲಿ ತೋರಿಸಲಾಗುತ್ತದೆ.

ಪಾಲುಗಾರನ ಬಂಡವಾಳ ಖಾತೆ

ಖರ್ಚು ಜಮಾ

ವಿವರ	₹	ವಿವರ	₹
ಗೆ ಆರಂಭದ ಶಿಲ್ಕು (ಆರಂಭದ ಶಿಲ್ಕು ಖರ್ಚು)	xxxx	ಇಂದ ಆರಂಭದ ಶಿಲ್ಕು (ಆರಂಭದ ಜಮಾ ಶಿಲ್ಕು)	xxxx
ಗೆ ಹಣ ಹಿಂತೆಗೆತದ ಖಾತೆ	xxxx	ಇಂದ ನಗದು ಅಥವಾ ಬ್ಯಾಂಕ್ ಖಾತೆ (ಪರಿಚಯಿಸಿದ ಬಂಡವಾಳ)	xxxx
ಗೆ ಹಣ ಹಿಂತೆಗೆತದ ಮೇಲಿನ ಬಡ್ಡಿಯ ಖಾತೆ	xxxx	ಇಂದ ಬಂಡವಾಳದ ಮೇಲಿನ ಬಡ್ಡಿಯ ಖಾತೆ	xxxx
ಗೆ ಲಾಭ-ನಷ್ಟದ ಹಂಚಿಕೆ ಖಾತೆ	xxxx	ಇಂದ ವೇತನ ಖಾತೆ	xxxx
(ನಷ್ಟದ ಪಾಲು)	xxxx	ಇಂದ ದಲ್ಲಾಳಿ ಖಾತೆ	xxxx
ಗೆ ಅಂತಿಮ ಶಿಲ್ಕು (ಅಂತಿಮ ಜಮಾ ಶಿಲ್ಕು)	xxxx	ಇಂದ ಲಾಭ-ನಷ್ಟದ ಹಂಚಿಕೆ ಖಾತೆ (ಲಾಭದ ಪಾಲು)	xxxx
		ಇಂದ ಅಂತಿಮ ಶಿಲ್ಕು (ಅಂತಿಮ ಖರ್ಚು ಶಿಲ್ಕು)	xxxx
	xxxx		**xxxx**

ಸೂಚನೆ: 1. ನಮಗೆ ಯಾವುದೇ ಸೂಚನೆಯನ್ನು ನೀಡದಿದ್ದರೆ ಪಾಲುಗಾರರ ಖಾತೆಗಳನ್ನು ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿಯಲ್ಲಿಯೇ ನಿರ್ವಹಿಸಿರುತ್ತಾರೆ ಎಂದು ಭಾವಿಸಿಕೊಳ್ಳುವುದು.

2. ಪಾಲುಗಾರರ ಬಂಡವಾಳ ಖಾತೆ ಮತ್ತು ಚಾಲ್ತಿ ಖಾತೆ ಎರಡನ್ನೂ ಕೊಟ್ಟಿದ್ದರೆ ಅದನ್ನು ಸ್ಥಿರ ಬಂಡವಾಳ ಪದ್ದತಿ ಎಂದು ತಿಳಿದುಕೊಳ್ಳಬೇಕು.

ಸ್ಥಿರ ಮತ್ತು ಬದಲಾಗುವ ಬಂಡವಾಳ ಪದ್ಧತಿಗಳ ನಡುವಿನ ವ್ಯತ್ಯಾಸಗಳು

ವ್ಯತ್ಯಾಸಗಳ ಮುಖ್ಯಾಂಶ	ಸ್ಥಿರ ಪದ್ಧತಿ ಬಂಡವಾಳ	ಬದಲಾಗುವ ಪದ್ಧತಿ ಬಂಡವಾಳ
(i) ಖಾತೆಗಳ ಸಂಖ್ಯೆ	ಈ ವಿಧಾನದಲ್ಲಿ ಪ್ರತಿಯೊಬ್ಬ ಪಾಲುದಾರರ ಹೆಸರಿನಲ್ಲಿ ಪ್ರತ್ಯೇಕವಾಗಿ ಎರಡು ಖಾತೆಗಳನ್ನು ತೆರೆಯಲಾಗುವುದು. ಅವು ಬಂಡವಾಳ ಖಾತೆ ಮತ್ತು ಚಾಲ್ತಿ ಖಾತೆ.	ಈ ವಿಧಾನದಲ್ಲಿ ಪ್ರತಿಯೊಬ್ಬ ಪಾಲುದಾರರ ಹೆಸರಿನಲ್ಲಿ ಒಂದೇ ಖಾತೆಯನ್ನು ತೆರೆಯಲಾಗುಲುವುದು. ಅದು ಬಂಡವಾಳ ಖಾತೆ ಮಾತ್ರ.
(ii) ಹೊಂದಾಣಿಕೆಗಳು	ಎಲ್ಲಾ ಹೊಂದಾಣಿಕೆಗಳನ್ನು, ಸಂಬಳ, ಬಂಡವಾಳದ ಮೇಲೆ ಬಡ್ಡಿ ಇತ್ಯಾದಿಯನ್ನು ಚಾಲ್ತಿ ಖಾತೆಯಲ್ಲಿ ದಾಖಲಿಸಲಾಗುವುದು.	ಎಲ್ಲಾ ಹೊಂದಾಣಿಕೆಗಳನ್ನು ಬಂಡವಾಳ ಖಾತೆಯಲ್ಲಿ ದಾಖಲಿಸಲಾಗುವುದು.
(iii) ಶಿಲ್ಕು ಸ್ವರೂಪ	ಹೆಚ್ಚುವರಿ ಬಂಡವಾಳ ಮತ್ತು ಹಿಂತೆಗೆತದ ಬಂಡವಾಳ ಹೊರತುಪಡಿಸಿ, ಬಂಡವಾಳ ಖಾತೆಯ ಶಿಲ್ಕಿವಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.	ಬಂಡವಾಳ ಖಾತೆಯ ಶಿಲ್ಕು ವರ್ಷದಿಂದ ವರ್ಷಕ್ಕೆ ಬದಲಾಗುವುದು
(iv) ಶಿಲ್ಕು ವಿಧ	ಬಂಡವಾಳ ಖಾತೆ ಯಾವಾಗಲೂ ಜಮಾ ಶಿಲ್ಕನ್ನು ತೋರಿಸುತ್ತದೆ.	ಬಂಡವಾಳ ಖಾತೆ ಖರ್ಚು ಅಥವಾ ಜಮಾ ಶಿಲ್ಕನ್ನು ತೋರಿಸಬಹುದು.

2.5. ಪಾಲುಗಾರರ ಬಂಡವಾಳ ಖಾತೆಗೆ ಸಂಬಂಧಿಸಿದ ಹೊಂದಾಣಿಕೆಗಳು

ಜಮ ಖರ್ಚಿಗೆ ಸಂಬಂಧಿಸಿದಂತೆ ಏಕ ವ್ಯಕ್ತಿ ವ್ಯಾಪಾರಿ ಸಂಸ್ಥೆ ಮತ್ತು ಪಾಲುದಾರಿಕೆ ಸಂಸ್ಥೆ ಒಂದೇ ರೀತಿಯಾಗಿದ್ದರೂ ಸಹ ಈ ಕೆಳಗಿನ ಹೊಂದಾಣಿಕೆಗಳು ಪಾಲುದಾರಿಕೆ ಸಂಸ್ಥೆಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಬೇರೆಯಾಗಿರುತ್ತದೆ. ಸಾಮಾನ್ಯವಾಗಿ ಪಾಲುದಾರರಿಗೆ ಸಂಬಂಧಿಸಿದ ಹೊಂದಾಣಿಕೆಗಳು ಯಾವುವೆಂದರೆ

1. ಬಂಡವಾಳದ ಮೇಲಿನ ಬಡ್ಡಿ
2. ಸ್ವಂತ ವೆಚ್ಚದ ಹಿಂತೆಗತದ ಮೇಲಿನ ಬಡ್ಡಿ
3. ಪಾಲುಗಾರನ ಮುಂಗಡ ಹಣದ ಮೇಲಿನ ಬಡ್ಡಿ
4. ಸಂಬಳ ಅಥವಾ ದಲ್ಲಾಳಿ (ಪಾವತಿಸುವಂತಿದ್ದರೆ)
5. ಲಾಭ ಅಥವಾ ನಷ್ಟದ ಹಂಚಿಕೆ.

2.5.1. ಬಂಡವಾಳದ ಮೇಲಿನ ಬಡ್ಡಿ

ಕೆಲವು ಸಂದರ್ಭಗಳಲ್ಲಿ ತಾವು ತೊಡಗಿಸಿದ ಬಂಡವಾಳದ ಮೇಲೆ ಪಾಲುಗಾರರು ಬಡ್ಡಿಯನ್ನು ತೆಗೆದುಕೊಳ್ಳಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಸಾಮಾನ್ಯವಾಗಿ ಪಾಲುದಾರರು ಅಸಮ ಪ್ರಮಾಣದಲ್ಲಿ ಬಂಡವಾಳ ತೊಡಗಿಸಿದಾಗ

ಬಂಡವಾಳದ ಮೇಲಿನ ಬಡ್ಡಿಯನ್ನು ಕೊಡುವುದು ನ್ಯಾಯಯುತವಾಗಿರುತ್ತದೆ. ಬಂಡವಾಳದ ಮೇಲಿನ ಬಡ್ಡಿಯನ್ನು ಪಾಲುದಾರಿಕೆ ಸಂಸ್ಥೆಯು ಸಾಕಷ್ಟು ಪ್ರಮಾಣದಲ್ಲಿ ಲಾಭವನ್ನು ಗಳಿಸಿದಾಗ ಮಾತ್ರ ಆ ವರ್ಷದಲ್ಲಿ ಕೊಡಲಾಗುತ್ತದೆ. ಇಲ್ಲವಾದರೆ ಒಪ್ಪಂದ ಪತ್ರದಲ್ಲಿ ಇದ್ದರೂ ಸಹ ಬಂಡವಾಳದ ಮೇಲಿನ ಬಡ್ಡಿಯನ್ನು ಕೊಡಲು ಬರುವುದಿಲ್ಲ. ನಷ್ಟ ಉಂಟಾದರೆ ಬಡ್ಡಿಯನ್ನು ಕೊಡಲು ಬರುವುದಿಲ್ಲ.

ತೊಡಗಿಸಿರುವ ಬಂಡವಾಳ, ಹೆಚ್ಚಿನ ಬಂಡವಾಳ ಹಾಗೂ ಹಿಂತೆಗೆದ ಬಂಡವಾಳವನ್ನು ಗಮನದಲ್ಲಿಟ್ಟುಕೊಂಡು ಬಂಡವಾಳದ ಮೇಲಿನ ಬಡ್ಡಿಯನ್ನು ಕಂಡುಹಿಡಿಯಲಾಗುತ್ತದೆ.

ಉದಾಹರಣೆ:

(1) ದಿನಾಂಕ: 1–04–2012ರಂದು ರಮೇಶ್, ಸುರೇಶ್ ಮತ್ತು ಮಹೇಶ್ ಪಾಲುದಾರಿಕೆ ವ್ಯವಹಾರ ಪ್ರಾರಂಬಿಸಿದ್ದು, ಅವರು ಕ್ರಮವಾಗಿ ₹ 1,00,000 ರೂ. 50,000 ಮತ್ತು ₹ 40,000 ಬಂಡವಾಳ ತೊಡಗಿಸಿರುತ್ತಾರೆ. ಲಾಭ–ನಷ್ಟವನ್ನು ಸಮನಾಗಿ ಹಂಚಿಕೊಳ್ಳಲು ಒಪ್ಪಿರುತ್ತಾರೆ ಮತ್ತು ಬಂಡವಾಳದ ಮೇಲಿನ ಬಡ್ಡಿಯನ್ನು ವಾರ್ಷಿಕ ಶೆ. 8 ರಂತೆ ಕೊಡಲು ಒಪ್ಪಿರುತ್ತಾರೆ. ವರ್ಷದ ಅವಧಿಯಲ್ಲಿ ಯಾವುದೇ ಹೆಚ್ಚುವರಿ ಬಂಡವಾಳವನ್ನು ತೊಡಗಿಸಿರುವುದಿಲ್ಲ ಹಾಗೂ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತ ಇರುವುದಿಲ್ಲ.

ಬಂಡವಾಳದ ಮೇಲಿನ ಬಡ್ಡಿ ರಮೇಶ ₹ 8000/– ಸುರೇಶ್ ₹ 4000/– ಹಾಗೂ ಮಹೇಶ್ ₹ 3200/– ಆಗಿರುತ್ತದೆ.

(2) ಮೊಹನ್ ಮತ್ತು ಕುಮಾರ ಎಂಬುವವರು ಪಾಲುದಾರಿಕೆ ವ್ಯವಹಾರ ನಡೆಸುತ್ತಿದ್ದು ಅವರ ಬಂಡವಾಳವು ದಿನಾಂಕ: 1–4–2012ರಕ್ಕೆ ₹ 1,00,000 ಮತ್ತು ₹ 80,000 ಅಗಿರುತ್ತದೆ. ಮೊಹಾನು ದಿನಾಂಕ: 30–09–2012ರಂದು ₹ 50,000 ಹಾಗೂ ಕುಮಾರನು ದಿನಾಂಕ: 1–1–2013ರಂದು ₹ 70,000 ಹೆಚ್ಚುವರಿಯಾಗಿ ಬಂಡವಾಳವನ್ನು ತಂದಿರುತ್ತಾರೆ. ಬಂಡವಾಳದ ಬಡ್ಡಿಯನ್ನು ವಾರ್ಷಿಕ ಶೇ. 8 ರಂತೆ ಆಕರಿಸಬೇಕು. ಹಾಗಾದರೆ ಅವರ ಬಂಡವಾಳದ ಮೇಲಿನ ಬಡ್ಡಿಯು ಈ ರೀತಿ ಇರುತ್ತದೆ.

$$\text{ಮೋಹನ} = \left(\frac{1,00,000 \times 8}{100}\right) + \left(\frac{50,000}{100} \times \frac{6}{12}\right) = 8,000 + 2,000 = ₹\ 10,000$$

$$\text{ಕುಮಾರ} = \left(\frac{80,000 \times 8}{100}\right) + \left(\frac{70,000}{100} \times \frac{3}{12}\right) = 6,400 + 1,400 = ₹\ 7,800$$

ಒಂದು ವೇಳೆ, ಹೆಚ್ಚುವರಿ ಬಂಡವಾಳ ಮತ್ತು ಹಿಂತೆಗೆದ ಬಂಡವಾಳ ಎರಡು ಇದ್ದರೆ, ಅಂತಹ ಸಂದರ್ಭದಲ್ಲಿ ಈ ಕೆಳಗಿನ ರೀತಿಯಾಗಿ ಬಂಡವಾಳದ ಮೇಲೆ ಬಡ್ಡಿಯನ್ನು ಕಂಡುಹಿಡಿಯಲಾಗುವುದು.

(i) ಪ್ರಾರಂಭದ ಬಂಡವಾಳದ ಮೇಲೆ ಬಡ್ಡಿ ತೆಗೆಯುವುದು–ಪೂರ್ಣ ಒಂದು ವರ್ಷಕ್ಕೆ.

(ii) ಹೆಚ್ಚುವರಿಯಾಗಿ ಬಂಡವಾಳ ತೊಡಗಿಸಿದ್ದರೆ–ಹೆಚ್ಚುವರಿ ಬಂಡವಾಳ ತಂದ ದಿನಾಂಕದಿಂದ ವರ್ಷದ ಕೊನೆಯ ದಿನಾಂಕದ ಅವಧಿಗೆ ಬಡ್ಡಿ ತೆಗೆಯುವುದು.

(iii) ಬಂಡವಾಳ ಹಿಂತೆಗೆದಿದ್ದರೆ–ಹಿಂತೆಗೆದ ದಿನಾಂಕದಿಂದ ವರ್ಷದ ಕೊನೆ ದಿನಾಂಕದ ಅವಧಿವರೆಗೆ ಬಡ್ಡಿಯನ್ನು ಕಂಡುಹಿಡಿದು ಬಂದ ಮೊತ್ತದಲ್ಲಿ ಕಳೆದರೆ ಬರುವುದು ಬಂಡವಾಳದ ಮೇಲಿನ ಬಡ್ಡಿ.

ನಿದರ್ಶನ 2:

X ಮತ್ತು Y ಪಾಲುದಾರರಾಗಿದ್ದು, ಅವರ ಬಂಡವಾಳ ಖಾತೆಯು ದಿನಾಂಕ: 1–4–2012ರಂದು ಜಮೆ ಶಿಲ್ಕು ₹ 2,00,000 ಮತ್ತು ₹ 1,00,000 ಆಗಿರುತ್ತದೆ X ಎಂಬುವವರು ದಿನಾಂಕ: 1–7–2012ಕ್ಕೆ ₹ 50,000 ಮತ್ತು Y ಎಂಬುವವರು ₹ 80000 ಹೆಚ್ಚುವರಿಯಾಗಿ ತೊಡಗಿಸಿರುತ್ತಾರೆ. Y ಎಂಬುವವರು ದಿನಾಂಕ: 1–1–2013ಕ್ಕೆ ₹ 30,000 ತಮ್ಮ ಬಂಡವಾಳದಲ್ಲಿ ಹಿಂತೆಗೆದಿರುತ್ತಾರೆ, ಬಂಡವಾಳದ ಮೇಲೆ ವಾರ್ಷಿಕ ಶೆ. 10 ರಂತೆ ಬಡ್ಡಿ ಕೊಡಲಾಗುತ್ತದೆ.

2012–13ನೇ ವರ್ಷಕ್ಕೆ ಅಂತ್ಯವಾಗುವ ಹಾಗೆ X ಮತ್ತು Y ಪಾಲುದಾರರ ಬಂಡವಾಳದ ಮೇಲೆ ಬಡ್ಡಿ ತೆಗೆಯಿರಿ.

ನಿರೂಪಣೆ :

ಬಂಡವಾಳದ ಮೇಲೆ ಬಡ್ಡಿ ತೆಗೆಯುವುದು ₹

X ನ ಬಂಡವಾಳದ ಮೇಲಿನ ಬಡ್ಡಿ

i) ಪ್ರಾರಂಭದ ಬಂಡವಾಳದ ಮೇಲಿನ ಬಡ್ಡಿ

2,00,000 x 10 ÷ 100 = 20,000.

ii) ಹೆಚ್ಚುವರಿ ಬಂಡವಾಳದ ಮೇಲೆ ಬಡ್ಡಿ

$\left(\frac{50,000 \times 10}{100} \times \frac{9}{12}\right)$ = 3,750

X ನ ಬಂಡವಾಳದ ಮೇಲಿನ ಬಡ್ಡಿ ₹ 23,750

Yನ ಬಂಡವಾಳದ ಮೇಲಿನ ಬಡ್ಡಿ

i) ಪ್ರಾರಂಭದ ಬಂಡವಾಳದ ಮೇಲಿನ ಬಡ್ಡಿ

$\frac{1,00,000 \times 10}{100}$ = 10,000

ii) ಹೆಚ್ಚುವರಿ ಬಂಡವಾಳದ ಮೇಲೆ ಬಡ್ಡಿ

$\frac{80,000 \times 10}{100} \times \frac{9}{12}$ = 6,000

16,000

ಕಡಿತ: ಹಿಂತೆಗೆದ ಬಂಡವಾಳ ಮೇಲಿನ ಬಡ್ಡಿ

$\frac{30,000 \times 10}{100} \times \frac{3}{12}$ 750

Yನ ಬಂಡವಾಳದ ಮೇಲಿನ ಬಡ್ಡಿ ₹ 15,250

ವರ್ಷಾರಂಭದ ಬಂಡವಾಳ ಕಂಡುಹಿಡಿಯುವಿಕೆ:

ಬಂಡವಾಳದ ಮೇಲೆ ಬಡ್ಡಿಯನ್ನು ಪ್ರಾರಂಭದ ಬಂಡವಾಳದ ಮೇಲೆ ಕಂಡು ಹಿಡಿಯಲಾಗುತ್ತದೆ. ಕೆಲವು ವೇಳೆ ಪ್ರಾರಂಭದ ಬಂಡವಾಳವನ್ನು ಕೊಟ್ಟಿರುವುದಿಲ್ಲ ಆಗ ಪ್ರಾರಂಭದ ಬಂಡವಾಳದ ಮೇಲೆ ಬಡ್ಡಿ ಕಂಡು ಹಿಡಿಯಬೇಕಾಗಿರುವುದರಿಂದ ಪ್ರಾರಂಭದ ಬಂಡವಾಳವನ್ನು ಕಂಡುಹಿಡಿಯಬೇಕಾಗುತ್ತದೆ.

ಪ್ರಾರಂಭದ ಬಂಡವಾಳ ಕಂಡು ಹಿಡಿಯುವ ವಿಧಾನವೆಂದರೆ, ವರ್ಷಂತ್ಯಾದ ಬಂಡವಾಳದಲ್ಲಿ ಬಂಡವಾಳ ಖಾತೆಗೆ ಯಾವ ಹೊಂದಾಣಿಕೆಗಳನ್ನು ಜಮ ಮಾಡಿರುತ್ತೇವೆಯೊ ಅವುಗಳನ್ನು ಕಳೆಯುವುದು ಮತ್ತು ಯಾವ ಹೊಂದಾಣಿಕೆಗಳನ್ನು ಖರ್ಚು ಮಾಡಿರುತ್ತೇವೆಯೋ ಅವುಗಳನ್ನು ಕೂಡಿಸುವುದು.

ಪ್ರಾರಂಭದ ಬಂಡವಾಳ ಕಂಡು ಹಿಡಿಯುವ ಪಟ್ಟಿ

ವಿವರಗಳು	₹	₹
ವರ್ಷಾಂತ್ಯದ ಬಂಡವಾಳ		xxxxx
ಕಡಿತ: 1) ಹೆಚ್ಚುವರಿ ಬಂಡವಾಳ (ವರ್ಷದಲ್ಲಿ ಹೊಸದಾಗಿ ತೊಡಗಿಸಿದ ಬಂಡವಾಳ)	xxxxx	
2) ಪಾಲುದಾರರ ಸಂಬಳ ಅಥವಾ ದಲ್ಲಾಳಿ	xxxxx	
3) ನಿವ್ವಳ ಲಾಭದಲ್ಲಿ ಪಾಲು	xxxxx	xxxxx
		xxxxx
ಅಧಿಕ: 1) ಸ್ವಂತ ವೆಚ್ಚಕ್ಕೆ ಹಿಂತೆಗೆದ ಬಂಡವಾಳ	xxxxx	
2) ಸ್ವಂತ ವೆಚ್ಚದ ಮೇಲಿನ ಬಡ್ಡಿ	xxxxx	
3) ನಿವ್ವಳ ನಷ್ಟದಲ್ಲಿ ಪಾಲು	xxxxx	xxxxx
ವರ್ಷಾರಂಭದ ಬಂಡವಾಳ		**xxxxx**

ನಿದರ್ಶನ 3:

ಕೃಷ್ಣ ಮತ್ತು ಮೂರ್ತಿ ಪಾಲುದಾರಿಕೆಯ ವ್ಯವಹಾರ ನಡೆಸುತ್ತಿದ್ದು, ಅವರ ಬಂಡವಾಳವು ವರ್ಷಾಂತ್ಯ ದಿನಾಂಕ: 31–3–2013ಕ್ಕೆ ಕ್ರಮವಾಗಿ ₹ 80,000 ಮತ್ತು ₹ 60,000ಗಳಾದರೆ 2012–13ರ ವರ್ಷದ ಅವಧಿಯಲ್ಲಿ ಕೃಷ್ಣ ತನ್ನ ಸ್ವಂತಕ್ಕಾಗಿ ₹ 10,000 ಮತ್ತು ಮೂರ್ತಿ ₹ 50,000 ಗಳನ್ನು ಹಿಂತೆಗೆದುಕೊಂಡಿರುತ್ತಾರೆ.

ಮೂರ್ತಿಯ ಸಂಬಳ ₹ 5,000 ಹಾಗೂ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 5ರಂತೆ ಕೊಡುವುದಕ್ಕಿಂತ ಮೊದಲು 2012–13ರ ವರ್ಷಾಂತ್ಯದಲ್ಲಿ ಅವರ ಲಾಭ ₹ 40,000/– ಆಗಿರುತ್ತದೆ. ಬಂಡವಾಳದ ಮೇಲಿನ ಬಡ್ಡಿಯನ್ನು ಶೆ. 5ರಂತೆ ಮಾರ್ಚ್ 2013ರ ವಾರ್ಷಂತ್ಯಕ್ಕೆ ಕಂಡುಹಿಡಿಯಿರಿ.

ನಿರೂಪಣೆ :

ಬಂಡವಾಳದ ಮೇಲಿನ ಬಡ್ಡಿಯನ್ನು ಪಾಲುದಾರರ ವರ್ಷಾರಂಭದ ಬಂಡವಾಳದ ಮೇಲೆ ತೆಗೆಯಬೇಕಾಗಿರುತ್ತದೆ. ಆದರೆ ಈ ಲೆಕ್ಕದಲ್ಲಿ ವರ್ಷಾಂತ್ಯದ ಬಂಡವಾಳ ಕೊಟ್ಟಿರುತ್ತಾರೆ. ಅದ್ದರಿಂದ ಮೊದಲು ನಾವು ಪಾಲುದಾರರ ವರ್ಷಾರಂಬದ ಬಂಡವಾಳವನ್ನು ಕಂಡುಹಿಡಿಯಬೇಕಾಗುತ್ತದೆ.

ಕೆಳಗಿನ ಪಟ್ಟಿಯು ಕೃಷ್ಣ ಮತ್ತು ಮೂರ್ತಿಯ ವರ್ಷಾರಂಬದ ಬಂಡವಾಳ ತೋರಿಸುತ್ತದೆ.

ವಿವರಗಳು	ಕೃಷ್ಣ ₹	ಮೂರ್ತಿ ₹
ವಷಾಂತ್ಯದ ಬಂಡವಾಳ	80,000	60,000
ಅಧಿಕ : ವರ್ಷದ ಅವಧಿಯಲ್ಲಿ ಹಿಂತೆಗೆದ ಬಂಡವಾಳ	10,000	5,000
	90,000	65,000
ವಜಾ : ಬಂಡವಾಳದ ಮೇಲಿನ ಬಡ್ಡಿ ಕೊಡುವ ಮೊದಲು ಲಾಭದ ಪಾಲು	20,000	20,000
	70,000	45,000
ವಜಾ : ಮೂರ್ತಿಯ ಸಂಬಳ	-	5,000
ವರ್ಷಾರಂಭದ ಬಂಡವಾಳ	**70,000**	**40,000**

ಬಂಡವಾಳದ ಮೇಲಿನ ಬಡ್ಡಿ ತೆಗೆಯುವುದು :

ಕೃಷ್ಣ : ವಾರ್ಷಿಕ ಶೇ. 5ರಂತೆ ₹ 70,000 ಗಳಿಗೆ ಒಂದು ವರ್ಷದ ಅವಧಿಗೆ

$$\frac{70,000 \times 5}{100} = ₹\ 3,500$$

ಮೂರ್ತಿ : ವಾರ್ಷಿಕ ಶೇ. 5ರಂತೆ ₹ 40,000 ಗಳಿಗೆ ಒಂದು ವರ್ಷದ ಅವಧಿಗೆ

$$\frac{40,000 \times 5}{100} = ₹\ 2,000$$

ಬಂಡವಾಳದ ಮೇಲಿನ ಬಡ್ಡಿಯನ್ನು ನಿರ್ವಹಿಸುವ ವಿಧಾನ:

ಬಂಡವಾಳದ ಮೇಲಿನ ಬಡ್ಡಿಯನ್ನು ಸಾಕಷ್ಟು ಲಾಭ ಬಂದಾಗ ಮಾತ್ರ ಪಾಲುದಾರರಿಗೆ ಕೊಡುವುದರಿಂದ ಇದನ್ನು ಲಾಭ ನಷ್ಟದ ಖಾತೆಗೆ ಖರ್ಚು ಹಾಕುವುದಿಲ್ಲ. ಬದಲಿಗೆ ಲಾಭ ನಷ್ಟದ ಹಂಚಿಕೆ ಖಾತೆಗೆ ಖರ್ಚು ಹಾಕಲಾಗುವುದು.

ಅವಶ್ಯಕವಾದ ರೋಜ್ ಕೀರ್ದಿ ಈ ರೀತಿ ಇರುತ್ತದೆ.

(1) ಪಾಲುದಾರರ ಬಂಡವಾಳದ ಮೇಲಿನ ಬಡ್ಡಿ ತೆಗೆಯುವುದು

ಬಂಡವಾಳದ ಮೇಲೆ ಬಡ್ಡಿ ಖಾತೆಗೆ ಖರ್ಚು ಪಾಲುದಾರರ ಬಂಡವಾಳ ಖಾತೆಗೆ ಜಮಾ

(2) ಲಾಭ ನಷ್ಟದ ಹಂಚಿಕೆ ಖಾತೆಗೆ ವರ್ಗಾಹಿಸಿದಾಗ

ಲಾಭ ನಷ್ಟದ ಹಂಚಿಕೆ ಖಾತೆಗೆ ಖರ್ಚು ಬಂಡವಾಳದ ಮೇಲಿನ ಬಡ್ಡಿ ಖಾತೆಗೆ ಜಮಾ

ಟಿಪ್ಪಣಿ: ಸ್ಥಿರ ಬಂಡವಾಳ ಪದ್ಧತಿಯಲ್ಲಿ ಬಂಡವಾಳದ ಮೇಲಿನ ಬಡ್ಡಿಯನ್ನು ಪಾಲುದಾರರ ಚಾಲ್ತಿ ಖಾತೆಗೆ ಜಮಾ ಮಾಡಲಾಗುತ್ತದೆ.

2.5.2. ಪಾಲುದಾರರ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿಯ ಖಾತೆ

ಪಾಲುಗಾರರ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಆಕರಿಸಲು ಪಾಲುಗಾರರಲ್ಲಿ ಒಪ್ಪಂದವಾಗಿರಬಹುದು. ಒಪ್ಪಂದವಿಲ್ಲದಿದ್ದರೆ ಪಾಲುದಾರರು ಸ್ವಂತ ವೆಚ್ಚದ ಮೇಲಿನ ಬಡ್ಡಿ ಆಕರಿಸಲು ಬರುವುದಿಲ್ಲವೆಂದು ನಾವು ಈಗಾಗಲೇ ತಿಳಿದುಕೊಂಡಿರುತ್ತೇವೆ. ಒಪ್ಪಂದ ಪತ್ರದಲ್ಲಿ ಸ್ಪಷ್ಟವಾಗಿರಬೇಕು ಮತ್ತು ದರ ನಿಗದಿಪಡಿಸರಬೇಕು. ಹಾಗಿದ್ದರೆ ಮಾತ್ರ ಬಡ್ಡಿಯನ್ನು ನಿಗಧಿಪಡಿಸಿದ ದರದಲ್ಲಿ ಆಕರಿಸಲಾಗುತ್ತದೆ.

ಸ್ವಂತ ವೆಚ್ಚದ ಮೇಲಿನ ಬಡ್ಡಿಯು ಸಂಸ್ಥೆಗೆ ಆದಾಯವಾದ್ದರಿಂದ ಮತ್ತು ಪಾಲುದಾರರಿಂದ ಆಕರಿಸುವುದರಿಂದ ಇದನ್ನು ಪಲುದಾರರ ಬಂಡವಾಳ ಖಾತೆಗೆ ಖರ್ಚು ಹಾಕಲಾಗುತ್ತದೆ ಮತ್ತು ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮಾ ಮಾಡಲಾಗುವುದು.

ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ತೆಗೆಯುವ ವಿವಿಧ ಪದ್ದತಿಗಳು.

ಈ ಕೆಳಗಿನ ಪದ್ಧತಿಗಳನ್ನು ಸಾಮಾನ್ಯವಾಗಿ ಅಳವಡಿಸಿಕೊಳ್ಳಲಾಗುತ್ತದೆ.

1) ನೇರ ಪದ್ಧತಿ ಅಥವಾ ನಿರ್ದಿಷ್ಟ ಪದ್ಧತಿ

ಈ ಪದ್ಧತಿಯಲ್ಲಿ ಬಡ್ಡಿಯನ್ನು ಪಾಲುದಾರನು ಪ್ರತಿ ಬಾರಿ ಹಿಂತೆಗೆದ ಬಂಡವಾಳದ ಮೇಲೆ ಹಿಂತೆಗೆದ ದಿನಾಂಕದಿಂದ ವರ್ಷದ ಕೊನೆಯವರೆಗಿನ ಅವಧಿಯವರೆಗೆ ಬೇರೆ ಬೇರೆಯಾಗಿ ಪ್ರತಿ ಹಿಂತೆಗೆತಕ್ಕೆ ನಿರ್ದಿಷ್ಟ ದರದಲ್ಲಿ ಕಂಡು ಹಿಡಿಯಲಾಗುತ್ತದೆ.

$$\textbf{ಬಡ್ಡಿ} = \text{ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆತ} \times \frac{\text{ದರ}}{100} \times \frac{\text{ಅವಧಿ ಬಾಕಿ ತಿಂಗಳುಗಳು}}{12 \text{ ತಿಂಗಳು}}$$

ಕೇವಲ ಒಂದು ಅಥವಾ ಕೆಲವು ಬಾರಿ ಹಿಂತೆಗೆದಿದ್ದರೆ ಮಾತ್ರ ಈ ಪದ್ದತಿಯು ಬಹಳ ಸೂಕ್ತವಾದ ಪದ್ದತಿಯಾಗಿರುತ್ತದೆ.

ನಿದರ್ಶನ 4 :

ಕುಮಾರ ಎಂಬ ಪಾಲುದಾರನು ಪಾಲುದಾರಿಕೆಯಿಂದ ₹ 6,000 ಗಳನ್ನು ದಿನಾಂಕ: 1–6–2012 ರಂದು ಹಿಂತೆಗೆದಿರುತ್ತಾನೆ. ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿಯ ದರ ವಾರ್ಷಿಕ ಶೇ. 8 ರಂತೆ ನಿಗದಿಪಡಿಸಲಾಗಿದೆ. ಸಂಸ್ಥೆಯ ವಾರ್ಷಿಕ ಲೆಕ್ಕ ಪತ್ರಗಳು ಮಾರ್ಚ್ 2013ಕ್ಕೆ ಕೊನೆಗೊಳ್ಳುತ್ತವೆ.

ವಾರ್ಷಿಕ ಅವಧಿಯ ವರ್ಷಾಂತ್ಯಕ್ಕೆ ಕುಮಾರನ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿಯನ್ನು ಕಂಡುಹಿಡಿಯಿರಿ.

ನಿರೂಪಣೆ :

ಕುಮಾರನ ಸ್ವಂತ ವೆಚ್ಚಕ್ಕೆ ಹಿಂತೆದ ಹಣದ ಮೇಲಿನ ಬಡ್ಡಿ ಕಂಡು ಹಿಡಿಯುವುದು

$$\textbf{ಬಡ್ಡಿ} = \text{ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆತ} \times \frac{\text{ದರ}}{100} \times \frac{\text{ಅವಧಿ ಬಾಕಿ (ತಿಂಗಳುಗಳು)}}{12 \text{ ತಿಂಗಳು}}$$

$$₹\ 6{,}000 \times \frac{8}{100} \times \frac{10}{12} \quad ₹\ 400$$

ಕುಮಾರನ ಸ್ವಂತ ವೆಚ್ಚದ ಮೇಲಿನ ಬಡ್ಡಿ ₹ 400

ನಿದರ್ಶನ 5:

ಶೇಖರ ಎಂಬ ಪಾಲುದಾರನು ವ್ಯಾಪಾರದಿಂದ ಸ್ವಂತ ವೆಚ್ಚಕ್ಕಾಗಿ ಹಿಂತೆಗೆದ ಹಣ ಈ ಕೆಳಗಿನಂತಿದೆ :

(i) 1ನೇ ಜುಲೈ 2013 ₹ 5000

(ii) 1ನೇ ನವ್ಹೆಂಬರ್ 2013 ₹ 3000

(iii) 1ನೇ ಜನೇವರಿ 2014 ₹ 2000

ವಾರ್ಷಿಕ ಶೇ. 6 ರಂತೆ ಶೇಖರ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿ ಕಂಡುಹಿಡಿಯಿರಿ.

ನಿರೂಪಣೆ :

ಶೇಖರ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿ ಕಂಡು ಹಿಡಿಯುವುದು

ಸ್ವಂತ ವೆಚ್ಚದ ಮೇಲಿನ ಬಡ್ಡಿ = ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆತ $\times \frac{\text{ದರ}}{100} \times \frac{\text{ಅವಧಿ ಬಾಕಿ ತಿಂಗಳುಗಳು}}{\text{12 ತಿಂಗಳು}}$

(i) $5,000 \times \frac{6}{100} \times \frac{9}{12}$ ₹ 225

(ii) $3,000 \times \frac{6}{100} \times \frac{5}{12}$ ₹ 75

(iii) $2,000 \times \frac{6}{100} \times \frac{3}{12}$ ₹ 30

ಶೇಖರ್‌ನ ಸ್ವಂತ ವೆಚ್ಚದ ಮೇಲಿನ ಒಟ್ಟು ಬಡ್ಡಿ = ₹ **330**.

ನಿದರ್ಶನ 6:

ಸಚಿನ್ ಎಂಬ ಪಾಲುದಾರನು ಈ ಕೆಳಗಿನಂತೆ ಸ್ವಂತ ವೆಚ್ಚಕ್ಕಾಗಿ ಬಂಡವಾಳ ಹಿಂತೆಗೆದಿರುತ್ತಾನೆ.

(i) 31ನೇ ಜುಲೈ 2013 ₹ 4,500

(ii) 30ನೇ ಸೆಪ್ಟೆಂಬರ್ 2013 ₹ 3,600

(iii) 31ನೇ ಡಿಸೆಂಬರ್ 2013 ₹ 2,400

ಸಂಸ್ಥೆಯ ವಾರ್ಷಿಕ ಲೆಕ್ಕ ಪತ್ರಗಳು ಪ್ರತಿ ವರ್ಷ 31ನೇ ಮಾರ್ಚ್‌ಗೆ ಕೊನೆಗೊಳ್ಳುತ್ತವೆ. ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ವಾರ್ಷಿಕ ಶೇ 10 ರಂತೆ ಆಕರಿಸಲಾಗುತ್ತದೆ.

ಸಚಿನ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಕಂಡುಹಿಡಿಯಿರಿ.

ನಿರೂಪಣೆ :

ಸಚಿನ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ತೆಗೆಯುವುದು:

(i) = ₹ $4,500 \times \frac{10}{100} \times \frac{8}{12}$ = ₹ 300

(ii) $= ₹\ 3,600 \times \frac{10}{100} \times \frac{6}{12} = ₹\ 180$

(iii) $= ₹\ 2,400 \times \frac{10}{100} \times \frac{3}{12} = ₹\ 60$

ಸಚಿನ್ ಸ್ವಂತ ವೆಚ್ಚದ ಮೇಲಿನ ಒಟ್ಟು ಬಡ್ಡಿ ₹ = 300 + 180 + 60 = ₹ 540

1) ಒಟ್ಟು ಕೂಡು ಪದ್ಧತಿ / ಗುಣಲಬ್ಧ ಪದ್ದತಿ :

ಈ ಪದ್ದತಿಯಲ್ಲಿ ಪ್ರತಿ ಹಿಂತೆಗತದ ಮೊತ್ತಕ್ಕೆ ಗುಣಲಬ್ಧವನ್ನು ಕಂಡುಹಿಡಿದು, (ಸ್ವಂತ ವೆಚ್ಚದ ಹಿಂತೆಗೆತ ಮತ್ತು ಬಾಕಿ ಅವಧಿ (ತಿಂಗಳುಗಳ) ಗುಣಿಸಿದರೆ ಗುಣಲಬ್ಧ ಬರುವುದು) ಎಲ್ಲಾ ಗುಣಲಬ್ದವನ್ನು ಕೂಡಿಸಿದರೆ ಬರುವುದೇ ಒಟ್ಟು ಕೂಡು ಮೊತ್ತ ಅಥವಾ ಒಟ್ಟು ಗುಣಲಬ್ದ. ಒಟ್ಟು ಗುಣಲಬ್ಧಕ್ಕೆ ಒಂದು ನಿರ್ದಿಷ್ಟ ದರದಲ್ಲಿ ಒಂದು ಯೂನಿಟ್ ಅಂದರೆ ಒಂದು ತಿಂಗಳ ಅವಧಿಗೆ ಬಡ್ಡಿಯನ್ನು ಕಂಡು ಹಿಡಿಯುವರು.

ಹಂತ-1 ಗುಣ ಲಬ್ದ ಕಂಡುಹಿಡಿಯುವುದು

ಗುಣ ಲಬ್ಧ = ಪ್ರತಿ ಸ್ವಂತ ವೆಚ್ಚದ ಹಿಂತೆಗೆತ x ಬಾಕಿ ಅವಧಿ ತಿಂಗಳುಗಳು

ಹಂತ-2 ಸ್ವಂತ ವೆಚ್ಚದ ಮೇಲೆ ಬಡ್ಡಿ ಕಂಡುಹಿಡಿಯುವುದು

ಬಡ್ಡಿ = ಒಟ್ಟು ಕೂಡು ಮೊತ್ತ ಅಥವಾ ಗುಣ ಲಬ್ಧ ಮೊತ್ತ x ದರ x 1/12

ಈ ಕೆಳಗಿನ ನಿಬಂಧನೆಗಳನ್ನು ಪೂರೈಸಿದ್ದಲ್ಲಿ ಮಾತ್ರ ಗುಣಲಬ್ಧ ಪದ್ಧತಿಯನ್ನು ಬಳಸಲಾಗುತ್ತದೆ.

(a) ಹಣ ಹಿಂತೆಗೆತ ಎರಡು ಅಥವಾ ಅದಕ್ಕಿಂತ ಹೆಚ್ಚಿಗೆ ಇದ್ದಾಗ

(b) ಹಣ ಹಿಂತೆಗೆತದ ದಿನಾಂಕಗಳು ವಿಭಿನ್ನವಾಗಿದ್ದಾಗ

(c) ಹಣ ಹಿಂತೆಗೆತದ ಮೇಲೆ ಬಡ್ಡಿ ದರ ನೀಡಿದಾಗ

(d) ವಿವಿಧ ದಿನಾಂಕಗಳಲ್ಲಿ ಮಾಡಿದ ಹಿಂತೆಗೆತದ ಮೊತ್ತ ಒಂದೇ ರೀತಿ ಇದ್ದಾಗ ಅಥವಾ ಇಲ್ಲದಿದ್ದಾಗ

(e) ಎರಡು ಹಿಂತೆಗೆತಗಳ ಮಧ್ಯಂತರ ಅವಧಿ ಒಂದೇ ರೀತಿ ಇದ್ದಾಗ ಮತ್ತು ಇಲ್ಲದಿದ್ದಾಗ

ನಿದರ್ಶನ 7:

ಪ್ರಸನ್ನ ಮತ್ತು ಪ್ರವೀಣ ಪಾಲುದಾರರಾಗಿದ್ದು 2013–2014ರ ವರ್ಷಾಂತ್ಯಕ್ಕೆ ಪ್ರಸನ್ನ ಅವರ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಹಣ ಈ ಕೆಳಗಿನಂತಿದೆ.

₹4000	01-06-2013
₹6000	30-09-2013
₹2000	30-11-2013
₹3000	01-01-2014

ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇಕಡ 8% ರಂತೆ ಮಾರ್ಚ 2014ರ ವರ್ಷಾಂತ್ಯಕ್ಕೆ ಗುಣಲಬ್ಧ ಪದ್ಧತಿಯಲ್ಲಿ ಪ್ರಸನ್ನರವರ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಪ್ರಸನ್ನರವರ ಸ್ವಂತವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ಧ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
01-06-2013	4000	10	40,000
30-09-2013	6000	6	36,000
30-11-2013	2000	4	8,000
01-01-2014	3000	3	9,000
		ಒಟ್ಟು ಗುಣಲಬ್ಧ	**93,000**

ಒಟ್ಟು ಗುಣಲಬ್ಧ 92000ಕ್ಕೆ ಒಂದು ತಿಂಗಳಿಗೆ, ಶೇ. 8% ರಂತೆ ಬಡ್ಡಿಯು,

ಹಣ ಹಿಂತೆಗೆತದ ಮೇಲಿನ ಬಡ್ಡಿ = ಒಟ್ಟು ಗುಣ ಲಬ್ಧ × ದರ × $\frac{1}{12}$

$= 93,000 \times \frac{8}{100} \times \frac{1}{12}$ ₹ 620

ಪ್ರಸನ್ನ ಅವರ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹ 620.

ನಿದರ್ಶನ 8:

ಪೂಜಾ ಮತ್ತು ಪವಿತ್ರ ಪಾಲುಗಾರರಾಗಿದ್ದು ಲಾಭ ಮತ್ತು ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದರು, ಪಾಲುಗಾರಿಕೆ ಒಪ್ಪಂದದ ಪ್ರಕಾರ, ಪಾಲುದಾರರ ಸ್ವಂತ ವೆಚ್ಚಕ್ಕೆ ವಾರ್ಷಿಕ ಶೇ. 10 ರಂತೆ ಬಡ್ಡಿಯನ್ನು ಕೊಡಬೇಕು. ಪಾಲುದಾರರ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಹಣ ಈ ರೀತಿ ಇದೆ.

ಪೂಜಾ	1ನೇ ಮೇ	₹	3000
	31ನೇ ಜುಲೈ	₹	2500
	1ನೇ ಜನೇವರಿ	₹	3500
ಪವಿತ್ರ	1ನೇ ಜೂನ್	₹	3500
	1ನೇ ಆಗಸ್ಟ್	₹	4000
	1ನೇ ಡಿಸೆಂಬರ್	₹	3800

ವಾರ್ಷಿಕ ಲೆಕ್ಕ ಪತ್ರಗಳು 31–03–2014ಕ್ಕೆ ಕೊನೆಗೊಳ್ಳುತ್ತವೆ.

ಪಾಲುದಾರರ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಕಂಡುಹಿಡಿಯಿರಿ.

ನಿರೂಪಣೆ :

ಪೂಜಾಳ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
1ನೇ ಮೇ	3,000	11	33,000
1ನೇ ಜುಲೈ	2,500	8	20,000
1ನೇ ಜನವರಿ	3,500	3	10,500
	9,000	ಒಟ್ಟು ಗುಣಲಬ್ಧ	**63,500**

ಹಣ ಹಿಂತೆಗೆದ ಮೇಲಿನ ಬಡ್ಡಿ = ಒಟ್ಟು ಗುಣ ಲಬ್ದ × ದರ $\times \frac{1}{12}$

$$= 63,500 \times \frac{10}{100} \times \frac{1}{12} = ₹\ 529.17$$

ಪೂಜಾಳ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆತದ ಮೇಲಿನ ಬಡ್ಡಿ ₹ 529.17.

ಪವಿತ್ರಳ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
1ನೇ ಜೂನ್	3,500	10	35,000
1ನೇ ಆಗಸ್ಟ್	4,000	8	32,000
1ನೇ ಡಿಸೆಂಬರ್	3,800	4	15,200
		ಒಟ್ಟು ಗುಣಲಬ್ಧ	**82,200**

ಹಣ ಹಿಂತೆಗೆತದ ಮೇಲಿನ ಬಡ್ಡಿ = ಒಟ್ಟು ಗುಣ ಲಬ್ದ × ದರ × $\frac{1}{12}$

$$= 82,200 \times \frac{10}{100} \times \frac{1}{12}\ ₹\ 685$$

ಪವಿತ್ರಳ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹ 685.

ನಿದರ್ಶನ 9:

ರಮೇಶ್ ಮತ್ತು ರಾಕೇಶ್ ಪಾಲುದಾರರು 3:2 ರ ಪ್ರಮಾಣದಲ್ಲಿ ಲಾಭ ನಷ್ಟವನ್ನು ಹಂಚಿಕೊಳ್ಳುತ್ತಿದ್ದಾರೆ. ರಮೇಶನು ಪ್ರತಿ ತಿಂಗಳು ಒಂದನೇ ದಿನಾಂಕದಂದು ನಿಯಮಿತವಾಗಿ ₹ 800 ಗಳನ್ನು ತನ್ನ ಸ್ವಂತ ವೆಚ್ಚಕ್ಕೆ ಹಿಂತೆಗೆಯುತ್ತಿದ್ದಾನೆ. 30ನೇ ಸೆಪ್ಟೆಂಬರ್ 2013ರ ಅರ್ಧ ವರ್ಷಾಂತ್ಯಕ್ಕೆ ಕೊನೆಗೊಳ್ಳುವ ಅವಧಿಗೆ ರಮೇಶನ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 8 ರಂತೆ ಗುಣಲಬ್ಧ ಪದ್ಧತಿಯಲ್ಲಿ ಬಡ್ಡಿ ಲೆಕ್ಕ ಹಾಕಿರಿ.

ನಿರೂಪಣೆ :

ರಮೇಶನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ಧ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
1-4-2013	800	6	4,800
1-5-2013	800	5	4,000
1-6-2013	800	4	3,200
1-7-2013	800	3	2,400
1-8-2013	800	2	1,600
1-9-2013	800	1	800
	4800	ಒಟ್ಟು ಗುಣಲಬ್ಧ	**16,800**

$$\text{ಹಣ ಹಿಂತೆಗೆತದ ಮೇಲಿನ ಬಡ್ಡಿ} = \text{ಒಟ್ಟು ಗುಣಲಬ್ಧ} \times \text{ದರ} \times \frac{1}{12}$$

$$= 16,800 \times \frac{8}{100} \times \frac{1}{12} \quad ₹\ 112$$

ರಮೇಶ್‌ನ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹ 112.

ನಿದರ್ಶನ 10:

ಸುರೇಶನು ಪಾಲುದಾರನಾಗಿದ್ದು ದಿನಾಂಕ: 30–06–2013ಕ್ಕೆ ಕೊನೆಗೊಳ್ಳುವ 6 ತಿಂಗಳಲ್ಲಿ ಪ್ರತಿ ತಿಂಗಳಿನ ಕೊನೆಗೆ ₹ 1500 ರಂತೆ ನಿಯಮಿತವಾಗಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆಯುತ್ತಿದ್ದಾನೆ. ಅವನ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ.8% ರಂತೆ ಗುಣಲಬ್ಧ ಪದ್ಧತಿಯಲ್ಲಿ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಸುರೇಶನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ಧ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
30-4-2013	1,500	5	7,500
31-5-2013	1,500	4	6,000
30-6-2013	1,500	3	4,500
31-7-2013	1,500	2	3,000
31-8-2013	1,500	1	1,500
30-9-2013	1,500	0	0
	9,000	ಒಟ್ಟು ಗುಣಲಬ್ಧ	**22,500**

ಸ್ವಂತ ವೆಚ್ಚದ ಮೇಲಿನ ಬಡ್ಡಿ = ಒಟ್ಟು ಗುಣಲಬ್ದ × ದರ × $\frac{1}{12}$

$= 22{,}500 \times \frac{8}{100} \times \frac{1}{12}$ ₹ 150

ಸುರೇಶ್‌ನ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹ 150.

ನಿದರ್ಶನ 11:

ನಾದ ಮತ್ತು ಪ್ರಕಾಶ ಸಮಪ್ರಮಾಣ ಲಾಭದ ಪಾಲುದಾರರಾಗಿದ್ದು ದಿನಾಂಕ: 30–06–2013ಕ್ಕೆ ಕೊನೆಗೊಳ್ಳುವ 6 ತಿಂಗಳಿಗೆ ನಾದರವರು ಪ್ರತಿ ತಿಂಗಳಿನ ಮಧ್ಯದಲ್ಲಿ ₹ 500 ರಂತೆ ನಿಯಮಿತವಾಗಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆಯುತ್ತಿದ್ದಾರೆ. ಅವರ ಸ್ವಂತ ವೆಚ್ಚದ ಮೇಲೆ ವರ್ಷಕ್ಕೆ ಶೇ.6 ರಂತೆ ಗುಣಲಬ್ಧ ಪದ್ಧತಿಯಲ್ಲಿ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ನಾದನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
15-04-2013	500	5½ = 5.5	2750
15-05-2013	500	4½ = 4.5	2250
15-06-2013	500	3½ = 3.5	1750
15-07-2013	500	2½ = 2.5	1250
15-08-2013	500	1½ = 1.5	750
15-09-2013	500	½ = 0.5	250
	3,000	ಒಟ್ಟು ಗುಣಲಬ್ಧ	**9,000**

ಹಣ ಹಿಂತೆಗೆತದ ಮೇಲಿನ ಬಡ್ಡಿ = ಒಟ್ಟು ಗುಣಲಬ್ದ × ದರ × $\frac{1}{12}$

$= 9{,}000 \times \frac{6}{100} \times \frac{1}{12}$ ₹45

ನಾದಾರವರ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹45

ನಿದರ್ಶನ 12:

ಪವನ್ ತನ್ನ ಸ್ವಂತ ವೆಚ್ಚಕ್ಕಾಗಿ ಹಿಂತೆಗೆದ ಮೊತ್ತ ಈ ರೀತಿ ಇದೆ

₹ 2,000 ದಿನಾಂಕ: 30-06-2013 ರಂದು

₹ 6,000 ದಿನಾಂಕ: 01-11-2013 ರಂದು

₹ 4,000 ದಿನಾಂಕ: 31-12-2013 ರಂದು

₹ 2,000 ದಿನಾಂಕ: 01-02-2014 ರಂದು

ಪವನ್ ಇವರ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 12ರಂತೆ ಗುಣಲಬ್ದ ಪದ್ಧತಿಯಲ್ಲಿ ಮಾರ್ಚ್ 31, 2014ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಬಡ್ಡಿ ಲೆಕ್ಕ ಮಾಡಿರಿ:

ನಿರೂಪಣೆ :

ಪವನ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
30-06-2013	2000	9	18,000
01-11-2013	6000	5	30,000
31-12-2013	4000	3	12,000
01-02-2014	2000	2	4,000
	14,000	ಒಟ್ಟು ಗುಣಲಬ್ಧ	**64,000**

ಬಡ್ಡಿ = ಒಟ್ಟು ಗುಣಲಬ್ದ × ದರ × $\frac{1}{12}$

$= 64,000 \times \frac{12}{100} \times \frac{1}{12}$ ₹640

ಪವನ್‌ರ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹ 640.

ನಿದರ್ಶನ 13:

ಹಾಲಮ್ಮ ಮತ್ತು ಬಸಮ್ಮ 3:2 ಪ್ರಮಾಣದಲ್ಲಿ ಲಾಭ ಮತ್ತು ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ದಿನಾಂಕ: 31–03–2014ರ ವರ್ಷಾಂತ್ಯಕ್ಕೆ ಕೊನೆಗೊಳ್ಳುವ ಬಸಮ್ಮ ₹ 800 ಗಳನ್ನು ನಿಯಮಿತವಾಗಿ ಪ್ರತಿ ತಿಂಗಳಿನ ಮಧ್ಯದಲ್ಲಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆದಿದ್ದಾರೆ. ಅವರ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇಕಡ 12 ಶೇ ರಂತೆ ಬಡ್ಡಿ ಲೆಕ್ಕ ಮಾಡಿರಿ.

ಬಸಮ್ಮನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
15-04-2013	800	11½ = 11.5	9200
15-5-2013	800	10½ = 10.5	8400
15-06-2013	800	9½ = 9.5	7600
15-07-2013	800	8½ = 8.5	6800
15-08-2013	800	7½ = 7.5	6000
15-09-2013	800	6½ = 6.5	5200
15-10-2013	800	5½ = 5.5	4400
15-11-2013	800	4½ = 4.5	3600
15-12-2013	800	3½ = 3.5	2800
15-01-2014	800	2½ = 2.5	2000
15-02-2014	800	1½ = 1.5	1200
15-03-2014	800	½ = 0.5	400
	9,600	ಒಟ್ಟು ಗುಣಲಬ್ಧ	**57,600**

ಬಡ್ಡಿ = ಒಟ್ಟು ಗುಣಲಬ್ಧ × ದರ × $\frac{1}{12}$

$$= 57,600 \times \frac{12}{100} \times \frac{1}{12} \text{ ₹ } 576$$

ಬಸಮ್ಮ ಸ್ವಂತ ವೆಚ್ಚಕ್ಕಾಗಿ ಹಿಂತೆಗೆತದ ಮೇಲಿನ ಬಡ್ಡಿ ₹ 576.

ನಿದರ್ಶನ 14:

ಪ್ರಜ್ವಲ್ ಪಾಲುದಾರನು ಪ್ರತಿ ತಿಂಗಳು ನಿಯಮಿತವಾಗಿ ತಿಂಗಳಿನ ಕೊನೆಯಲ್ಲಿ ₹1000ಗಳನ್ನು ಹಿಂತೆಗೆಯುತ್ತಿದ್ದಾನೆ. ಪ್ರಜ್ವಲ್‌ರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ವಾರ್ಷಿಕ ಶೇ. 6 ರಂತೆ ಗುಣಲಬ್ಧ ಪದ್ಧತಿಯಲ್ಲಿ ಬಡ್ಡಿಯನ್ನು ಲೆಕ್ಕ ಹಾಕಿ.

ನಿರೂಪಣೆ :

ಪ್ರಜ್ವಲ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ಧ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
30-04-2013	1000	11	11,000
31-05-2013	1000	10	10,000
30-06-2013	1000	9	9,000
31-07-2013	1000	8	8,000
31-08-2013	1000	7	7,000
30-09-2013	1000	6	6,000
31-10-2013	1000	5	5,000
30-11-2013	1000	4	4,000
31-12-2013	1000	3	3,000
31-01-2014	1000	2	2,000
28-02-2014	1000	1	1,000
31-03-2014	1000	0	000
		ಒಟ್ಟು ಗುಣಲಬ್ಧ	**66,000**

ಬಡ್ಡಿ = ಒಟ್ಟು ಗುಣಲಬ್ಧ × ದರ × $\frac{1}{12}$

$$= 66,000 \times \frac{6}{100} \times \frac{1}{12} \text{ ₹ } 330$$

ಪ್ರಜ್ವಲ್‌ರವರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ₹ 330.

ನಿದರ್ಶನ 15:

ರಾಜು ಮತ್ತು ಕುಮಾರ್ ಪಾಲುದಾರರಾಗಿದ್ದು 31ನೇ ಮಾರ್ಚ್ 2014ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ಕುಮಾರ್ ಇವರು ಪ್ರತಿ ತಿಂಗಳ ಮೊದಲನೇ ದಿನಾಂಕದಂದು ವರ್ಷಂತ್ಯಾದವರೆಗೆ ತನ್ನ ಸ್ವಂತ ವೆಚ್ಚಕ್ಕಾಗಿ ₹ 1,500 ಗಳನ್ನು ಹಿಂತೆಗೆದಿರುತ್ತಾನೆ. ವಾರ್ಷಿಕ ಶೇ.6 ರಂತೆ ಗುಣಲಬ್ಧ ಪದ್ಧತಿಯಲ್ಲಿ ಕುಮಾರನ ಸ್ವಂತ ವೆಚ್ಚದ ಮೇಲಿನ ಬಡ್ಡಿ ಲೆಕ್ಕ ಹಾಕಿ.

ನಿರೂಪಣೆ :

ಕುಮಾರನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
01-04-2013	1500	12	18,000
01-05-2013	1500	11	16,500
01-06-2013	1500	10	15,000
01-07-2013	1500	9	13,500
01-08-2013	1500	8	12,000
01-09-2013	1500	7	10,500
01-10-2013	1500	6	9,000
01-11-2013	1500	5	7,500
01-12-2013	1500	4	6,000
01-01-2014	1500	3	4,500
01-02-2014	1500	2	3,000
01-03-2014	1500	1	1,500
		ಒಟ್ಟು ಗುಣಲಬ್ಧ	**1,17,000**

ಬಡ್ಡಿ = ಒಟ್ಟು ಗುಣಲಬ್ದ × ದರ × $\frac{1}{12}$ = $1,17,000 \times \frac{6}{100} \times \frac{1}{12}$ = ₹ 585

ಕುಮಾರ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ₹ 585.

ನಿದರ್ಶನ 16:

ಸುರೇಶ್ ಮತ್ತು ಮಹೇಶ್ ಪಾಲುದಾರರುಗಳಿದ್ದು, 31ನೇ ಮಾರ್ಚ್ 2014ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ಸುರೇಶ್‌ನು ಪ್ರತಿ **ಎರಡು** ತಿಂಗಳಿಗೊಮ್ಮೆ ತಿಂಗಳ ಕೊನೆಯ ದಿನಾಂಕದಂದು ₹ 2000ಗಳನ್ನು ತನ್ನ ಸ್ವಂತ ವೆಚ್ಚಕ್ಕಾಗಿ ಹಿಂತೆಗೆದಿರುತ್ತಾನೆ. ವಾರ್ಷಿಕ ಶೇ. 8 ರಂತೆ ಸುರೇಶನ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ 31ನೇ ಮಾರ್ಚ್ 2014ಕ್ಕೆ ಅಂತ್ಯಗೊಳ್ಳುವ ಅವಧಿಗೆ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಸುರೇಶನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
31-05-2013	2000	10	20,000
31-07-2013	2000	8	16,000
30-09-2013	2000	6	12,000
30-11-2013	2000	4	8,000
31-01-2014	2000	2	4,000
31-03-2014	2000	0	0
	12,000	ಒಟ್ಟು ಗುಣಲಬ್ಧ	**60,000**

ಬಡ್ಡಿ = ಒಟ್ಟು ಗುಣಲಬ್ದ × ದರ × $\frac{1}{12}$ = $60,000 \times \frac{8}{100} \times \frac{1}{12}$ ₹ 400

ಸುರೇಶ್ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ₹ 400.

ನಿದರ್ಶನ 17:

ಭರತ್ ಮತ್ತು ಶರತ್ ಪಾಲುದಾರರು ಲಾಭ ನಷ್ಟವನ್ನು 4:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದು, ಭರತ್‌ನು ₹ 3,000 ಗಳನ್ನು ತನ್ನ ಸ್ವಂತ ವೆಚ್ಚಕ್ಕಾಗಿ ಪ್ರತಿ **ಎರಡು** ತಿಂಗಳಿಗೊಮ್ಮೆ ತಿಂಗಳ ಮೊದಲ ದಿನಾಂಕದಂದು ಹಿಂತೆಗೆಯುತ್ತಿದ್ದಾನೆ. ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 6% ರಂತೆ ಗುಣಲಬ್ಧ ಪದ್ಧತಿಯಲ್ಲಿ ಭರತ್ ಇವರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕಿರಿ.

ನಿರೂಪಣೆ :

ಕುಮಾರನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
01-04-2013	3000	12	36000
01-06-2013	3000	10	30000
01-08-2013	3000	8	24000
01-10-2013	3000	6	18000
01-12-2013	3000	4	12000
01-02-2014	3000	2	6000
	18,000	ಒಟ್ಟು ಗುಣಲಬ್ಧ	**1,26,000**

ಬಡ್ಡಿ = ಒಟ್ಟು ಗುಣಲಬ್ದ × ದರ × $\frac{1}{12}$ = $1,26,000 \times \frac{6}{100} \times \frac{1}{12}$ ₹ 630

ಭರತ್‌ನ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ₹ 630.

ನಿದರ್ಶನ 18.

ಉಮಾ ಮತ್ತು ಸುಮ 3:2ರ ಪ್ರಮಾಣದಲ್ಲಿ ಲಾಭ ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದು, ಉಮಾಳು ₹ 3,000 ಗಳನ್ನು ತ್ರೈಮಾಸಿಕವಾಗಿ ತಿಂಗಳ ಮೊದಲ ದಿನಾಂಕದಂದು ಸ್ವಂತ ವೆಚ್ಚಕ್ಕಾಗಿ ಹಿಂತೆಗೆಯುತ್ತಿದ್ದಾಳೆ.

ಉಮಾಳ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
01-04-2013	3000	12	36,000
01-07-2013	3000	9	27,000
01-10-2013	3000	6	18,000
01-01-2014	3000	3	9,000
	12,000	ಒಟ್ಟು ಗುಣಲಬ್ಧ	**90,000**

$$\text{ಬಡ್ಡಿ} = \text{ಒಟ್ಟು ಗುಣಲಬ್ದ} \times \text{ದರ} \times \frac{1}{12}$$

$$= 90,000 \times \frac{8}{100} \times \frac{1}{12} = ₹\ 600$$

ಉಮಾಳಾ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ₹ 600.

ನಿದರ್ಶನ 19.

ಬೀರೇಶ್ ಮತ್ತು ಪವನ್ ಪಾಲುದಾರರು ಲಾಭ ನಷ್ಟವನ್ನು 2:1ರ ಪ್ರಮಾಣದಲ್ಲಿ ಹಂಚಿಕೊಳ್ಳುವರು ಬೀರೇಶ್ ಇವರು ₹ 2000 ಗಳನ್ನು ಪ್ರತಿ ತ್ರೈಮಾಸಿಕಕ್ಕೊಂದು ಸಾರಿ ತಿಂಗಳ ಕೊನೆಗೆ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆಯುತ್ತಿದ್ದಾರೆ. 31ನೇ ಮಾರ್ಚ್ 2014ಕ್ಕೆ ಕೊನೆಗೊಳ್ಳುವ ಹಾಗೆ ಬೀರೇಶ್ ಇವರ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ವಾರ್ಷಿಕ ಶೇ 12ರಂತೆ ಕಂಡುಹಿಡಿಯಿರಿ.

ನಿರೂಪಣೆ :

ಬೀರೇಶ್‌ನ ಸ್ವಂತ ವೆಚ್ಚದ ಮೇಲಿನ ಬಡ್ಡಿ ತೆಗೆಯುವಿಕೆ

ಹಿಂತೆಗೆದ ದಿನಾಂಕ	ಹಿಂತೆಗೆದ ಮೊತ್ತ ₹	ಬಾಕಿ ಅವಧಿ (ತಿಂಗಳುಗಳಲ್ಲಿ)	ಗುಣಲಬ್ದ (ಬಾಕಿ ತಿಂಗಳು x ಹಿಂತೆಗೆದ ಮೊತ್ತ)
30-06-2013	2000	9	18,000
30-09-2013	2000	6	12,000
31-12-2013	2000	3	6,000
31-03-2014	2000	0	0
	8,000	**ಒಟ್ಟು ಗುಣಲಬ್ಧ**	**36,000**

$$\text{ಬಡ್ಡಿ} = \text{ಒಟ್ಟು ಗುಣಲಬ್ಧ} \times \text{ದರ} \times \frac{1}{12}$$

$$= 36,000 \times \frac{12}{100} \times \frac{1}{12} = ₹\ 360$$

ಬೀರೇಶ್‌ನ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ₹ 360.

3) ಸರಾಸರಿ ಅವಧಿ ಪದ್ದತಿ ಅಥವಾ ಕಿರು ಪದ್ಧತಿ

ಸರಾಸರಿ ಅವಧಿ ಪದ್ದತಿಯಲ್ಲಿ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ನಿರ್ದಿಷ್ಟ ದರದಲ್ಲಿ ಒಟ್ಟು ಸ್ವಂತ ವೆಚ್ಚ ಹಿಂತೆಗೆದ ಮೊತ್ತದ ಮೇಲೆ, **ದೀರ್ಘಾವಧಿ ಬಾಕಿ ತಿಂಗಳು ಮತ್ತು ಅಲ್ಪಾವಧಿ ಬಾಕಿ ತಿಂಗಳುಗಳ ಸರಾಸರಿ ಅವಧಿಗೆ** ಬಡ್ಡಿಯನ್ನು ಕಂಡು ಹಿಡಿಯಲಾಗುವುದು.

ಈ ಪದ್ದತಿಯಲ್ಲಿ, ಸ್ವಂತ ವೆಚ್ಚ ಹಿಂತೆಗೆತದ ಅವಧಿ ಒಂದೇ ರೀತಿಯಾಗಿರಬೇಕು ಹಾಗೂ ನಿಯಮಿತವಾಗಿ ಹಿಂತೆಗೆದ ಮೊತ್ತವು ಒಂದೇ ರೀತಿಯಲ್ಲಿರಬೇಕು ದೀರ್ಘಾವಧಿ (ಅಂದರೆ ಮೊದಲ ತಿಂಗಳ ಸ್ವಂತ ವೆಚ್ಚ ಬಾಕಿ ಅವಧಿ) ಹಾಗೂ ಕಡಿಮೆ ಅವಧಿ (ಅಂದರೆ ಕೊನೆಯ ತಿಂಗಳ ಹಿಂತೆಗೆತದ ಬಾಕಿ ಅವಧಿ) ಗಳಲ್ಲಿ ಸೇರಿರುವ ವರ್ಷಾವಧಿಯ ಎಲ್ಲಾ ಸ್ವಂತ ವೆಚ್ಚ ಹಿಂತೆಗೆತದ ಒಟ್ಟು ಮೊತ್ತಕ್ಕೆ ಸರಸಾರಿ ಅವಧಿಗೆ ನಿರ್ದಿಷ್ಟ ದರದಲ್ಲಿ ಬಡ್ಡಿಯನ್ನು ಕಂಡುಹಿಡಿಯಲಾಗುತ್ತದೆ.

ನಿಯಮಿತ ಹಿಂತೆಗೆತವು ತಿಂಗಳಿನ ಮೊದಲನೇ ದಿನಾಂಕ, ಮಧ್ಯದ ದಿನಾಂಕ ಅಥವಾ ಕೊನೆಯ ದಿನಾಂಕವಾಗಿರಬಹುದು.

ಬಡ್ಡಿ ಲೆಕ್ಕ ಹಾಕುವ ಹಂತಗಳು

ಹಂತ: I. ಮೊದಲು ಸರಾಸರಿ ಅವಧಿ ತೆಗೆಯಬೇಕು.

$$\text{ಸರಾಸರಿ ಅವಧಿ} = \frac{\text{ದೀರ್ಘಾವಧಿ ಬಾಕಿ (ಉದ್ದದ ಮಹೋನ್ನತ ಅವಧಿ) + ಕಡಿಮೆ ಅವಧಿ ಬಾಕಿ}}{2}$$

ಹಂತ: II. ಒಟ್ಟು ಸ್ವಂತ ವೆಚ್ಚ ಲೆಕ್ಕ ಮಾಡಿಕೊಳ್ಳಬೇಕು

ಹಂತ: III. ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ವೆಚ್ಚ × ಸರಾಸರಿ ಅವಧಿ × ದರ

ಈ ಕೆಳಗಿನ ಪಟ್ಟಿಯ ಸಹಾಯದಿಂದ ಸರಾಸರಿ ಅವಧಿಯನ್ನು ನಿಯಮಿತ ಅವಧಿಗೆ ಸಂಬಂಧಿಸಿದಂತೆ ಕಂಡುಹಿಡಿಯಬಹುದು.

ಸ್ವಂತ ವೆಚ್ಚ	ವರ್ಷಾಂತ್ಯಕ್ಕೆ ಸರಾಸರಿ ಅವಧಿ	ಅರ್ಧ ವರ್ಷಾಂತ್ಯಕ್ಕೆ ಸರಾಸರಿ ಅವಧಿ
ತಿಂಗಳಿನ ಮೊದಲ ದಿನಾಂಕವಾಗಿದ್ದರೆ	$\left(\frac{12+1}{2}\right)=\frac{13}{2}$ = **6½ ತಿಂಗಳು**	$\left(\frac{6+1}{2}\right)=\frac{7}{2}$ = **3½ ತಿಂಗಳು**
ತಿಂಗಳಿನ ಮಧ್ಯದ ದಿನಾಂಕವಾಗಿದ್ದರೆ	$\left(\frac{11\frac{1}{2}+\frac{1}{2}}{2}\right)=\frac{12}{2}$ = **6 ತಿಂಗಳು**	$\left(\frac{5\frac{1}{2}+\frac{1}{2}}{2}\right)=\frac{6}{2}$ = **3 ತಿಂಗಳು**
ತಿಂಗಳ ಕೊನೆಯ ದಿನಾಂಕವಾಗಿದ್ದರೆ	$\left(\frac{11+0}{2}\right)=\frac{11}{2}$ = **5½ ತಿಂಗಳು**	$\left(\frac{5+0}{2}\right)=\frac{5}{2}$ = **2½ ತಿಂಗಳು**

ನಿಯಮಿತ ಮೊತ್ತವನ್ನು ಸ್ವಂತ ವೆಚ್ಚಕ್ಕಾಗಿ ತ್ರೈಮಾಸಿಕವಾಗಿ ಹಿಂತೆಗೆದಾಗ ಸರಸರಿ ಅವಧಿ ಲೆಕ್ಕ ಹಾಕುವುದು.

ನಿರ್ದಿಷ್ಟ ಮೊತ್ತವನ್ನು ನಿಯಮಿತವಾಗಿ ತ್ರೈಮಾಸಿಕಕ್ಕೊಂದರಂತೆ ಹಿಂತೆಗೆದಾಗ ಬಡ್ಡಿ ಲೆಕ್ಕ ಹಾಕುವಾಗ ಒಟ್ಟು ಸಾರಸರಿ ಅವಧಿಯನ್ನು ಲೆಕ್ಕ ಹಾಕುವಾಗ ತಿಂಗಳಿನ ಮೊದಲು ತಾರೀಖಿನಂದು ಹಿಂತೆಗೆದಿದ್ದಾನೊ ಅಥವಾ ತಿಂಗಳಿನ ಕೊನೆಯ ದಿನಾಂಕದಂದು ಹಿಂತೆಗೆದಿದ್ದಾನೋ ಎಂಬುದನ್ನು ಪರಿಗಣಿಸಬೇಕು.

ಒಂದು ವೇಳೆ, ತ್ರೈಮಾಸಿಕ ತಿಂಗಳಿನ ಮೊದಲ ದಿನಾಂಕದಂದು ಹಿಂತೆಗೆದಿದ್ದರೆ ಒಟ್ಟು 7½ ತಿಂಗಳಿಗೆ ಬಡ್ಡಿ ಲೆಕ್ಕ ಹಾಕಬೇಕು. ತ್ರೈಮಾಸಿಕ ತಿಂಗಳಿನ ಕೊನೆಯ ದಿನಾಂಕದಂದು ಹಿಂತೆಗೆದಿದ್ದರೆ 4½ ತಿಂಗಳಿಗೆ ಬಡ್ಡಿ ಲೆಕ್ಕ ಹಾಕಬೇಕಾಗುತ್ತದೆ.

i) ತ್ರೈಮಾಸಿಕ ತಿಂಗಳಿನ ಮೊದಲ ದಿನಾಂಕಕ್ಕೆ ಹಿಂತೆಗೆದಾಗ

$$\text{ಸರಾಸರಿ ಒಟ್ಟು ಅವಧಿ} = \frac{12 \text{ ತಿಂಗಳು} + 3 \text{ ತಿಂಗಳು}}{2} = \frac{15}{2} = 7\frac{1}{2} \text{ತಿಂಗಳು}$$

ii) ತ್ರೈಮಾಸಿಕ ತಿಂಗಳಿನ ಕೊನೆಯ ದಿನಾಂಕದಂದು ಹಿಂತೆಗೆದಾಗ

$$\text{ಸರಾಸರಿ ಅವಧಿ} = \frac{9+0}{2} = 4\frac{1}{2} \text{ ತಿಂಗಳು}$$

ಸರಿಸರಿ ಅವಧಿ ಪದ್ಧತಿಯಲ್ಲಿ ಕೆಲವು ನಿದರ್ಶನಗಳನ್ನು ತೆಗೆದುಕೊಳ್ಳೋಣ

ನಿದರ್ಶನ 20:

ರವಿಶಂಕರ ಮತ್ತು ಉದಯಶಂಕರ ಲಾಭ ನಷ್ಟವನ್ನು ಸಮನಾಗಿ ಹಂಚಿಕೊಳ್ಳುವ ಪಾಲುದಾರರು ದಿನಾಂಕ: 30–9–2013ಕ್ಕೆ ಕೊನೆಗೊಳ್ಳುವ 6 ತಿಂಗಳಲ್ಲಿ ರವಿಶಂಕರನು ಪ್ರತಿ ತಿಂಗಳಿನ ಕೊನೆಗೆ ₹ 2,000 ರಂತೆ ನಿಯಮಿತವಾಗಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ತೆಗೆದಿದ್ದಾನೆ. ಅವನ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 10 ರಂತೆ ಸರಾಸರಿ ಪದ್ದತಿಯಲ್ಲಿ (Average period) ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ರವಿಶಂಕರನ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

$$\text{ಸರಾಸರಿ ಅವಧಿ} = \frac{\text{ದೀರ್ಘಾವಧಿ ಬಾಕಿ} + \text{ಕಡಿಮೆ ಅವಧಿ ಬಾಕಿ}}{2}$$

$$= \frac{5+0}{2} = \frac{5}{2} = 2\frac{1}{2} \text{ ತಿಂಗಳು}$$

ಹಂತ - II : ಒಟ್ಟು ಸ್ವಂತ ವೆಚ್ಚದ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 2000 ದಂತೆ 6 ತಿಂಗಳಿಗೆ – 6 = 2000 × 6 = ₹12,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ವೆಚ್ಚ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$$= ₹12,000 \times \frac{5}{2} \times \frac{1}{2} \times \frac{10}{100} = ₹\ 250$$

ರವಿಶಂಕರನ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 250/–

ನಿದರ್ಶನ 21:

ದೀಪ್ತಿ ಮತ್ತು ಶ್ರೇಯ 2:1 ರ ಪ್ರಮಾಣದಲ್ಲಿ ಲಾಭ ಮತ್ತು ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ದಿನಾಂಕ: 30–9–2013ಕ್ಕೆ ಕೊನೆಗೊಳ್ಳುವ 6 ತಿಂಗಳಲ್ಲಿ ಶ್ರೇಯಾಳು ಪ್ರತಿ ತಿಂಗಳಿನ ಮೊದಲನೇ ದಿನಾಂಕದಂದು ₹ 1,000ರಂತೆ ನಿಯಮಿತವಾಗಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆದಿದ್ದಾಳೆ ಅವಳ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 8 ರಂತೆ ಸರಾಸರಿ ಪದ್ದತಿಯಲ್ಲಿ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಶ್ರೇಯಳ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

ಸರಾಸರಿ ಅವಧಿ = $\frac{\text{ದೀರ್ಘಾವಧಿ ಬಾಕಿ + ಕಡಿಮೆ ಅವಧಿ ಬಾಕಿ}}{2}$

$= \frac{6+1}{2} = \frac{7}{2} = 3\frac{1}{2}$ ತಿಂಗಳು

ಹಂತ - II : ಒಟ್ಟು ಸ್ವಂತ ವೆಚ್ಚ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 1000 ದಂತೆ – 6 ತಿಂಗಳಿಗೆ = ₹1000 × 6 = ₹ 6,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$= ₹6,000 \times \frac{7}{2} \times \frac{1}{12} \times \frac{8}{100}$ = ₹ 140

ಶ್ರೇಯಳ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 140/–

ನಿದರ್ಶನ 22:

ಸಾವಿತ್ರಿ ಮತ್ತು ಭಾರತಿ ಲಾಭ ನಷ್ಟವನ್ನು ಸಮನಾಗಿ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. 31–3–2014ರ ವರ್ಷಾಂತ್ಯಕ್ಕೆ ಕೊನೆಗೊಳ್ಳುವ ಅವಧಿಗೆ ಸಾವಿತ್ರಿಯು ಪ್ರತಿ ತಿಂಗಳಿನ ಮೊದಲನೆ ದಿನಾಂಕದಂದು ₹ 1500 ರಂತೆ ನಿಯಮಿತವಾಗಿ ಮತ್ತು ಭಾರತಿಯು ₹ 2000ರಂತೆ ತಿಂಗಳಿನ ಕೊನೆಗೆ ನಿಯಮಿತವಾಗಿ ಹಣ ಹಿಂತೆಗೆದಿರುತ್ತಾರೆ.

ಪಾಲುದಾರರ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 12 ರಂತೆ ಸರಾಸರಿ ಅವಧಿಯ ಪದ್ಧತಿಯಲ್ಲಿ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಸಾವಿತ್ರಿಯ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು :

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

ಸರಾಸರಿ ಅವಧಿ = $\frac{\text{ದೀರ್ಘಾವಧಿ ಬಾಕಿ + ಕಡಿಮೆ ಅವಧಿ ಬಾಕಿ}}{2}$

$= \frac{12+1}{2} = \frac{13}{2} = 6\frac{1}{2}$ ತಿಂಗಳು

ಹಂತ - II : ಒಟ್ಟು ಸ್ವಂತ ವೆಚ್ಚದ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 1500 ದಂತೆ – 12 ತಿಂಗಳಿಗೆ = ₹1500 × 12 = ₹ 18,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$= ₹\ 18,000 \times \frac{12}{100} \times \frac{13}{2} \times \frac{1}{12} =$ ₹ 1,170

ಸಾವಿತ್ರಿಯ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 1,170/–

ಭಾರತಿಯ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

$$\text{ಸರಾಸರಿ ಅವಧಿ} = \frac{\text{ದೀರ್ಘಾವಧಿ ಬಾಕಿ + ಕಡಿಮೆ ಅವಧಿ ಬಾಕಿ}}{2}$$

$$= \frac{11+0}{2} = \frac{11}{2} = 5\frac{1}{2} \text{ ತಿಂಗಳು}$$

ಹಂತ - II : ಒಟ್ಟು ಸ್ವಂತ ವೆಚ್ಚದ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 2000 ರಂತೆ – 12 ತಿಂಗಳಿಗೆ = ₹ 2000 × 12 = ₹ 24,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$$= ₹24,000 \times \frac{12}{100} \times \frac{11}{2} \times \frac{1}{12} = ₹\ 1,320$$

ಭಾರತಿಯ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 1,320/–

ನಿದರ್ಶನ 23:

ಪಾಲುದಾರರಾದ ಮಿಸ್ಟರ್ ಆಕಾಶ್‌ರವರು ದಿನಾಂಕ: 30–6–2013ಕ್ಕೆ ಕೊನೆಗೊಳ್ಳುವ 6 ತಿಂಗಳಲ್ಲಿ ತನ್ನ ಸ್ವಂತ ವೆಚ್ಚಕ್ಕಾಗಿ ನಿಯಮಿತವಾಗಿ ಪ್ರತಿ ತಿಂಗಳು 15ನೇ ತಾರೀಖಿನಂದು ಹಣವನ್ನು ಹಿಂತೆಗೆದಿರುತ್ತಾನೆ ಅವನ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 6 ರಂತೆ ಸರಾಸರಿ ಪದ್ಧತಿಯಲ್ಲಿ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಆಕಾಶ್‌ನ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

$$\text{ಸರಾಸರಿ ಅವಧಿ} = \frac{\text{ದೀರ್ಘಾವಧಿ ಬಾಕಿ + ಕಡಿಮೆ ಅವಧಿ ಬಾಕಿ}}{2}$$

$$= 5\frac{1}{2} + \frac{1}{2} = \frac{6}{2} = 3 \text{ ತಿಂಗಳು}$$

ಹಂತ - II : ಒಟ್ಟು ಸ್ವಂತ ವೆಚ್ಚದ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 3000 ರಂತೆ – 3 ತಿಂಗಳಿಗೆ = ₹ 3,000 × 6 = ₹ 18,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$$= ₹18,000 \times \frac{6}{100} \times \frac{3}{12} = ₹\ 270$$

ಆಕಾಶ್‌ನ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 270/–

ನಿದರ್ಶನ 24:

ಅಜೀತ್ ಮತ್ತು ಭರತ್ ಲಾಭ ನಷ್ಟವನ್ನು 1:2 ರ ಪ್ರಮಾಣದಲ್ಲಿ ಹಂಚಿಕೊಳ್ಳುವ ಪಾಲುದಾರರಾಗಿದ್ದು, ಅಜೀತ್ ಪ್ರತಿ ತ್ರೈಮಾಸಿಕಕ್ಕೆ ₹ 2,500 ಗಳನ್ನು ತ್ರೈಮಾಸಿಕ ಮೊದಲ ದಿನಾಂಕದಂದು ಸ್ವಂತ ವೆಚ್ಚಕ್ಕಾಗಿ ಹಿಂತೆಗಿದಿದ್ದಾನೆ. 31 ಮಾರ್ಚ್ 2012ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ವಾರ್ಷಿಕ ಶೇಕಡ 8 ರಂತೆ ಸರಾಸರಿ ಪದ್ಧತಿಯಲ್ಲಿ ಬಡ್ಡಿ ಲೆಕ್ಕ ಹಾಕಿರಿ.

ನಿರೂಪಣೆ :

ಅಜಿತ್‌ನ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

$$\text{ಸರಾಸರಿ ಅವಧಿ} = \frac{\text{ದೀರ್ಘಾವಧಿ ಬಾಕಿ + ಕಡಿಮೆ ಅವಧಿ ಬಾಕಿ}}{2}$$

$$= \frac{12+3}{2} + \frac{15}{2} = 7\frac{1}{2} \text{ ತಿಂಗಳು}$$

ಹಂತ - II : ಒಟ್ಟು ಸ್ವಂತ ವೆಚ್ಚದ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 2,500 ರಂತೆ – 4 ತಿಂಗಳಿಗೆ = ₹ 2,500 × 4 = ₹ 10,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$$₹\ 10,000 \times \frac{15}{2} \times \frac{1}{12} \times \frac{8}{100} = ₹\ 500$$

ಅಜೀತ್‌ನ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 500/–

ನಿದರ್ಶನ 25:

ಲಖಿತ ಮತ್ತು ಚೈತ್ರ ಲಾಭ ನಷ್ಟವನ್ನು ಸಮ ಪ್ರಮಾಣದಲ್ಲಿ ಹಂಚಿಕೊಳ್ಳುವ ಪಾಲುದಾರರು ಚೈತ್ರರವರು ಪ್ರತಿ ತ್ರೈಮಾಸಿಕ ತಿಂಗಳಿನ ಕೊನೆಯ ದಿನಾಂಕದಂದು ₹ 5000 ಗಳನ್ನು ತನ್ನ ಸ್ವಂತ ವೆಚ್ಚಕ್ಕಾಗಿ ಹಿಂತೆಗೆಯುತ್ತಿದ್ದಾರೆ, 31ನೇ ಮಾರ್ಚ್ 2013ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ವಾರ್ಷಿಕ ಶೇ. 10 ರಂತೆ ಚೈತ್ರರವರ ಸ್ವಂತ ವೆಚ್ಚದ ಮೇಲೆ ಸರಾಸರಿ ಪದ್ದತಿಯಲ್ಲಿ ಬಡ್ಡಿ ಲೆಕ್ಕ ಹಾಕಿರಿ.

ನಿರೂಪಣೆ :

ಚೈತ್ರರವರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ಹಂತ - I: ಸರಾಸರಿ ಅವಧಿ ಲೆಕ್ಕ ಹಾಕುವುದು.

$$\text{ಸರಾಸರಿ ಅವಧಿ} = \frac{\text{ದೀರ್ಘಾವಧಿ ಬಾಕಿ + ಕಡಿಮೆ ಅವಧಿ ಬಾಕಿ}}{2}$$

$$= \frac{9+0}{2} = 4\frac{1}{2} \text{ ತಿಂಗಳು}$$

ಹಂತ - II : ಒಟ್ಟು ಸ್ವಂತ ವೆಚ್ಚದ ಹಿಂತೆಗೆತದ ಮೊತ್ತ

ತಿಂಗಳಿಗೆ ₹ 5000 ರಂತೆ – 4 ತಿಂಗಳಿಗೆ = ₹ 5000 × 4 = ₹ 20,000

ಹಂತ - III : ಬಡ್ಡಿ ಲೆಕ್ಕ ಹಾಕುವುದು.

ಬಡ್ಡಿ = ಒಟ್ಟು ಸ್ವಂತ ಹಿಂತೆಗೆತದ ಮೊತ್ತ × ಸರಸರಿ ಅವಧಿ × ದರ

$$= ₹\ 20,000 \times \frac{9}{2} \times \frac{1}{12} \times \frac{10}{100} = ₹\ 750$$

ಚೈತ್ರರವರ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 750/–

ಸ್ವಂತ ವೆಚ್ಚದ ಹಿಂತೆಗೆತದ ದಿನಾಂಕವನ್ನು ನಿರ್ದಿಷ್ಟವಾಗಿ ಕೊಟ್ಟಿರದಿದ್ದರೆ.

ಸ್ವಂತ ವೆಚ್ಚ ಹಿಂತೆಗೆತದ ಮೊತ್ತವನ್ನು ಲೆಕ್ಕದಲ್ಲಿ ಕೊಟ್ಟು ದಿನಾಂಕವನ್ನು ನಿರ್ದಿಷ್ಟವಾಗಿ ಕೊಡದೇ ಇದ್ದಲ್ಲಿ ಊಹೆಯ ಆಧಾರದ ಮೇಲೆ ಸಮಾನಾಂತರವಾಗಿ ವರ್ಷಾವಧಿಯಲ್ಲಿ ಹಣ ಹಿಂತೆಗಿದಿರುತ್ತಾನೆ ಎಂದು ಭಾವಿಸಿ ಒಟ್ಟು ಹಿಂತೆಗೆತದ ಮೊತ್ತಕ್ಕೆ ಸರಾಸರಿ ಆಧಾರದ ಮೇಲೆ ವರ್ಷಾವಧಿಗಾದರೆ 6 ತಿಂಗಳಿಗೆ, ಅರ್ಧ ವರ್ಷಾವಧಿಗಾದರೆ – 3 ತಿಂಗಳ ಅವಧಿಗೆ ಲೆಕ್ಕಹಾಕಿ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕುವುದು.

ನಿದರ್ಶನ 26.

ಕಾಗಲ್ಕರ್ ಪಾಲುದಾರರು 31ನೇ ಮಾರ್ಚ್ 2014ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ₹ 28000 ಗಳನ್ನು ತಮ್ಮ ಸ್ವಂತ ವೆಚ್ಚಕ್ಕೆ ಹಿಂತೆಗೆದಿರುತ್ತಾರೆ. ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 8 ರಂತೆ ಬಡ್ಡಿ ಅಕರಿಸಬೇಕು. ಕಾಗಲ್ಕರ್ ಇವರ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಕಂಡುಹಿಡಿಯಿರಿ.

ಉತ್ತರ :

ಈ ಲೆಕ್ಕದಲ್ಲಿ ದಿನಾಂಕವನ್ನು ನಿರ್ದಿಷ್ಠವಾಗಿ ಕೊಟ್ಟಿರದ ಪ್ರಯುಕ್ತ ಸಮನಾಂತರ ಅವಧಿಯ ಅಧಾರದ ಮೇಲೆ ಬಡ್ಡಿಯನ್ನು 6 ತಿಂಗಳಿಗೆ ಲೆಕ್ಕ ಹಾಕಬೇಕು.

ಈ ಪದ್ಧತಿಯಲ್ಲಿ ಸರಾಸರಿ ಅವಧಿಯು

$$\frac{\text{ವಾರ್ಷಿಕ ಅವಧಿ}}{2} = \frac{12}{2} = 6 \text{ ತಿಂಗಳು}$$

ಕಾಗಲ್ಕರ್‌ರವರ ಸ್ವಂತವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿಯು

$$₹28,000 \times \frac{8}{100} \times \frac{6}{12} = ₹1120$$

ಕಾಗಲ್ಕರ್‌ರ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 1,120

ನಿದರ್ಶನ 27:

ಪ್ರಮೋದ್‌ರವರು ಪಾಲುದಾರರಾಗಿದ್ದು 30ನೇ ಸೆಪ್ಟೆಂಬರ್ 2013ರ ಅರ್ಧವರ್ಷಾಂತ್ಯಕ್ಕೆ ₹ 18,000ಗಳನ್ನು ತನ್ನ ಸ್ವಂತ ವೆಚ್ಚಕ್ಕೆ ಹಿಂತೆಗೆದಿರುತ್ತಾರೆ. ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ಆಕರಿಸಿದರೆ ಪ್ರಮೋದರವರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಮಾಡಿರಿ.

ನಿರೂಪಣೆ :

ಈ ಲೆಕ್ಕದಲ್ಲಿ ಪ್ರಮೋದರವರು ಯಾವ ದಿನಾಂಕದಂದು ಹಣ ಸ್ವಂತವೆಚ್ಚಕ್ಕಾಗಿ ಹಿಂತೆಗೆದರು ಎಂಬುದನ್ನು ಕೊಟ್ಟಿರುವುದಿಲ್ಲ ಅದ್ದರಿಂದ ಸರಾಸರಿ ಸಮಾನಾಂತರವಾಗಿ ಹಿಂತೆಗೆದನೆಂದು ಬಾವಿಸಿ 3 ತಿಂಗಳಿಗೆ ಲೆಕ್ಕ ಮಾಡಲಾಗಿದೆ.

ಸರಸಾರಿ ಅವಧಿಯು

$$\frac{\text{ಅರ್ಧ ವರ್ಷಾವಧಿ}}{2} = \frac{6}{2} = 3 \text{ ತಿಂಗಳು}$$

ಬಡ್ಡಿ = ` 18,000 ₹ಗಳಿಗೆ 3 ತಿಂಗಳಿಗೆ ಶೇ. 6 ರಂತೆ

$$= ₹18{,}000 \times \frac{3}{12} \times \frac{6}{100} = ₹\ 270$$

ಪ್ರಮೋದರವರ ವೆಚ್ಚದ ಸ್ವಂತ ಹಿಂತೆಗೆತದ ಮೇಲಿನ ಬಡ್ಡಿ = ₹ 270

ಸ್ವಂತ ವೆಚ್ಚ ಹಿಂತೆಗೆತದ ಮೇಲೆ ರೋಜು ಕಿದಿ (ದಿನವಹಿ) ಬರೆಯುವ ವಿಧಾನ

ಅ) ಸ್ವಂತ ವೆಚ್ಚದ ಮೇಲೆ ಬಡ್ಡಿ ಅಕರಿಸಿದರೆ:

ಪ್ರತಿಯೊಬ್ಬ ಪಾಲುದಾರರ ಬಂಡವಾಳ / ಚಾಲ್ತಿ ಖಾತೆಗೆ ಖರ್ಚು
ಪ್ರತಿಯೊಬ್ಬ ಪಾಲುದಾರರ ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಗೆ ಜಮಾ

ಆ) ಸ್ವಂತ ವೆಚ್ಚದ ಮೇಲೆ ಬಡ್ಡಿಯನ್ನು ವರ್ಗಾಯಿಸಿದರೆ.

ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಗೆ – ಖರ್ಚು
ಲಾಭ ನಷ್ಟದ ಹಂಚಿಕೆಯ ಖಾತೆಗೆ – ಜಮಾ

2.5.3. ಪಾಲುದಾರರ ಮುಂಗಡ ಸಾಲದ ಮೇಲಿನ ಬಡ್ಡಿ

ಸಾಮಾನ್ಯವಾಗಿ ಪಾಲುದಾರಿಕೆ ಸಂಸ್ಥೆಗೆ ಸಾಲ ತೆಗೆದುಕೊಳ್ಳುವ ಸಂದರ್ಭ ಬಂದಲ್ಲಿ ಪಾಲುದಾರರಿಂದ ಪಡೆದುಕೊಳ್ಳುವ ಸಂಪ್ರದಾಯವಿರುತ್ತದೆ. ಸಾಲದ ಮುಂಗಡ ಮತ್ತು ಬಂಡವಾಳ ಬೇರೆ ಬೇರೆಯಾಗಿದ್ದು ಪ್ರತಿಯೊಂದು ಖಾತೆಯನ್ನು ಬೇರೆ ಬೇರೆಯಾಗಿಯೇ ಇಡಲಾಗುತ್ತದೆ. ಬಂಡವಾಳ ಖಾತೆಯಲ್ಲಿ ಸೇರಿಸುವುದಿಲ್ಲ.

ಪಾಲುದಾರರ ಮುಂಗಡ ಸಾಲಕ್ಕೆ ಬಡ್ಡಿಯನ್ನು ನೀಡಬೇಕಾಗುತ್ತದೆ ಮತ್ತು ದರವನ್ನು ಪಾಲುದಾರಿಕೆಯ ಒಪ್ಪಂದ ಪತ್ರದಲ್ಲಿ ನಮೂದಿಸಿರುತ್ತಾರೆ, ಒಂದು ವೇಳೆ ಒಪ್ಪಂದ ಪತ್ರದಲ್ಲಿ ನಮೂದಿಸದೇ ಭಾರತೀಯ ಪಾಲುದಾರಿಕೆ ಕಾಯ್ದೆ. 1932ರ ಪ್ರಕಾರ ಪಾಲುದಾರರ ಮುಂಗಡ ಸಾಲಕ್ಕೆ ವಾರ್ಷಿಕ ಶೇ 6 ರಂತೆ ಬಡ್ಡಿಯನ್ನು ನೀಡಬೇಕಾಗುತ್ತದೆ.

ದಿನವಹಿಯಲ್ಲಿ ಬರೆಯುವ ವಿಧಾನ:

(ಅ) ಮುಂಗಡ ಸಾಲ ಪಡೆದಾಗ

ನಗದು / ಬ್ಯಾಂಕ್ ಖಾತೆಗೆ ಖರ್ಚು
ಪಾಲುದಾರರ ಸಾಲದ ಖಾತೆ ಜಮಾ

(ಆ) ಸಾಲದ ಮೇಲಿನ ಬಡ್ಡಿ ಪಾವತಿಸಿದಾಗ

ಸಾಲದ ಮೇಲಿನ ಬಡ್ಡಿ ಖಾತೆಗೆ – ಖರ್ಚು ನಗದು / ಬ್ಯಾಂಕ್ ಖಾತೆಗೆ ಜಮಾ

(ಇ) ಸಾಲದ ಮೇಲಿನ ಬಡ್ಡಿ ಪಾವತಿಸದೆ ಇದ್ದಾಗ

ಸಾಲದ ಮೇಲಿನ ಬಡ್ಡಿ ಖಾತೆಗೆ – ಖರ್ಚು ಪಾಲುದಾರನ ಸಾಲದ ಖಾತೆಗೆ ಜಮಾ

(ಈ) ಸಾಲದ ಮೇಲಿನ ಬಡ್ಡಿಯನ್ನು ಲಾಭನಷ್ಟ ಹಂಚಿಕೆಯ ಖಾತೆಗೆ ವರ್ಗಾಹಿಸಿದಾಗ

ಲಾಭ ನಷ್ಟದ ಹಂಚಿಕೆಯ ಖಾತೆಗೆ ಖರ್ಚು ಬಂಡವಾಳದ ಮೇಲಿನ ಬಡ್ಡಿ ಖಾತೆಗೆ ಜಮಾ

(ಉ) ಸಾಲವನ್ನು ಮರು ಪಾವತಿಸಿದಾಗ

ಪಾಲುದಾರರ ಸಾಲದ ಖಾತೆಗೆ ಖರ್ಚು ನಗದು / ಬ್ಯಾಂಕ್ ಖಾತೆಗೆ – ಜಮಾ

2.5.4. ಪಾಲುದಾರರ ಸಂಬಳ ಅಥವಾ ದಲ್ಲಾಳಿ

ಅನೇಕ ಸಂದರ್ಭದಲ್ಲಿ ಪಾಲುಗಾರರು ಪಾಲುಗಾರಿಕೆಯ ವ್ಯವಹಾರದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸುವಾಗ ಅವರು ಸಲ್ಲಿಸಿದ ಈ ಹೆಚ್ಚಿನ ಸೇವೆಗಾಗಿ ಅವರಿಗೆ ವಿಶೇಷ ಸಂಭಾವನೆಯನ್ನು ಕೊಡುವುದು ಯೋಗ್ಯವಾಗಿರುತ್ತದೆ. ಇದರ ಬಗ್ಗೆ ಒಪ್ಪಂದದಲ್ಲಿ ನಮೂದಿಸಲಾಗಿರುತ್ತದೆ. ಪಾಲುಗಾರನಿಗೆ ಕೊಡಬೇಕಾದ ಸಂಬಳವನ್ನು ಪಾಲುಗಾರನ ಸಂಬಳ ಖಾತೆ ಖರ್ಚು ಬರೆದು ನಗದು ಖಾತೆಗೆ ಜಮೆ ಬರೆಯಬಹುದು ಅಥವಾ ಅದನ್ನು ಅವನು ತೆಗೆಯದೇ ಇದ್ದರೆ ಬಂಡವಾಳ ಖಾತೆಗೆ ವರ್ಗಾಹಿಸಬಹುದು. ಸಾಮಾನ್ಯವಾಗಿ ಈ ಪದ್ಧತಿಯನ್ನು ಅನುಸರಿಸಲಾಗುತ್ತದೆ.

ಪಾಲುಗಾರರಲ್ಲಿ ಒಪ್ಪಂದವಿರದ ಹೊರತು ಯಾವ ಪಾಲುಗಾರನು ಪಾಲುಗಾರಿಕೆಯ ವ್ಯವಹಾರದಲ್ಲಿ ತಾನು ಸಲ್ಲಿಸಿದ ವಿಶೇಷ ಸೇವೆಗಾಗಿ ಸಂಬಳವನ್ನು ಕೇಳಲು ಅವಕಾಶವಿರುವುದಿಲ್ಲ.

2.5.5. ಲಾಭ ಅಥವಾ ನಷ್ಟವನ್ನು ಹಂಚುವುದು

ಪಾಲುಗಾರರು ಲಾಭ ಅಥವಾ ನಷ್ಟವನ್ನು ಹೇಗೆ ಹಂಚಿಕೊಳ್ಳಬೇಕೆಂಬುದು ಅವರು ಮಾಡಿಕೊಂಡ ಒಪ್ಪಂದವನ್ನು ಅವಲಂಬಿಸಿದೆ. ಪಾಲುದಾರರು ತಮಗೆ ಸರಿ ಕಂಡಂತೆ ಲಾಭ ನಷ್ಟವನ್ನು ಹಂಚಿಕೊಳ್ಳಲು ಸ್ವತಂತ್ರರಾಗಿದ್ದಾರೆ. ಪಾಲುಗಾರರಲ್ಲಿ ಲಾಭವನ್ನು ಹಂಚಿಕೊಳ್ಳುವ ಬಗ್ಗೆ ಒಪ್ಪಂದವಿರದಿದ್ದರೆ ಮಾತ್ರ ಭಾರತೀಯ ಪಾಲುಗಾರಿಕೆಯ ಕಾಯ್ದೆ 1932ರ ಪ್ರಕಾರ ಲಾಭ ನಷ್ಟವನ್ನು ಸಮನಾಗಿ ಹಂಚಿಕೊಳ್ಳಬೇಕಾಗುತ್ತದೆ.

ಲಾಭ ಆಥವಾ ನಷ್ಟವನ್ನಯ ಹಂಚಿಕೊಳ್ಳಲು ರೋಜು ಕಿರ್ದಿ ಈ ಕೆಳಗಿನಂತೆ ಇದೆ.

1) ಲಾಭ ಹಂಚಿಕೆಯ ರೋಜು ಕಿರ್ದಿ

ಎ) ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿಯಾಗಿದ್ದರೆ.

ಲಾಭ ಅಥವಾ ನಷ್ಟದ ಹಂಚಿಕೆಯ ಖಾತೆಗೆ ಖರ್ಚು ಪಾಲುದಾರರ ಬಂಡವಾಳ ಖಾತೆಗೆ ಜಮ

ಬಿ) ಸ್ಥಿರ ಬಂಡವಾಳ ಪದ್ಧತಿಯಾಗಿದ್ದರೆ

ಲಾಭ ಅಥವಾ ನಷ್ಟದ ಹಂಚಿಕೆಯ ಖಾತೆಗೆ ಖರ್ಚು ಪಾಲುದಾರರ ಚಾಲ್ತಿ ಖಾತೆಗೆ ಜಮಾ

2) ನಷ್ಟ ಹಂಚಿಕೆಯ ರೋಜು ಕಿರ್ದಿ

ಅ) ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿ

ಪಾಲುದಾರರ ಬಂಡವಾಳ ಖಾತೆಗೆ ಖರ್ಚು ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮಾ

ಬಿ) ಸ್ಥಿರ ಬಂಡವಾಳ ಪದ್ಧತಿಯಾಗಿದ್ದರೆ

ಪಾಲುದಾರರ ಚಾಲ್ತಿ ಖಾತೆಗೆ ಖರ್ಚು ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮಾ

2.6 ಲಾಭ ನಷ್ಟ ಹಂಚಿಕೆ (ವಿನಿಯೋಗದ ಖಾತೆ) ಖಾತೆ

ಲಾಭ ನಷ್ಟ ಹಂಚಿಕೆಯ (ವಿನಿಯೋಗದ) ಖಾತೆಯು ಲಾಭ ನಷ್ಟ ಖಾತೆಯ ಮುಂದುವರೆದ ಭಾಗವಾಗಿದೆ. ಸಂಸ್ಥೆಯು ಗಳಿಸಿರುವ ಲಾಭವನ್ನು ಪಾಲುದಾರರಲ್ಲಿ ಹೇಗೆ ವಿನಿಯೋಗಿಸಲಾಗದೆ ಎಂಬುದನ್ನು ತೋರಿಸುವುದಕ್ಕಾಗಿ ಇದನ್ನು ತಯಾರಿಸಲಾಗುತ್ತದೆ.

ಪಾಲುದಾರರಿಗೆ ಸಂಬಂದಿಸಿದ ಹೊಂದಾಣಿಕೆಗಳಾದ ಬಂಡವಾಳದ ಮೇಲಿನ ಬಡ್ಡಿ, ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿ, ಪಾಲುದಾರರ ಸಂಬಳ ಇಲ್ಲವೇ ದಲ್ಲಾಳಿ ಮತ್ತು ಅಂತಿಮವಾಗಿ ಪಾಲುದಾರರ ನಿವ್ವಳ ಲಾಭ ಅಥವಾ ನಷ್ಟವನ್ನು ಈ ಖಾತೆಯಲ್ಲಿ ಬರೆಯಲಾಗುತ್ತದೆ. ಒಟ್ಟು ನಿವ್ವಳ ಲಾಭವನ್ನು ಹೇಗೆ ಉಪಯೋಗಿಸಲಾಗಿದೆ ಎಂಬುದನ್ನು ತೋರಿಸುವ ಮುಖ್ಯ ಉದ್ದೇಶದಿಂದ ಈ ಖಾತೆಯನ್ನು ತೆಗೆಯಲಾಗುತ್ತದೆ.

ಈ ಕೆಳಗಿನ ಮಾದರಿಯಂತೆ ಲಾಭ ನಷ್ಟದ ಹಂಚಿಕೆ ಖಾತೆಯನ್ನು ತೆಗೆಯಲಾಗುತ್ತದೆ.

ಲಾಭ ನಷ್ಟದ ಹಂಚಿಕೆ (ವಿನಿಯೋಗ) ಖಾತೆ

ವರ್ಷಾಂತ್ಯಕ್ಕೆ ....

ಖರ್ಚು ಜಮಾ.

ವಿವರಣೆ	₹	ವಿವರಣೆ	₹
ಲಾಭ-ನಷ್ಟ ಖಾತೆಯಿಂದ ಬಂದ ನಷ್ಟ (Net loss b/d)	xxxx	ಲಾಭ-ನಷ್ಟ ಖಾತೆಯಿಂದ ಬಂದ ಲಾಭ (Net profit b/d)	xxxx
ಪಾಲುದಾರರ ಬಂಡವಾಳದ ಮೇಲಿನ ಬಡ್ಡಿ ಖಾತೆಗೆ	xxxx	ಪಾಲುದಾರರ ಸ್ವಂತ ವೆಚ್ಚದ ಹಿಂತೆಗೆತ ಮೇಲಿನ ಬಡ್ಡಿ	xxxx
ಪಾಲುದಾರರ ಸಂಬಳ ಖಾತೆಗೆ	xxxx	ಪಾಲುದಾರರ ಬಂಡವಾಳ / ಚಾಲ್ತಿ ಖಾತೆಗೆ (ನಷ್ಟದ ಹಂಚಿಕೆ)	xxxx
ಪಾಲುದಾರರ ದಲ್ಲಾಳಿ ಖಾತೆಗೆ	xxxx		
ಪಾಲುದಾರರ ಬಂಡವಾಳ/ಚಾಲ್ತಿ ಖಾತೆಗೆ (ಲಾಭದ ಹಂಚಿಕೆ)	xxxx		
	xxxx		xxxx

ಲಾಭ ನಷ್ಟ ಹಂಚಿಕೆ ತಯಾರಿಕೆಗೆ ಸಂಬಂಧಿಸಿದಂತೆ ರೋಜು ಕಿರ್ದಿಯನ್ನು ಈ ಕೆಳಗಿನಂತೆ ಬರೆಯಲಾಗುವುದು

1) ಲಾಭ ನಷ್ಟದ ಖಾತೆಯ ಶಿಲ್ಕು ವರ್ಗಾಯಿಸಲು

ಅ) ಲಾಭ ನಷ್ಟದ ಖಾತೆ ಜಮಾ (ನಿವ್ವಳ ಲಾಭ) ತೋರಿಸುತ್ತಿದ್ದರೆ.

ಲಾಭ–ನಷ್ಟ ಖಾತೆಗೆ ಖರ್ಚು
ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮ

ಬಿ) ಲಾಭ ನಷ್ಟದ ಖಾತೆ ಖರ್ಚು (ನಿವ್ವಳ ನಷ್ಟ) ತೋರಿಸುತ್ತಿದ್ದಾರೆ.

ಲಾಭ ನಷ್ಟದ ಹಂಚಿಕೆಯ ಖಾತೆಗೆ ಖರ್ಚು
ಲಾಭ ನಷ್ಟದ ಖಾತೆಗೆ ಜಮ

2) ಬಂಡವಾಳದ ಮೇಲಿನ ಬಡ್ಡಿಯನ್ನು ವರ್ಗಾಯಿಸಲು

ಲಾಭ ನಷ್ಟದ ಹಂಚಿಕೆಯ ಖಾತೆಗೆ ಜಮ
ಬಂಡವಾಳದ ಮೇಲಿನ ಬಡ್ಡಿ ಖಾತೆ ಜಮ

3) ಪಾಲುದಾರರ ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿ

ಸ್ವಂತವೆಚ್ಚ ಹಿಂತಗೆತದ ಮೇಲಿನ ಬಡ್ಡಿಗೆ ಖರ್ಚು
ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮ

4) ಪಾಲುದಾರರ ಸಂಬಳ ಅಥವಾ ದಲ್ಲಾಳಿ ವರ್ಗಾವಣೆ

ಲಾಭ ನಷ್ಟದ ಹಂಚಿಕೆಯ ಖಾತೆಗೆ ಖರ್ಚು
ಪಾಲುದಾರರ ಸಂಬಳ ಅಥವಾ ದಲ್ಲಾಳಿ ಖಾತೆಗೆ ಜಮಾ

5) ಲಾಭ ನಷ್ಟ ಹಂಚಿಕೆಯ ಖಾತೆಯ ಶಿಲ್ಕನ್ನು ವರ್ಗಾಯಿಸಲು

ಅ) ಒಂದು ವೇಳೆ ಜಮ ಶಿಲ್ಕು (ಲಾಭ) ಇದ್ದರೆ

ಲಾಭ ನಷ್ಟ ಹಂಚಿಕೆಯ ಖಾತೆಗೆ ಖರ್ಚು
ಪಾಲುದಾರರ ಬಂಡವಾಳ / ಚಾಲ್ತಿ ಖಾತೆಗೆ ಜಮಾ

ಬಿ) ಒಂದು ವೇಳೆ ಖರ್ಚು ಶಿಲ್ಕು (ನಷ್ಟ ಇದ್ದರೆ)

ಪಾಲುದಾರರ (ವೈಯಕ್ತಿಕ) ಬಂಡವಾಳ/ಚಾಲ್ತಿ ಖಾತೆ ಖರ್ಚು
ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮಾ

ನಿದರ್ಶನ 28.

ರಾಮ ಮತ್ತು ರಹೀಮ್ ಎಂಬ ಪಾಲುಗಾರರು ಲಾಭ ನಷ್ಟಗಳನ್ನು ಸಮನಾಗಿ ಹಂಚಿಕೊಳ್ಳುತ್ತಿರುವರು ದಿನಾಂಕ: 1–4–2012ಕ್ಕೆ ಅವರ ಬಂಡವಾಳವು ಕ್ರಮವಾಗಿ ₹ 80000 ಮತ್ತು ₹ 60000 ಆಗಿತ್ತು. ಬಂಡವಾಳದ ಮೇಲೆ ಬಡ್ಡಿಯನ್ನು ವಾರ್ಷಿಕ ಶೇ. 10 ರಂತೆ ಕೊಡಬೇಕು ರಾಮನು ದಿನಾಂಕ: 1–10–2012ರಂದು ₹ 30000 ಹೆಚ್ಚುವರಿಯಾಗಿ ಬಂಡವಾಳವನ್ನು ತಂದಿರುತ್ತಾನೆ. ತಮ್ಮ ಸ್ವಂತ ವೆಚ್ಚಕ್ಕಾಗಿ ರಾಮನು ₹ 12,000 ಗಳನ್ನು ಮತ್ತು ರಹೀಮನು ₹ 8000 ಗಳನ್ನು ವರ್ಷಾವಧಿಯಲ್ಲಿ ಹಿಂತೆಗೆದಿರುತ್ತಾರೆ. ಇದರ ಮೇಲೆ ಬಡ್ಡಿಯನ್ನು ವಾರ್ಷಿಕ ಶೇ. 10 ರಂತೆ ರಷ್ಟು ಅಕರಿಸಬೇಕು ರಾಮನಿಗೆ ಪ್ರತಿ ತಿಂಗಳು ₹ 1,000ಗಳ ಸಂಬಳವನ್ನು ಮತ್ತು ರಹೀಮನಿಗೆ ವಾರ್ಷಿಕ ₹ 5000 ದಲ್ಲಾಳಿಯನ್ನು ಕೊಡಬೇಕು.

ಮೇಲಿನ ಹೊಂದಾಣಿಕೆಗಳನ್ನು ಮಾಡುವ ಮೊದಲು 31ನೇ ಮಾರ್ಚ್ 2013ಕ್ಕೆ ಅವರ ನಿವ್ವಳ ಲಾಭವು ₹ 47,500 ಇತ್ತು. ಲಾಭನಷ್ಟ ಹಂಚಿಕೆಯ ಖಾತೆ 31ನೇ ಮಾರ್ಚ್ 2013ಕ್ಕೆ ತಯಾರಿಸಿರಿ.

ನಿರೂಪಣೆ :

ಲಾಭನಷ್ಟ ಹಂಚಿಕೆಯ ಖಾತೆ
31ನೇ ಮಾರ್ಚ್ 2013ರ ವರ್ಷಾಂತರಕ್ಕೆ ....

ಖರ್ಚು ಜಮಾ.

ವಿವರಣೆ	₹	ವಿವರಣೆ	₹
ಬಂಡವಾಳದ ಮೇಲಿನ ಬಡ್ಡಿ ಖಾತೆಗೆ		ಲಾಭ ನಷ್ಟದ ಖಾತೆಯಿಂದ	47,500
ರಾಮ್ 9,500		(ನಿವ್ವಳ ಲಾಭ)	
ರಹೀಮ್ 6,000	15,500	ಸ್ವಂತ ವೆಚ್ಚ ಹಿಂತೆಗದ ಮೇಲಿನ ಬಡ್ಡಿಯಿಂದ	1,000
ರಾಮ್‌ನ ಸಂಬಳ ಖಾತೆಗೆ	12,000	ರಾಮ್ 600	
ರಹೀಮನ ದಲ್ಲಾಳಿ ಖಾತೆಗೆ	6,000	ರಹೀಮ್ 400	
ಪಾಲುದಾರರ ಬಂಡವಾಳ ಖಾತೆಗೆ	15,000		
ನಿವ್ವಳ ಲಾಭ ವರ್ಗಾವಣೆ			
ರಾಮ್ ½ = 7500			
ರಹೀಮ್ ½ = 7500			
	48,500		**48,500**

ಟಿಪ್ಪಣಿ : ಸ್ವಂತ ವೆಚ್ಚ ಹಿಂತೆಗೆತದ ದಿನಾಂಕವನ್ನು ಕೊಡದೇ ಇರುವ ಪ್ರಯುಕ್ತ ಸರಾಸರಿ ಆಧಾರದ ಮೇಲೆ 6 ತಿಂಗಳಿಗೆ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿಯನ್ನು ತೆಗೆಯಲಾಗಿದೆ.

ಬಂಡವಾಳದ ಮೇಲೆ ಬಡ್ಡಿ ಲೆಕ್ಕ ಹಾಕುವಿಕೆ

ರಾಮ :

₹ 80,000 ವಾರ್ಷಿಕ ಶೇ. 10 ರಂತೆ ಒಂದು ವರ್ಷಕ್ಕೆ $= \frac{₹\ 80{,}000 \times 10}{100} = ₹\ 8000$

₹ 30,000 ವಾರ್ಷಿಕ ಶೇ. 10 ರಂತೆ ಒಂದು 6 ತಿಂಗಳ $= \frac{₹\ 30{,}000 \times 10}{100} \times \frac{6}{12} = ₹\ \frac{1500}{9500}$

ರಹೀಮ :

₹ 60,000 ವಾರ್ಷಿಕ ಶೇ. 10% ರಂತೆ ಒಂದು ವರ್ಷಕ್ಕೆ $= \frac{₹\ 60{,}000 \times 10}{100} = ₹\ 6{,}000$

ನಿದರ್ಶನ 29.

ಪ್ರಮೋದ್ ಮತ್ತು ಪವನ್ ಪಾಲುದಾರಿಕೆ ವ್ಯವಹಾರವನ್ನು ದಿನಾಂಕ: 1–4–2011ರಂದು ಪ್ರಾರಂಭಿಸಿದ್ದು ಲಾಭ ನಷ್ಟವನ್ನು 3:2 ರ ಪ್ರಮಾಣದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ. ಅವರ ಬಂಡವಾಳವು ಅನುಕ್ರಮವಾಗಿ ₹ 80,000 ಮತ್ತು ₹ 60,000 ಗಳಾಗಿರುತ್ತದೆ. 31ನೇ ಮಾರ್ಚ್ 2012ರ ವರ್ಷಾಂತ್ಯಕ್ಕೆ ಅವರ ಲಾಭವು ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ₹ 24,000 ಗಳಾಗಿರುತ್ತದೆ.

a) ಬಂಡವಾಳದ ಮೇಲೆ ಬಡ್ಡಿ ಶೇ. 6 ರಂತೆ ಬಡ್ಡಿ ಕೊಡಬೇಕು.

b) ಪವನ್‌ಗೆ ವಾರ್ಷಿಕ ಸಂಬಳ ₹ 5,000 ಕೊಡಬೇಕು

c) ಸ್ವಂತ ವೆಚ್ಚದ ಮೇಲಿನ ಬಡ್ಡಿ ಪ್ರಮೋದ್–₹ 1500 ಮತ್ತು ಪವನ್ ₹ 1000

d) ಸ್ವಂತ ವೆಚ್ಚಕ್ಕಾಗಿ ಹಿಂತೆಗೆದ ಹಣ; ಪ್ರಮೋದ್ ₹ 15,000 ಮತ್ತು ಪವನ್ ₹ 10000

ಈ ಪಾಲುದಾರಿಕೆ ಸಂಸ್ಥೆಯ ಲಾಭ ನಷ್ಟದ ಹಂಚಿಕೆಯ ಖಾತೆಯನ್ನು ತಯಾರಿಸಿರಿ.

ನಿರೂಪಣೆ :

ಲಾಭ–ನಷ್ಟದ ಹಂಚಿಕೆಯ ಖಾತೆ
31ನೇ ಮಾರ್ಚ್ 2012 ರ ವರ್ಷಾಂತ್ಯಕ್ಕೆ

ಖರ್ಚು ಜಮಾ.

ವಿವರಣೆ	₹	ವಿವರಣೆ	₹
ಬಂಡವಾಳದ ಮೇಲೆ ಬಡ್ಡಿ ಖಾತೆಗೆ		ಲಾಭ ನಷ್ಟ ಖಾತೆಯಿಂದ	24,000
ಪ್ರಮೋದ್ $= \frac{80,000 \times 6}{100}$	4800	ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿಯಿಂದ	
ಪವನ್ $= \frac{60,000 \times 6}{100}$	3600	ಪ್ರಮೋದ್ – 1500	
ಪವನ್‌ರವರ ಸಂಬಳ ಖಾತೆಗೆ	5000	ಪವನ್ – <u>1000</u>	2500
ಪಾಲುದಾರರ ಬಂಡವಾಳ ಖಾತೆಗೆ			
(ನಿವ್ವಳ ಲಾಭ ವರ್ಗಾವಣೆ)			
ಪ್ರಮೋದ್ 3/5 = 7860			
ಪವನ್ 2/5 = 5240	13100		
	26,500		**26,500**

ಟಿಪ್ಪಣಿ : ಪಾಲುದಾರರ ಸ್ವಂತ ವೆಚ್ಚಕ್ಕಾಗಿ ಹಿಂತೆಗೆದ ಹಣಕ್ಕೆ ಬಡ್ಡಿಯನ್ನು ಕೊಟ್ಟಿರುವುದರಿಂದ ಸ್ವಂತ ವೆಚ್ಚದ ಹಿಂತೆಗೆತವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ.

ನಿದರ್ಶನ 30.

ಮಿಥುನ ಮತ್ತು ನೀತಿನ್ ಸಮವಾಗಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದು ದಿನಾಂಕ 1.4.2012ಕ್ಕೆ ಅವರ ಬಂಡವಾಳವು ಕ್ರಮವಾಗಿ ₹ 1,80,000, ಮತ್ತು ₹ 1,40,000 ಗಳಾಗಿರುತ್ತದೆ. ಪಾಲುದಾರಿಕೆಯ ಒಪ್ಪಂದದ ಪ್ರಕಾರ ಪಾಲುದಾರರ ಬಂಡವಾಳದ ಮೇಲೆ ವಾರ್ಷಿಕ ಶೇ. 5 ರಂತೆ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 6, ಮತ್ತು

ವಾರ್ಷಿಕ ದಲ್ಲಾಳಿ ಮಿಥುನನಿಗೆ ₹ 8,000ಗಳನ್ನು ಕೊಡಬೇಕಾಗಿದೆ ವರ್ಷದ ಅವಧಿಯಲ್ಲಿ ತಮ್ಮ ಸ್ವಂತ ವೆಚ್ಚಕ್ಕಾಗಿ ಮಿಥುನ್ ₹ 18,000 ಮತ್ತು ನಿತಿನ್ ₹ 12,000 ಗಳನ್ನು ಹಿಂತೆಗೆದಿರುತ್ತಾರೆ. ಈ ಮೇಲಿನ ಹೊಂದಾಣಿಕೆಗಳನ್ನು ಮಾಡುವುದಕ್ಕಿಂತ ಮೊದಲು ಈ ವರ್ಷದಲ್ಲಿ ಗಳಿಸಿರುವ ಲಾಭ ₹ 42,100/– ಗಳಾಗಿರುತ್ತದೆ.

31ನೇ ಮಾರ್ಚ್ 2013 ರ ವರ್ಷಾಂತ್ಯಕ್ಕೆ ಲಾಭ ನಷ್ಟ ಹಂಚಿಕೆಯ ಖಾತೆಯನ್ನು ತಯಾರಿಸಿರಿ.

ನಿರೂಪಣೆ :

ಈ ಲೆಕ್ಕದಲ್ಲಿ ಪಾಲುದಾರರು ತಮ್ಮ ಸ್ವಂತ ವೆಚ್ಚ ಹಿಂತೆಗೆತದ ದಿನಾಂಕವನ್ನು ಕೊಟ್ಟಿರುವುದಿಲ್ಲವಾದ್ದರಿಂದ ಸರಾಸರಿ ಆಧಾರದ ಮೇಲೆ 6 ತಿಂಗಳಿಗೆ ಸ್ವಂತ ವೆಚ್ಚದ ಮೇಲೆ ಬಡ್ಡಿ ಲೆಕ್ಕ ಹಾಕಲಾಗಿದೆ.

ಲಾಭ–ನಷ್ಟ ಹಂಚಿಕೆಯ ಖಾತೆ
31ನೇ ಮಾರ್ಚ್ 2013ರ ವರ್ಷಾಂತ್ಯಕ್ಕೆ

ಖರ್ಚು | ಜಮಾ.

ವಿವರಣೆ	₹	ವಿವರಣೆ	₹
ಬಂಡವಾಳದ ಮೇಲೆ ಬಡ್ಡಿಗೆ		ಲಾಭ–ನಷ್ಟ ಖಾತೆಯಿಂದ	42,100
ಮಿಥುನ್ $= \frac{1,80,000 \times 5}{100}$	9000	ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿಯಿಂದ	
ನಿತಿನ್ $= \frac{1,40,000 \times 5}{100}$	7000	ಮಿಥುನ್ – 540	
ಮಿಥುನ್ ದಲ್ಲಾಳಿ ಖಾತೆಗೆ	8000	ನಿತಿನ್ – 360	900
ಪಾಲುದಾರರ ಬಂಡವಾಳ ಖಾತೆಗೆ (ನಿವ್ವಳ ಲಾಭ ವರ್ಗಾವಣೆ) ಮಿಥುನ್ ½ = 9500, ನಿತಿನ್ ½ = 9500	19,000		
	43,000		**43,000**

ನಿದರ್ಶನ 31.

1–4–2013ರಂದು ಉಮ ಮತ್ತು ಸುಮ ಕ್ರಮವಾಗಿ ₹ 1,00,000 ಮತ್ತು 60,000 ಬಂಡವಾಳ ತೊಡಗಿಸಿ ಪಾಲುಗಾರಿಕೆ ಸಂಸ್ಥೆಯನ್ನು ಪ್ರಾರಂಭಿಸಿದರು. ಅವರು ತಮ್ಮ ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿ ಲಾಭವನ್ನು ಹಂಚಿಕೊಳ್ಳುವರು. ಒಪ್ಪಂದದ ಪ್ರಕಾರ ಬಂಡವಾಳದ ಮೇಲೆ ವಾರ್ಷಿಕ ಶೇ. 10 ರಂತೆ ಬಡ್ಡಿಯನ್ನು ಕೊಡಬೇಕು. ಸುಮಳಿಗೆ ಪ್ರತಿ ತಿಂಗಳು ಸಂಬಳ ₹ 750 ಕೊಡಬೇಕು ಮತ್ತು ಉಮಾಳಿಗೆ ವಾರ್ಷಿಕ ದಲ್ಲಾಳಿ ₹ 7,000 ಕೊಡಬೇಕು. ವರ್ಷದ ಅವಧಿಯಲ್ಲಿ ತಮ್ಮ ಸ್ವಂತ ವೆಚ್ಚಕ್ಕಾಗಿ ಉಮ ₹ 12,000 ಹಾಗೂ ಸುಮ ₹ 16000 ಹಿಂತೆಗೆದಿದ್ದಾರೆ. ಸ್ವಂತ ವೆಚ್ಚದ ಬಡ್ಡಿ ಉಮ ₹ 600/– ಸುಮ ₹ 800 ಇರುತ್ತದೆ. ಈ ಹೊಂದಾಣಿಕೆಗಳನ್ನು ಮಾಡುವ ಮೊದಲು ಅವರು ₹ 38,600 ಲಾಭ ಗಳಿಸಿರುತ್ತಾರೆ. ಅವರ ಲಾಭ–ನಷ್ಟ ವಿನಿಯೋಗ ಖಾತೆ ತಯಾರಿಸಿರಿ.

ನಿರೂಪಣೆ :

ಲಾಭ ನಷ್ಟದ ಪ್ರಮಾಣ ತೊಡಗಿಸಿದ ಬಂಡವಾಳದ ಪ್ರಮಾಣಕ್ಕೆ ಅನುಗುಣವಾಗಿದ್ದು
1,00,000 : 60,000 = 5 : 3 ಇರುತ್ತದೆ

ಲಾಭ ನಷ್ಟದ ಹಂಚಿಕೆ ಖಾತೆ
ಮಾರ್ಚ್ 31 2014ಕ್ಕೆ ಮುಗಿಯುವ ವರ್ಷದ ಅಂತ್ಯಕ್ಕೆ

ಖರ್ಚು ಜಮಾ.

ವಿವರಣೆ	₹	ವಿವರಣೆ	₹
ಬಂಡವಾಳದ ಮೇಲೆ ಬಡ್ಡಿಯ ಖಾತೆಗೆ		ಲಾಭ–ನಷ್ಟದ ಖಾತೆಯಿಂದ	38,600
ಉಮಾ $\frac{1,00,000\times10}{100}$	10000	ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಯಿಂದ	
ಸುಮ $\frac{60,000\times10}{100}$	6000	ಉಮಾ 600	
ಸುಮಾಳ ಸಂಬಳ ಖಾತೆಗೆ (750x12)	9000	ಸುಮ 800	1,400
ಉಮಾಳ ದಲ್ಲಾಳಿ ಖಾತೆಗೆ	7000		
ಪಾಲುದಾರರ ಬಂಡವಾಳ ಖಾತೆಗೆ			
(ನಿವ್ವಳ ಲಾಭ ವರ್ಗಾವಣೆ)			
ಉಮಾ $\frac{5}{8}$ = 5000			
ಸುಮ $\frac{3}{8}$ = 3000	8000		
	40,000		**40,000**

ನಿದರ್ಶನ **32.**

ಅನಂದ್, ಭರತ್ ಮತ್ತು ಚಂದ್ರ ಪಾಲುದಾರರು ಲಾಭ ಮತ್ತು ನಷ್ಟವನ್ನು 3:2:1ರ ಪ್ರಮಾಣದಲ್ಲಿ ಹಂಚಿಕೊಳ್ಳುವರು, ದಿನಾಂಕ: 1–4–2013ಕ್ಕೆ ಅವರ ಬಂಡವಾಳವು ಅನಂದ್ ₹ 1,50,000 ಭರತ್ ₹ 1,00,000 ಮತ್ತು ಚಂದ್ರ ₹ 80,000 ಗಳಾಗಿರುತ್ತದೆ ಪಾಲುಗಾರಿಕೆಯ ಒಪ್ಪಂದದಂತೆ ಬಂಡವಾಳದ ಮೇಲಿನ ಬಡ್ಡಿಯನ್ನು ವಾರ್ಷಿಕ ಶೇ. 5 ರಂತೆ ಹಾಕಲಾಗುವುದು. ಪ್ರತಿಯೊಬ್ಬ ಪಾಲುದಾರರು ತಿಂಗಳಿಗೆ ₹ 500 ರಂತೆ ಸಂಬಳ ಪಡೆಯುವರು.

ವರ್ಷದ ಅವಧಿಯಲ್ಲಿ ಸ್ವಂತ ವೆಚ್ಚಕ್ಕಾಗಿ ಅವರು ಕ್ರಮವಾಗಿ ₹ 50,000, ₹ 30,000 ಮತ್ತು ₹ 25,000 ಹಿಂತೆಗೆದಿದ್ದರೆ ಸ್ವಂತ ವೆಚ್ಚದ ಮೇಲೆ ಕ್ರಮವಾಗಿ ₹ 3000, ₹ 2000, ₹ 1000 ಬಡ್ಡಿ ಅಗಿರುತ್ತದೆ.

31–3–2014ಕ್ಕೆ ಮೇಲಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ಅವರ ನಿವ್ವಳ ಲಾಭವು ₹60,000/– ಗಳಾಗಿರುತ್ತದೆ.

ಲಾಭ ನಷ್ಟ ಹಂಚಿಕೆಯ ಖಾತೆಯನ್ನು ತಯಾರಿಸಿರಿ.

ನಿರೂಪಣೆ :

ಲಾಭ ನಷ್ಟದ ಹಂಚಿಕೆ ಖಾತೆ
ಮಾರ್ಚ್–31 2014ಕ್ಕೆ ಮುಗಿಯುವ ವರ್ಷದ ಅಂತ್ಯಕ್ಕೆ

ಖರ್ಚು ಜಮಾ.

ವಿವರಣೆ	₹	ವಿವರಣೆ	₹
		ಲಾಭ–ನಷ್ಟ ಹಂಚಿಕೆ ಖಾತೆಯಿಂದ	60,000
ಬಂಡವಾಳದ ಮೇಲಿನ ಬಡ್ಡಿ		ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಯಿಂದ	
ಆನಂದ $\frac{1,50,000 \times 5}{100}$ =7,500		ಆನಂದ 3,000	
ಭರತ್ $\frac{1,00,000 \times 5}{100}$ =5,000		ಭರತ್ 2,000	
ಚಂದ್ರ $\frac{80,000 \times 5}{100}$ = 4,000	16,500	ಚಂದ್ರ 1,000	6,000
ಪಾಲುದಾರರ ಸಂಬಳ ಖಾತೆಗೆ			
ಆನಂದ - 500 x 12	6,000		
ಭರತ್ - 500 x 12	6,000		
ಚಂದ್ರ - 500 x 12	6,000		
ಪಾಲುದಾರರ ಬಂಡವಾಳ ಖಾತೆಗೆ (ನಿವ್ವಳ ಲಾಭ ವರ್ಗಾವಣೆ)			
ಆನಂದ $31,500 \times \frac{3}{6}$ = 15,750			
ಭರತ್ $31,500 \times \frac{2}{6}$ = 10,500			
ಚಂದ್ರ $31,500 \times \frac{1}{6}$ = 5,250	31,500		
	66,000		**66,000**

ನಿದರ್ಶನ 33.

ವಿನಯ ಮತ್ತು ವಿದ್ಯ ಪಾಲುದಾರರಾಗಿದ್ದು ಲಾಭ ನಷ್ಟವನ್ನು 6:4ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿರುವರು ಅವರ ಬಂಡವಾಳ ದಿನಾಂಕ: 1–4–2012ಕ್ಕೆ ಕ್ರಮವಾಗಿ ₹ 2,00,000 ಮತ್ತು ₹ 1,00,000 ಅಗಿತ್ತು. ವರ್ಷಾದ ಅಂತ್ಯಕ್ಕೆ ಅವರು ₹ 89,400 ಲಾಭವನ್ನು ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ಗಳಿಸಿರುತ್ತಾರೆ.

a) ಬಂಡವಾಳದ ಮೇಲೆ ವಾರ್ಷಿಕ ಶೇಕಡ 8 ರಂತೆಬಡ್ಡಿ

b) ಪ್ರತಿಯೊಬ್ಬ ಪಾಲುದಾರನಿಗೂ ತಿಂಗಳಿಗೆ ₹ 1000 ತಿಂಗಳಿಗೆ ಸಂಬಳ ಕೊಡಬೇಕು.

c) ಅವರ ಸ್ವಂತ ವೆಚ್ಚದ ಹಿಂತೆಗೆತ ವರ್ಷದ ಅವಧಿಯಲ್ಲಿ ಕ್ರಮವಾಗಿ ₹ 20,000 ಮತ್ತು ₹ 15,000

d) ಸ್ವಂತ ವೆಚ್ಚದ ಮೇಲಿನ ಬಡ್ಡಿ ಕ್ರಮವಾಗಿ ₹ 2000 ₹ 1800.

ಖಾತೆಯನ್ನು ತಯಾರಿಸಿರಿ 31ನೇ ಮಾರ್ಚ್ 2013ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ಲಾಭ–ನಷ್ಟ ಹಂಚಿಕೆಯ

ನಿರೂಪಣೆ :

ಲಾಭ ನಷ್ಟ ಹಂಚಿಕೆಯ ಖಾತೆ
31ನೇ ಮಾರ್ಚ್ 2013ರ ವರ್ಷಾವಧಿಯ ಅಂತ್ಯಕ್ಕೆ

ಖರ್ಚು ಜಮಾ.

ವಿವರಣೆ	₹	ವಿವರಣೆ	₹
ಬಂಡವಾಳದ ಮೇಲಿನ ಬಡ್ಡಿ ಖಾತೆಗೆ		ಲಾಭ–ನಷ್ಟದ ಖಾತೆಯಿಂದ (ನಿವ್ವಳ ಲಾಭ)	89,400
ವಿನಯ್ - 16,000		ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿಯಿಂದ	
ವಿದ್ಯಾ - 8,000	24,000	ವಿನಯ್ 2,000	
		ವಿದ್ಯಾ 1,800	3,800
ವಿನಯ್ ಸಂಬಳ ಖಾತೆಗೆ 1000 x 12	12,000		
ವಿದ್ಯಾ ಸಂಬಳ ಖಾತೆಗೆ 1000 x 12	12,000		
ಪಾಲುದಾರರ ಬಂಡವಾಳ ಖಾತೆ			
ನಿವ್ವಳ ಲಾಭ ವರ್ಗಾವಣೆ			
ವಿನಯ್ - 6/10 = 27,120			
ವಿದ್ಯಾ - 4/10 = 18,080	45,200		
	93,200		**93,200**

ನಿದರ್ಶನ 34.

ರವಿ ಮತ್ತು ಉದಯ್ 3:2 ರಂತೆ ಲಾಭ ನಷ್ಟದ ಪ್ರಮಾಣವನ್ನು ಹಂಚಿಕೊಳ್ಳುವರು. ದಿನಾಂಕ: 1–4–2013ಕ್ಕೆ ಇದ್ದಂತೆ ಅವರ ಬಂಡವಾಳವು ರವಿ ₹ 2,50,000 ಮತ್ತು ಉದಯ ₹ 2,00,000 ಇರುತ್ತದೆ. ಅವರ ಬಂಡವಾಳದ ಮೇಲೆ ಬಡ್ಡಿ ವಾರ್ಷಿಕ ಶೇಕಡ 6 ರಂತೆ ಕೊಡಬೇಕು. ವರ್ಷಾವಧಿಯಲ್ಲಿ ಪಾಲುದಾರರು ರವಿ ₹ 40,000 ಮತ್ತು ಉದಯ ₹ 30,000ಗಳನ್ನು ಸ್ವಂತ ವೆಚ್ಚಕ್ಕಾಗಿ ಹಿಂತೆಗೆದಿರುತ್ತಾರೆ ಮತ್ತು ಅದರ ಮೇಲಿನ ಬಡ್ಡಿಯು ₹ 2,500 ಮತ್ತು ₹ 1,500 ಗಳಾಗಿರುತ್ತದೆ.

ರವಿಯವರಿಗೆ ಮೊದಲ ಎಂಟು ತಿಂಗಳಿಗೆ ₹ 1,000 ದಂತೆ ಮತ್ತು ನಂತರದ ತಿಂಗಳುಗಳಿಗೆ ₹ 1,500 ರಂತೆ ಸಂಬಳ ನೀಡಬೇಕು.

ಈ ಮೇಲಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ಅವರು ದಿನಾಂಕ: 31–3–2014ಕ್ಕೆ ಗಳಿಸಿರುವ ಲಾಭವು ₹ 75,000

ಈ ಕೆಳಗಿನ ಪದ್ಧತಿಯ ಪ್ರಕಾರ ಲಾಭ ನಷ್ಟದ ಹಂಚಿಕೆಯ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿರಿ.

ಎ) ಹೆಚ್ಚು ಕಡಿಮೆ ಬಂಡವಾಳ ಪದ್ಧತಿಯಲ್ಲಿ ಮತ್ತು ಬಿ) ಸ್ಥಿರ ಬಂಡವಾಳ ಪದ್ಧತಿಯಲ್ಲಿ

ನಿರೂಪಣೆ :

ಲಾಭ ನಷ್ಟ ಹಂಚಿಕೆ ಖಾತೆ
31ನೇ ಮಾರ್ಚ್ 2014ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ

ಖರ್ಚು ಜಮಾ.

ವಿವರಣೆ	₹	ವಿವರಣೆ	₹
ಬಂಡವಾಳದ ಮೇಲಿನ ಬಡ್ಡಿ ಖಾತೆಗೆ		ಲಾಭನಷ್ಟದ ಖಾತೆಯಿಂದ (ನಿವ್ವಳ ಲಾಭ)	75,000
ರವಿ $\frac{2,50,000 \times 6}{100}$	15,000	ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿಯಿಂದ	
ಉದಯ $\frac{2,00,000 \times 6}{100}$	12,000	ರವಿ - 2,500	4,000
		ಉದಯ - 1,500	
ರವಿಯ ಸಂಬಳ ಖಾತೆಗೆ 1,000 x 8 = 8,000 1,500 x 4 = 6,000	14,000		
ಪಾಲುದಾರರ ಬಂಡವಾಳ ಖಾತೆಗೆ ಅಥವಾ ಚಾಲ್ತಿ ಖಾತೆಗೆ (ನಿವ್ವಳ ಲಾಭ ವರ್ಗಾವಣೆ)			
ರವಿ $\frac{3}{5} = 22,800$	38,000		
ಉದಯ $\frac{2}{5} = 15,200$			
	79,000		**79,000**

ಎ) ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿ

ಪಾಲುದಾರರ ಬಂಡವಾಳ ಖಾತೆಗಳು

ಖರ್ಚು ಜಮಾ.

ವಿವರಗಳು	ರವಿ ₹	ಉದಯ ₹	ವಿವರಗಳು	ರವಿ ₹	ಉದಯ ₹
ಸ್ವಂತ ವೆಚ್ಚ ಹಿಂತೆಗೆತದ ಖಾತೆಗೆ	40,000	30,000	ಆರಂಭದ ಶಿಲ್ಕು (ಮುಂದುವರೆಸಿದ)	2,50,000	2,00,000
" ಸ್ವಂತ ವೆಚ್ಚ ಹಿಂತೆಗೆತದ ಮೇಲಿನ ಬಡ್ಡಿ ಖಾತೆಗೆ	2,500	1,500	ಮುಂದುವರೆಸಿದ ಬಂಡವಾಳದ ಮೇಲಿನ ಬಡ್ಡಿ ಖಾತೆಯಿಂದ	15,000	12,000
" ಶಿಲ್ಕು ಮುಂದುವರೆಸಿದ್ದು	2,59,300	1,95,700	ರವಿಯ ಸಂಬಳ	14,000	-
			" ಲಾಭ–ನಷ್ಟದ ಹಂಚಿಕೆಯ ಖಾತೆಯಿಂದ	22,800	15,200
	3,01,800	**2,27,200**		**3,01,800**	**2,27,200**
			ಶಿಲ್ಕು ಹಿಂದಿನಿಂದ ಬಂದದ್ದು	2,59,300	1,95,700

ಪಾಲುದಾರರ ಸ್ವಂತ ವೆಚ್ಚದ ಹಿಂತೆಗೆತದ ಖಾತೆ

ಖರ್ಚು ಜಮಾ.

ವಿವರಗಳು	ರವಿ ₹	ಉದಯ ₹	ವಿವರಗಳು	ರವಿ ₹	ಉದಯ ₹
ಬ್ಯಾಂಕ್ ಖಾತೆಗೆ	40,000	30,000	ಬಂಡವಾಳ ಖಾತೆಯಿಂದ	40,000	30,000
	40,000	**30,000**		**40,000**	**30,000**

ಬಿ) ಸ್ಥಿರಬಂಡವಾಳ ಪದ್ಧತಿಯಲ್ಲಿ

ಪಾಲುದಾರರ ಬಂಡವಾಳ ಖಾತೆಗಳು

ಖರ್ಚು ಜಮಾ.

ವಿವರಗಳು	ರವಿ ₹	ಉದಯ ₹	ವಿವರಗಳು	ರವಿ ₹	ಉದಯ ₹
ಮುಂದುವರೆದ ಶಿಲ್ಕು	2,50,000	2,00,000	ಆರಂಭದ ಶಿಲ್ಕು	2,50,000	2,00,000
	2,50,000	**2,00,000**		**2,50,000**	**2,00,000**
			ಹಿಂದಿನಿಂದ ಬಂದ ಶಿಲ್ಕು	2,50,000	2,00,000

ಪಾಲುದಾರರ ಚಾಲ್ತಿ ಖಾತೆಗಳ

ಖರ್ಚು ಜಮಾ.

ವಿವರಗಳು	ರವಿ ₹	ಉದಯ ₹	ವಿವರಗಳು	ರವಿ ₹	ಉದಯ ₹
ಸ್ವಂತ ವೆಚ್ಚ ಹಿಂತೆಗೆತ ಖಾತೆಗೆ	40,000	30,000	ಬಂಡವಾಳದ ಮೇಲಿನ ಬಡ್ಡಿಯಿಂದ	15,000	12,000
" ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಗೆ	2,500	1,500	ರವಿಯ ಸಂಬಳ ಖಾತೆಯಿಂದ	14,000	
" ಶಿಲ್ಕು ಮುಂದುವರೆಸಿದ್ದು	9,300	-	ಲಾಭ-ನಷ್ಟದ ಹಂಚಿಕೆ ಖಾತೆಯಿಂದ	22,800	15,200
			ಶಿಲ್ಕು ಮುಂದುವರೆಸಿದ್ದು	-	4,300
	51,800	**31,500**		**51,800**	**31,500**
ಶಿಲ್ಕು ಹಿಂದಿನಿಂದ ಬಂದದ್ದು		4,300	ಶಿಲ್ಕು ಹಿಂದಿನಿಂದ ಬಂದದ್ದು	9,300	

ನಿದರ್ಶನ 35.

ಅನುಷ್ಕ ಮತ್ತು ಭಾರತಿ ಪಾಲುದಾರರಾಗಿದ್ದು ಅವರ ಭಂಡವಾಳವು ಕ್ರಮವಾಗಿ ₹ 1,50,000 ರೂ 1,00,000 ಆಗಿರುತ್ತದೆ. ಅವರು ಲಾಭನಷ್ಟವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ. ಮಾರ್ಚ್ 31 2014ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ಈ ಕೆಳಗಿನ ವಹಿವಾಟುಗಳನ್ನು ಪಾಲುದಾರರ ಈ ಕೆಳಗಿನ ಬಂಡವಾಳ ಖಾತೆಗಳಲ್ಲಿ ಹೇಗೆ ತೋರಿಸುವಿರಿ.

1) ಸ್ಥಿರ ಬಂಡವಾಳ ಪದ್ದತಿ 2) ಹೆಚ್ಚು-ಕಡಿಮೆಯಾಗುವ ಬಂಡವಾಳ ಪದ್ಧತಿ

ವಿವರಗಳು	ಅನುಷ್ಕ ₹	ಭಾರತಿ ₹
ಹೆಚ್ಚುವರಿ ಬಂಡವಾಳ ತಂದಿದ್ದು ದಿನಾಂಕ: 1ನೇ ಅಕ್ಟೋಬರ್ 2013ಕ್ಕೆ	30,000	20,000
ಬಂಡವಾಳದ ಮೇಲಿನ ಬಡ್ಡಿ	5%	5%
ವರ್ಷದ ಅವಧಿಯಲ್ಲಿ ಸ್ವಂತ ವೆಚ್ಚಕ್ಕೆ ಹಿಂತೆಗೆತ	3000	2000
ಸ್ವಂತ ವೆಚ್ಚದ ಮೇಲಿನ ಬಡ್ಡಿ	250	200
ಸಂಬಳ	2000	-
ದಲ್ಲಾಳಿ	1000	700
ಲಾಭದ ಹಂಚಿಕೆ (ಲಾಭ)	6000	4000

ನಿರೂಪಣೆ : **ಎ) ಸ್ಥಿರ ಬಂಡವಾಳ ಪದ್ಧತಿ**

ಪಾಲುದಾರರ ಬಂಡವಾಳ ಖಾತೆಗಳು

ಖರ್ಚು ಜಮಾ.

ವಿವರಗಳು	ಅನುಷ್ಕ ₹	ಭಾರತಿ ₹	ವಿವರಗಳು	ಅನುಷ್ಕ ₹	ಭಾರತಿ ₹
ಶಿಲ್ಕು ಮುಂದುವರೆಸಿದ್ದು	1,80,000	1,20,000	ಆರಂಭದ ಶಿಲ್ಕು	1,50,000	1,00,000
			ಬ್ಯಾಂಕ್ ಖಾತೆಯಿಂದ (ಹೆಚ್ಚುವರಿ ಬಂಡವಾಳ)	30,000	20,000
	1,80,000	**1,20,000**		**1,80,000**	**1,20,000**
			ಶಿಲ್ಕು ಹಿಂದಿನಿಂದ ಬಂದಿದ್ದು	1,80,000	1,20,000

ಪಾಲುದಾರರ ಚಾಲ್ತಿ ಖಾತೆಗಳು

ಖರ್ಚು ಜಮಾ.

ವಿವರಗಳು	ಅನುಷ್ಕ ₹	ಭಾರತಿ ₹	ವಿವರಗಳು	ಅನುಷ್ಕ ₹	ಭಾರತಿ ₹
ಸ್ವಂತ ವೆಚ್ಚ ಹಿಂತೆಗೆತ ಖಾತೆಗೆ	3,000	2,000	ಬಂಡವಾಳದ ಮೇಲಿನ ಬಡ್ಡಿಯಿಂದ	8,250	5,500
" ಸ್ವಂತ ವೆಚ್ಚದ ಮೇಲಿನ ಬಡ್ಡಿ	250	200	" ಸಂಬಳ ಖಾತೆಯಿಂದ	2,000	-
			" ದಲ್ಲಾಳಿ ಖಾತೆಯಿಂದ	1,000	700
ಶಿಲ್ಕು ಮುಂದುವರೆಸಿದ್ದು	14,000	8,000	" ಲಾಭ ನಷ್ಟದ ಹಂಚಿಕೆ ಖಾತೆಯಿಂದ	6,000	4,000
	17,250	**10,200**		**17,250**	**10,200**
			ಶಿಲ್ಕು ಹಿಂದಿನಿಂದ ಬಂದಿದ್ದು	14,000	8,000

ಬಿ) ಹೆಚ್ಚು ಕಡಿಮೆಯಾಗುವ ಬಂಡವಾಳ ಪದ್ಧತಿ

ಪಾಲುದಾರರ ಬಂಡವಾಳ ಖಾತೆ

ಖರ್ಚು ಜಮಾ.

ವಿವರಗಳು	ಅನುಷ್ಕ ₹	ಭಾರತಿ ₹	ವಿವರಗಳು	ಅನುಷ್ಕ ₹	ಭಾರತಿ ₹
ಸ್ವಂತ ವೆಚ್ಚದ ಹಿಂತೆಗೆತ ಖಾತೆಗೆ	3,000	2,000	ಆರಂಭದ ಶಿಲ್ಕು	1,50,000	1,00,000
" ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಗೆ	250	200	" ಬ್ಯಾಂಕ್ ಖಾತೆಯಿಂದ (ಹೆಚ್ಚುವರಿ ಬಂಡವಾಳ)	30,000	20,000
ಶಿಲ್ಕು ಮುಂದುವರೆಸಿದ್ದು	1,94,000	1,28,000	ಬಂಡವಾಳದ ಮೇಲಿನ ಬಡ್ಡಿ ಖಾತೆಯಿಂದ	8,250	5,500
			" ಸಂಬಳ ಖಾತೆಯಿಂದ	2,000	-
			" ದಲ್ಲಾಳಿ	1,000	700
			" ಲಾಭ-ನಷ್ಟದ ಹಂಚಿಕೆ ಖಾತೆ (ಲಾಭ) ಯಿಂದ	6,000	4,000
	1,97,250	**1,30,200**		**1,97,250**	**1,30,200**
			ಶಿಲ್ಕು ಹಿಂದಿನಿಂದ ಬಂದದ್ದು	1,94,000	1,28,000

ಬಂಡವಾಳದ ಮೇಲಿನ ಬಡ್ಡಿ ತೆಗೆಯುವಿಕೆ

ಅನುಷ್ಕ:

ವಾರ್ಷಿಕ ಶೇ 5% ರಂತೆ ₹ 1,50,000 ಕ್ಕೆ 1ವರ್ಷಗಳು $\frac{1,50,000 \times 5}{100}$ = ₹ 7,500

ವಾರ್ಷಿಕ ಶೇ 5% ರಂತೆ ₹ 30,000 ಕ್ಕೆ 6 ತಿಂಗಳಿಗೆ ಹೆಚ್ಚುವರಿ ಬಂಡವಾಳಕ್ಕೆ $\frac{30,000 \times 5}{100} \times \frac{6}{12}$ = ₹ 750

₹ 8250

ಭಾರತಿ:

ವಾರ್ಷಿಕ ಶೇ 5% ರಂತೆ ₹ 1,00,000 ಕ್ಕೆ 1 ವರ್ಷಕ್ಕೆ $\frac{1,00,000 \times 5}{100}$ = ₹ 5000

ವಾರ್ಷಿಕ ಶೇ 5% ರಂತೆ ₹ 20,000 ಕ್ಕೆ 6 ತಿಂಗಳಿಗೆ ಹೆಚ್ಚುವರಿ ಬಂಡವಾಳ $\frac{20,000 \times 5}{100} \times \frac{6}{12}$ = ₹ 500

₹ 5500

ಪ್ರಾಯೋಗಿಕ ಆಧಾರಿತ ವಿವರಣೆಗಳು

ನಿದರ್ಶನ 36.

ಈ ಕೆಳಗಿನವುಗಳನ್ನು ಪಾಲುದಾರರ ಒಪ್ಪಂದದ ಅನುಪಸ್ಥಿತಿಯಲ್ಲಿ ಹೇಗೆ ಪರಿಗಣಿಸುವಿರಿ?

ಎ) ಬಂಡವಾಳದ ಮೇಲಿನ ಬಡ್ಡಿ

ಬಿ) ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ

ಸಿ) ಮುಂಗಡ ಸಾಲದ ಮೇಲಿನ ಬಡ್ಡಿ

ಡಿ) ಪಾಲುದಾರರ ಸಂಬಳ ಅಥವಾ ದಲ್ಲಾಳಿ

ಇ) ಲಾಭ ಅಥವಾ ನಷ್ಟದ ಹಂಚಿಕೆ.

ನಿರೂಪಣೆ :

ಎ) ಬಂಡವಾಳದ ಮೇಲೆ ಬಡ್ಡಿಯನ್ನು ಕೊಡಲು ಬರುವುದಿಲ್ಲ.

ಬಿ) ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿಯನ್ನು ಕೊಡಲು ಬರುವುದಿಲ್ಲ.

ಸಿ) ಮುಂಗಡ ಸಾಲದ ಮೇಲೆ ವಾರ್ಷಿಕ ಶೇಕಡ **6** ರಷ್ಟು ಬಡ್ಡಿ ಕೊಡಲು ಅವಕಾಶವಿದೆ.

ಡಿ) ಪಾಲುಗಾರರಿಗೆ ಸಂಬಳ ಅಥವಾ ದಲ್ಲಾಳಿ ಕೊಡಲು ಅವಕಾಶವಿಲ್ಲ.

ಇ) ಲಾಭ ಅಥವಾ ನಷ್ಟವನ್ನು ಸಮನಾಗಿ ಹಂಚಲಾಗುತ್ತದೆ.

ನಿದರ್ಶನ 37.

ಐದು ಕಾಲ್ಪನಿಕ ಅಂಕಿ ಸಂಖ್ಯೆಗಳನ್ನು ಬಳಸಿಕೊಂಡು ಇಬ್ಬರು ಪಾಲುದಾರರ ಬಂಡವಾಳ ಖಾತೆಗಳನ್ನು ಹೆಚ್ಚು –ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿಯಲ್ಲಿ ತಯಾರಿಸಿರಿ.

ನಿರೂಪಣೆ :

ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿ
ಪಾಲುದಾರರ ಬಂಡವಾಳ ಖಾತೆ

ಖರ್ಚು ಜಮಾ.

ವಿವರಗಳು	ಪ್ರಮೋದ್ ₹	ಪವನ್ ₹	ವಿವರಗಳು	ಪ್ರಮೋದ್ ₹	ಪವನ್ ₹
ಸ್ವಂತ ವೆಚ್ಚಕ್ಕೆ ಹಿಂತೆಗೆತ ಖಾತೆಗೆ	4,000	3,000	ಆರಂಭದ ಶಿಲ್ಕು	25,000	20,000
" ಸ್ವಂತ ವೆಚ್ಚದ ಮೇಲಿನ ಬಡ್ಡಿ	250	150	" ಬಂಡವಾಳದ ಮೇಲಿನ ಬಡ್ಡಿಯಿಂದ	2,500	2,000
" ಶಿಲ್ಕು ಮುಂದುವರೆಸಿದ್ದು	29750	23850	"ಪ್ರಮೋದ್‌ನ ಸಂಬಳದಿಂದ	1,500	-
			" ಲಾಭ-ನಷ್ಟದ ಹಂಚಿಕೆ ಖಾತೆಯಿಂದ	5,000	5,000
	34,000	**27,000**		**34,000**	**27,000**
			ಶಿಲ್ಕು ಹಿಂದಿನಿಂದ ಬಂದದ್ದು	29750	23850

ನಿದರ್ಶನ 38.

ಐದು ಕಾಲ್ಪನಿಕ ಅಂಕಿ ಸಂಖ್ಯೆಗಳನ್ನು ಬಳಸಿಕೊಂಡು ಇಬ್ಬರು ಪಾಲುದಾರರ ಚಾಲ್ತಿ ಖಾತೆಯನ್ನು ಸ್ಥಿರ ಬಂಡವಾಳ ಪದ್ಧತಿಯಲ್ಲಿ ತೆಗೆಯಿರಿ.

ನಿರೂಪಣೆ :

ಸ್ಥಿರ ಬಂಡವಾಳ ಪದ್ಧತಿಯಲ್ಲಿ ಪಾಲುದಾರರ ಚಾಲ್ತಿ ಖಾತೆಗಳು

ಖರ್ಚು ಜಮಾ.

ವಿವರಗಳು	ಪ್ರಮೋದ್ ₹	ಪವನ್ ₹	ವಿವರಗಳು	ಪ್ರಮೋದ್ ₹	ಪವನ್ ₹
ಸ್ವಂತ ವೆಚ್ಚಕ್ಕೆ ಹಿಂತೆಗೆತ ಖಾತೆಗೆ	4,000	3,000	ಬಂಡವಾಳದ ಮೇಲಿನ ಬಡ್ಡಿಯಿಂದ	2,500	2,000
" ಸ್ವಂತ ವೆಚ್ಚದ ಮೇಲಿನ ಬಡ್ಡಿ ಖಾತೆಗೆ	250	150	" ಸಂಬಳ ಖಾತೆಯಿಂದ	1,500	
" ಶಿಲ್ಕು ಮುಂದುವರೆಸಿದ್ದು	4,750	3,850	" ಲಾಭ-ನಷ್ಟದ ಹಂಚಿಕೆ ಖಾತೆಯಿಂದ	5,000	5,000
	9,000	**7,000**		**9,000**	**7,000**
			ಶಿಲ್ಕು ಹಿಂದಿನಿಂದ ಬಂದದ್ದು	4,750	3,850

ಸಂಕ್ಷಿಪ್ತ ನೋಟ

- ಪಾಲುದಾರಿಕೆಯ ವ್ಯಾಖ್ಯೆ, "ಎಲ್ಲರಿಂದ ಅಥವ ಎಲ್ಲರ ಪರವಾಗಿ ಕೆಲವರಿಂದ ನಡೆಸಲ್ಪಡುವ ವ್ಯವಹಾರದಲ್ಲಾದ ಲಾಭವನ್ನು ಹಂಚಿಕೊಳುವ ಒಪ್ಪಿರುವ ವ್ಯಕ್ತಿಗಳ ನಡುವಣ ಸಂಬಂದವೇ ಪಾಲುಗಾರಿಕೆ ಎನಿಸಿದೆ.
- ಲಕ್ಷಣಗಳು: 1) ಕನಿಷ್ಟ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ವ್ಯಕ್ತಿಗಳಿರಬೇಕು. 2) ಒಪ್ಪಂದದ ಮೂಲಕ ಅಸ್ತಿತ್ವಕ್ಕೆ ಬರುತ್ತದೆ. 3) ವ್ಯವಹಾರವನ್ನು ಕೈಗೊಳ್ಳಲು ಒಪ್ಪಂದವಾಗಿರಬೇಕು. 4) ಲಾಭಗಳಿಸುವ ಮತ್ತು ಹಂಚಿಕೆಗೆ ಸಂಬಂಧಿಸಿದ ಒಪ್ಪಂದವಾಗಿರಬೇಕು 5) ಪರಸ್ಪರ ಯಜಮಾನ ಮತ್ತು ಪ್ರತಿನಿಧಿ ಸಂಬಂದಹೊಂದಿರಬೇಕು, 6) ಹೊಣೆಗಾರಿಕೆಯು ಅನಿಯಮಿತವಾಗಿರುತ್ತದೆ.
- ಒಪ್ಪಂದ ಪತ್ರದ ಅರ್ಥ ಮತ್ತು ಒಳ ವಿಷಯಗಳು:

  ಪಾಲುದಾರರು ಒಪ್ಪಂದಗಳನ್ನು ಬರೆದು, ಒಪ್ಪಿ ಸಹಿ ಮಾಡಿರುವ ಲಿಖಿತ ಪತ್ರವನ್ನು ಕರಾರು ಪತ್ರವೆಂದು ಕರೆಯುತ್ತೇವೆ. ಒಪ್ಪಂದ ಪತ್ರವು ಸಾಮಾನ್ಯವಾಗಿ ವ್ಯವಹಾರಕ್ಕೆ ಸಂಬಂದಿಸಿದಂತೆ, ಪಾಲುದಾರರ ಪರಸ್ಪರ ಸಂಬಂಧ, ಹಕ್ಕು ಬಾಧ್ಯತೆಗಳು, ವ್ಯವಹಾರದ ಉದ್ದೇಶ, ಪಾಲುದಾರರು ತೊಡಗಿಸಿರುವ ಬಂಡವಾಳ, ಲಾಭ-ನಷ್ಟದ ಪಾಲನ್ನು ಹಂಚುವ ಪ್ರಮಾಣ, ಬಂಢವಾಳದ ಮೇಲಿನ ಬಡ್ಡಿ, ಮುಂಗಡ ಸಾಲದ ಮೇಲಿನ ಬಡ್ಡಿ ಮತ್ತು ಹೊಸ ಪಾಲುದಾರರ ಪ್ರವೇಶ ಪಾಲುದಾರರ ನಿವೃತ್ತಿ, ನಿಧನ ಮತ್ತು ವಿಸರ್ಜನೆ ಸಮಯದಲ್ಲಿ ಅನುಸರಿಸಬೇಕಾದ ನಿಯಮಗಳು ಇವುಗಳನೊಳಗೊಂಡಿರುತ್ತದೆ ಪಾಲುದಾರರು ಯಾವುದೇ ವಿಷಯಗಳ ಬಗ್ಗೆ ಒಪ್ಪಂದ ಮಾಡಿಕೊಂಡಿರದಿದ್ದರೆ ಆಗ ಭಾರತೀಯ ಪಾಲುಗಾರಿಕೆಯ ಕಾಯ್ದೆ 1932ರ ನಿಯಮಗಳನ್ನು ಅನ್ವಯಿಸಲಾಗುತ್ತದೆ. ಈ ಕಾಯ್ದೆಯ ಅನ್ವಯ

  - ಎಲ್ಲಾ ಪಾಲುದಾರರು ಲಾಭ ನಷ್ಟವನ್ನು ಸಮನಾಗಿ ಹಂಚಿಕೊಳ್ಳಬೇಕು.
  - ಹೆಚ್ಚಿನ ಸೇವೆಗಾಗಿ ಪಾಲುಗಾರರಿಗೆ ಯಾವುದೇ ಸಂಬಳ ಅಥವಾ ದಲ್ಲಾಳಿ ಇರುವುದಿಲ್ಲ
  - ಬಂಡವಾಳದ ಮೇಲೆ ಬಡ್ಡಿಯನ್ನು ಕೊಡಲು ಬರುವುದಿಲ್ಲ
  - ಪಾಲುದಾರರ ಹಿಂತೆಗೆದ ವೆಚ್ಚದ ಮೇಲೆ ಬಡ್ಡಿ ಆಕರಿಸಲು ಬರುವುದಿಲ್ಲ.

- ಯಾವುದೇ ಪಾಲುದಾರನು ಸಂಸ್ಥೆಗೆ ಮುಂಗಡವಾಗಿ ಸಾಲವನ್ನು ನೀಡಿದ್ದರೆ ಅವನು ವಾರ್ಷಿಕ ಶೇಕಡ 6 ರಂತೆ ಬಡ್ಡಿಯನ್ನು ಪಡೆಯುವ ಹಕ್ಕು ಹೊಂದಿರುತ್ತಾನೆ.

❐ ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸುವುದು ಹೆಚ್ಚು ಕಡಿಮೆ ಬಂಡವಾಳ ಪದ್ದತಿಯಲ್ಲಿ ಅಥವಾ ಸ್ಥಿರ ಬಂಡವಾಳ ಪದ್ದತಿಯಲ್ಲಿ, ಪಾಲುದಾರರ ಎಲ್ಲಾ ವ್ಯವಹಾರಗಳನ್ನು ಸಂಬಂಧಪಟ್ಟ ಪಾಲುದಾರರ ಬಂಡವಾಳ ಖಾತೆಯಲ್ಲಿ ಬರೆಯಲಾಗುವುದು. ಬಂಡವಾಳ ಖಾತೆಯನ್ನು ನಿರ್ವಹಿಸುವ ವಿಧಾನದಲ್ಲಿ ಎರಡು ಬಗೆಗಳು, ಅವುಗಳೆಂದರೆ,

(i) ಹೆಚ್ಚು ಕಡಿಮೆ ಬಂಡವಾಳ ಪದ್ಧತಿ (ii) ಸ್ಥಿರ ಬಂಡವಾಳ ಪದ್ಧತಿ

ಹೆಚ್ಚು ಕಡಿಮೆಯಾಗುವ ಬಂಡವಾಳ ಪದ್ದತಿಯಲ್ಲಿ ಪಾಲುದಾರನಿಗೆ ಸಂಬಂಧಿಸಿದ ಎಲ್ಲಾ ಹೊಂದಾಣಿಕೆಗಳನ್ನು ಬಂಡವಾಳ ಖಾತೆಯಲ್ಲಿ ಬರೆಯುವುದರಿಂದ ಬಂಡವಾಳ ಖಾತೆಯು ಪ್ರತಿ ವರ್ಷ ಹೆಚ್ಚು ಕಡಿಮೆಯಾಗುತ್ತಿರುತ್ತದೆ.

ಸ್ಥಿರ ಬಂಡವಾಳ ಪದ್ದತಿಯಲ್ಲಿ ಕೇವಲ ಪಾಲುದಾರನ ಬಂಡವಾಳವನ್ನು ಮಾತ್ರ ಬಂಡವಾಳ ಖಾತೆಯಲ್ಲಿ ಬರೆದು ಉಳಿದ ಹೊಂದಾಣಿಕೆಗಳನ್ನು ಪಾಲುದಾರನ ಹೆಸರಿನಲ್ಲಿಯೇ ತೆಗೆಯಲಾದ ಪಾಲುದಾರನ ಚಾಲ್ತಿ ಖಾತೆಯಲ್ಲಿ ಬರೆಯಲಾಗುತ್ತದೆ. ಅದ್ದರಿಂದ ಪಾಲುದಾರನ ಬಂಡವಾಳ ಖಾತೆಯು ವರ್ಷದಿಂದ ವರ್ಷಕ್ಕೆ ಯಾವಗಲು ಹೆಚ್ಚು ಕಡಿಮೆಯಾಗದೇ ಸ್ಥಿರವಾಗಿರುತ್ತದೆ.

ಲಾಭ ನಷ್ಟದ ಹಂಚಿಕೆ: ಲಾಭ ನಷ್ಟದ ಹಂಚಿಕೆಯನ್ನು ಲಾಭ ನಷ್ಟದ ಹಂಚಿಕೆಯ ಖಾತೆಯಲ್ಲಿ ತೋರಿಸಲಾಗುತ್ತದೆ. ಇದು ಲಾಭ ನಷ್ಟ ಖಾತೆಯ ಮುಂದುವರೆದ ಭಾಗ. ಬಂಡವಾಳದ ಮೇಲಿನ ಬಡ್ಡಿ, ಪಾಲುದಾರರ ಸಂಬಳ / ದಲ್ಲಾಳಿ, ಖರ್ಚು ಹಾಕಲಾಗುತ್ತದೆ ಮತ್ತು ನಿವ್ವಳ ಲಾಭ, ಪಾಲುದಾರರ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಲಾಭ ನಷ್ಟ ಹಂಚಿಕೆಯ ಖಾತೆಗೆ ಜಮಾ ಮಾಡಲಾಗುತ್ತದೆ ಬಾಕಿ ಉಳಿದ ಶಿಲ್ಕುನ್ನು ಪಾಲುದಾರರ ಲಾಭ ನಷ್ಟದ ಪ್ರಮಾಣಕ್ಕೆ ಅನುಗುಣವಾಗಿ ಹಂಚಲಾಗುತ್ತದೆ.

ಅಭ್ಯಾಸಗಳು

ವಿಭಾಗ – ಎ

I. ಎರಡು ಅಂಕಗಳ ಪ್ರಶ್ನೆಗಳು.

1. ಪಾಲುದಾರಿಕೆ ಎಂದರೇನು?
2. ಪಾಲುದಾರಿಕೆಯ ಎರಡು ಲಕ್ಷಣಗಳನ್ನು ತಿಳಿಸಿ.
3. ಪಾಲುದಾರಿಕೆಯ ವ್ಯಾಖ್ಯೆ ನೀಡಿ.
4. ಪಾಲುದಾರಿಕೆಯ ಒಪ್ಪಂದ ಪತ್ರದ ಯಾವುದಾದರೂ ನಾಲ್ಕು ಅಂಶಗಳನ್ನು ಹೇಳಿರಿ.
5. ಪಾಲುದಾರಿಕೆ ಸಂಸ್ಥೆಯಲ್ಲಿ ಬಂಡವಾಳ ಖಾತೆಗಳನ್ನು ತೆರೆಯುವ ವಿಧಾನಗಳನ್ನು ತಿಳಿಸಿ.
6. ಹೆಚ್ಚು ಕಡಿಮೆಯಾಗುವ ಬಂಡವಾಳ ಪದ್ದತಿ ಎಂದರೇನು?
7. ಸ್ಥಿರ ಬಂಡವಾಳ ಪದ್ದತಿ ಎಂದರೇನು?
8. ಲಾಭ ನಷ್ಟದ ಹಂಚಿಕೆಯ ಖಾತೆ ಎಂದರೇನು?
9. ಪಾಲುದಾರಿಕೆ ಸಂಸ್ಥೆಯಲ್ಲಿ ಲಾಭ ನಷ್ಟದ ಹಂಚಿಕೆಯ ಖಾತೆಯನ್ನು ಏಕೆ ತಯಾರಿಸಲಾಗುತ್ತದೆ?

10. ಸ್ಥಿರ ಬಂಡವಾಳ ಪದ್ಧತಿ ಮತ್ತು ಹೆಚ್ಚು ಕಡಿಮೆಯಾಗುವ ಬಂಡವಾಳ ಪದ್ಧತಿಯ ಎರಡು ವ್ಯತ್ಯಾಸಗಳನ್ನು ತಿಳಿಸಿ.
11. ಯಾವ ಎರಡು ಸಂದರ್ಭದಲ್ಲಿ ಸ್ಥಿರ ಬಂಡವಾಳ ಖಾತೆ ಬದಲಾವಣೆಯಾಗುತ್ತದೆ?
12. ಪಾಲುದಾರರ ಚಾಲ್ತಿ ಖಾತೆಯನ್ನು ತಾಳೆ ಪಟ್ಟಿಯಲ್ಲಿ ಎಲ್ಲಿ ತೋರಿಸಲಾಗುತ್ತದೆ?

ವಿಭಾಗ – ಬಿ

II. ಐದು ಅಂಕಗಳ ಪ್ರಶ್ನೆಗಳು. :

1) ಪಾಲುದಾರಿಕೆ ಒಪ್ಪಂದ ಪತ್ರದ ಅನುಪಸ್ಥಿತಿಯಲ್ಲಿ ಯಾವ ಮುಖ್ಯ ಅಂಶಗಳನ್ನು ಗಣನೆಗೆ ತೆಗೆದು ಕೊಳ್ಳಲಾಗುತ್ತದೆ?
2) ಪಾಲುದಾರಿಕೆ ಒಪ್ಪಂದ ಪತ್ರದಲ್ಲಿನ ಯಾವುದಾದರು ಐದು ಅಂಶಗಳನ್ನು ತಿಳಿಸಿ.
3) ಸ್ಥಿರ ಬಂಡವಾಳ ಪದ್ಧತಿ ಮತ್ತು ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.
4) ಆಕಾಶ್ ಮತ್ತು ಭರತ್ ಎಂಬ ಇಬ್ಬರು ಪಾಲುಗಾರರು ಲಾಭ ನಷ್ಟವನ್ನು ಸಮನಾಗಿ ಹಂಚಿಕೊಳ್ಳುವರು 30ನೇ ಸೆಪ್ಟೆಂಬರ್ 2012ಕ್ಕೆ ಕೊನೆಗೊಳ್ಳುವ ಅರ್ಧ ವರ್ಷಗಳ ಆಕಾಶನು ಪ್ರತಿ ತಿಂಗಳಿನ ಕೊನೆಗೆ ₹ 500 ರಂತೆ ನಿಯಮಿತವಾಗಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ತೆಗೆದಿದ್ದಾನೆ. ಅವನ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 8 ರಂತೆ ಬಡ್ಡಿ ಕಂಡುಹಿಡಿಯಿರಿ.

₹ 50/–

5) ಚೇತನ್ ಮತ್ತು ಪೂಜಾರ್ ಎಂಬ ಇಬ್ಬರು ಪಾಲುದಾರರು ಲಾಭ ನಷ್ಟವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುವರು 30ನೇ ಸೆಪ್ಟೆಂಬರ್ 2009ಕ್ಕೆ ಕೊನೆಗೊಳ್ಳುವ ಅರ್ಧವರ್ಷಕ್ಕೆ ಪೂಜಾರ್ ಪ್ರತಿ ತಿಂಗಳಿನ ಮಧ್ಯದಲ್ಲಿ ₹ 800 ಗಳನ್ನು ನಿಯಮಿತವಾಗಿ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆದಿದ್ದಾನೆ. ಪೂಜಾರ್ ಇವರ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 12 ರಂತೆ ಬಡ್ಡಿ ಲೆಕ್ಕ ಹಾಕಿ.

₹ 144/–

6) ದಾನೇಶ್ ಮತ್ತು ದೊಡ್ಡೇಶ್ ಎಂಬುವವರು ಪಲುದಾರರು, 30ನೇ ಸೆಪ್ಟೆಂಬರ್ 2013ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ಅರ್ದ ವರ್ಷಕ್ಕೆ ದಾನೇಶ್ ಇವರು ₹ 1000 ಗಳನ್ನು ನಿಯಮಿತವಾಗಿ ತಿಂಗಳಿನ ಮೊದಲನೆಯ ದಿನಾಂಕದಂದು ತನ್ನ ಸ್ವಂತ ವೆಚ್ಚಕ್ಕಾಗಿ ಹಿಂತೆಗೆದಿರುತ್ತಾನೆ, ಅವನ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇಕಡ 6 ರಂತೆ ಬಡ್ಡಿ ಲೆಕ್ಕ ಹಾಕಿ.

₹ 104/–

7) ಮಹೇಶ್ವರಿಯವರು ಪಾಲುದಾರರಾಗಿದ್ದು ತಮ್ಮ ಸ್ವಂತ ವೆಚ್ಚಕ್ಕಾಗಿ ಹಿಂತೆಗೆದ ಹಣ ಇಂತಿದೆ
30ನೇ ಜೂನ್ 2013ಕ್ಕೆ ₹ 3,000
31ನೇ ಆಗಸ್ಟ್ 2013ಕ್ಕೆ ₹ 2,400
28ನೇ ಫೆಬ್ರವರಿ 2013ಕ್ಕೆ ₹ 1,500
ಸಂಸ್ಥೆಯ ವಾರ್ಷಿಕ ಲೆಕ್ಕ ಪತ್ರಗಳು ಪ್ರತಿ ವರ್ಷ 31ನೇ ಮಾರ್ಚ್‌ಗೆ ಕೊನೆಗೊಳ್ಳುತ್ತವೆ. ಸ್ವಂತ ವೆಚ್ಚಕ್ಕೆ ಪಡೆದಿರುವ ಹಣದ ಮೇಲೆ ವಾರ್ಷಿಕ ಶೇಕಡ 8 ರಂತೆ ಬಡ್ಡಿಯನ್ನು ಆಕರಿಸಬೇಕು, ಹಾಗಾದರೆ ಕುಮಾರಿ ಮಹೇಶ್ವರಿಯ ಸ್ವಂತ ವೆಚ್ಚದ ಮೇಲೆ ಒಟ್ಟು ಮೊತ್ತ ಪದ್ಧತಿಯ ಮೇಲೆ ಬಡ್ಡಿ ಲೆಕ್ಕ ಹಾಕಿರಿ.

₹ 302/–

8) ಮಂಜು ಮತ್ತು ಗಗನ್ ಸಮವಾಗಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ, 31ನೇ ಮಾರ್ಚ್ 2013ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ಮಂಜು ಪ್ರತಿ ತಿಂಗಳಿನ ಕೊನೆಗೆ ₹ 1200 ರಂತೆ ನಿಯಮಿತವಾಗಿ ಹಣ ಹಿಂತೆಗೆದಿರುತ್ತಾನೆ. ಮಂಜು ಇವರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ವಾರ್ಷಿಕ ಶೇ. 6 ರಂತೆ ಬಡ್ಡಿ ಲೆಕ್ಕ ಹಾಕಿರಿ.

₹ 396/–

9) ಅನೀಲ್ ಮತ್ತು ಸುನೀಲ್ ಪಾಲುದಾರರಾಗಿದ್ದು ದಿನಾಂಕ: 1–4–2013ಕ್ಕೆ ಅವರ ಬಂಡವಾಳವು ಕ್ರಮವಾಗಿ ₹ 50,000 ಮತ್ತು ₹ 40,000 ಅಗಿರುತ್ತದೆ. ಅನಿಲ್ ತನ್ನ ಸ್ವಂತ ವೆಚ್ಚಕ್ಕಾಗಿ ಹಣ ಹಿಂತೆಗೆದ ವಿವರ

₹ 2000/– 1–5–2013 ಕ್ಕೆ
₹ 6000/– 31–10–2013 ಕ್ಕೆ
₹ 4000/– 30–11–2013 ಕ್ಕೆ
₹ 6000/– 1–1–2014 ಕ್ಕೆ

ಅನೀಲ್‌ನ ಸ್ವಂತ ವೆಚ್ಚ ಹಿಂತೆಗೆತದ ಮೇಲೆ ವಾರ್ಷಿಕ ಶೇಕಡ 12 ರಂತೆ ಬಡ್ಡಿ ಲೆಕ್ಕ ಹಾಕಿ. ಸಂಸ್ಥೆಯ ಲೆಕ್ಕ ಪತ್ರಗಳು 31ನೇ ಮಾರ್ಚ್ 2013ಕ್ಕೆ ಕೊನೆಗೊಳ್ಳುತ್ತವೆ.

₹ 860/–

10) ಅಜಯ ಮತ್ತು ವಿಜಯ ಸಮಪ್ರಮಾಣದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ಅವರ ಬಂಡವಾಳವು ಕ್ರಮವಾಗಿ ₹ 1,00,000 ಮತ್ತು ₹ 80,000 ಗಳಾಗಿದೆ. ಅವರು ಸ್ವಂತ ವೆಚ್ಚಕ್ಕಾಗಿ ವರ್ಷಾವಧಿಯಲ್ಲಿ ಹಿಂತೆಗೆದ ಹಣ.

ಅಜಯ
30–6–2012ಕ್ಕೆ ₹ 5000
1–9–2012 ಕ್ಕೆ ₹ 6000
1–11–2012 ಕ್ಕೆ ₹ 4500
31–3–2013 ಕ್ಕೆ ₹ 1500

ವಿಜಯನು ಪ್ರತಿ ತಿಂಗಳ ಮಧ್ಯದಲ್ಲಿ ನಿಯಮಿತವಾಗಿ ₹ 1000ಗಳನ್ನು ಹಿಂತೆಗೆದಿದ್ದಾನೆ. ಸಂಸ್ಥೆಯ ಲೆಕ್ಕ ಪತ್ರಗಳು ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳುತ್ತವೆ. ವಾರ್ಷಿಕ ಶೇಕಡ 8 ರಂತೆ ಅವರ ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ಬಡ್ಡಿ ಲೆಕ್ಕ ಹಾಕಿರಿ.

ಅಜಯ : ₹ 730/–
ವಿಜಯ : ₹ 480/–

11) ರಾಮು ಮತ್ತು ಸೋಮು ಪಾಲುದಾರರಾಗಿದ್ದು 3:2ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳವರು. 31ನೇ ಮಾರ್ಚ್ 2013ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ರಾಮು ಪ್ರತಿ ತಿಂಗಳು ಮೊದಲನೇ ದಿನಾಂಕದಂದು ಮತ್ತು ಸೋಮ ₹ 1000ಗಳನ್ನು ಪ್ರತಿ ತಿಂಗಳು ಕೊನೆಯ ದಿನಾಂಕ ದಂದು ನಿಯಮಿತವಾಗಿ ತಮ್ಮ ಸ್ವಂತ ವೆಚ್ಚಕ್ಕೆ ಹಿಂತೆಗೆದಿರುತ್ತಾರೆ. ವಾರ್ಷಿಕ ಶೇಕಡ 9 ರಂತೆ ರಾಮು ಮತ್ತು ಸೋಮುವಿನ ಸ್ವಂತ ವೆಚ್ಚದ ಮೇಲೆ ಬಡ್ಡಿಯನ್ನು ಸರಾಸರಿ ಪದ್ಧತಿಯ ವಿಧಾನದಲ್ಲಿ ಕಂಡು ಹಿಡಿಯಿರಿ.

ರಾಮು : ₹ 877.50/–
ಸೋಮು : ₹ 495/–

12) ಚಿರಾಗ್, ಪವನ್ ಮತ್ತು ಪ್ರಕಾಶ್ ಎಂಬವರು ಪಾಲುದಾರರಾಗಿರುವರು, ಅವರು ಸ್ವಂತ ವೆಚ್ಚಕ್ಕಾಗಿ ವ್ಯಾಪಾರದಿಂದ ಹಿಂತೆಗೆದ ಹಣ ಕೆಳಗಿನಂತಿದೆ.

ಚಿರಾಗ್ ₹ 2,000 ಪ್ರತಿ ತಿಂಗಳ ಮೊದಲ ದಿನ ಪವನ್ ₹ 2,500 ಪ್ರತಿ ತಿಂಗಳ ದಿನಾಂಕ: 15 ರಂದು ಮತ್ತು ಪ್ರಕಾಶ್ ₹ 1,500 ಪ್ರತಿ ತಿಂಗಳ ಕೊನೆಯ ದಿನ.

ವಾರ್ಷಿಕ ಶೇಕಡ 12ರಂತೆ ಪಾಲುದಾರರ ಸ್ವಂತ ವೆಚ್ಚದ ಮೇಲೆ 31 ಮಾರ್ಚ್ 2013ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ಬಡ್ಡಿ ಕಂಡು ಹಿಡಿಯಿರಿ.

ಚಿರಾಗ್ ₹ 1560, ಪವನ್ ₹ 1800, ಪ್ರಕಾಶ್ ₹ 990.

13) ಕನಕ ಮತ್ತು ಈಶ್ವರ ಎಂಬ ಪಾಲುದಾರರು ದಿನಾಂಕ: 01–4–2012ರಂದು ಕ್ರಮವಾಗಿ ₹ 1,00,000 ಮತ್ತು ₹ 80,000 ಬಂಡವಾಳದೊಂದಿಗೆ ಪಾಲುದಾರಿಕೆ ವ್ಯವಹಾರ ಪ್ರಾರಂಭಿಸಿದ್ದು 2:1ರ ಪ್ರಮಾಣದಲ್ಲಿ ಲಾಭ ನಷ್ಟ ಹಂಚಿಕೊಳ್ಳುವರು. ವರ್ಷಾಂತ್ಯಕ್ಕೆ ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ₹ 24,000/– ಲಾಭ ಗಳಿಸಿರುತ್ತಾರೆ.

ಎ) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೆ. 5 ರಂತೆ

ಬಿ) ಸ್ವಂತ ವೆಚ್ಚದ ಮೇಲಿನ ಬಡ್ಡಿ ಕನಕ ₹ 1,500 ಹಾಗೂ ಈಶ್ವರ ₹ 1000

ಸಿ) ಈಶ್ವರ್‌ಗೆ ಸಂಬಳ ವಾರ್ಷಿಕ ₹ 4,000

ಪಾಲುದಾರಿಕೆಯ ಲಾಭ ನಷ್ಟದ ಹಂಚಿಕೆ ಖಾತೆಯನ್ನು ತೆಗೆಯಿರಿ.

₹ 13,500/–

14) ರಾಮ ಮತ್ತು ಲಕ್ಷ್ಮಣ ಪಾಲುದಾರಿಕೆ ಸಂಸ್ಥೆ ಪ್ರಾರಂಭಿಸಲು ಒಪ್ಪಂದ ಮಾಡಿಕೊಂಡಿದ್ದು ದಿನಾಂಕ: 1–4–2012ಕ್ಕೆ ಅವರು ಕ್ರಮವಾಗಿ ₹2,00,000 ಮತ್ತು ₹1,50,000 ಬಂಡವಾಳ ತೊಡಗಿಸಿರುತ್ತಾರೆ ಮತ್ತು ಲಾಭವನ್ನು ಸಮನಾಗಿ ಹಂಚಿಕೊಳ್ಳಲು ತೀರ್ಮಾಸಿರುತ್ತಾರೆ.

ರಾಮನಿಗೆ ವಾರ್ಷಿಕ ₹ 10,000 ಗಳನ್ನು ಸಂಬಳ ಕೊಡಬೇಕು ಬಂಡವಾಳದ ಮೇಲೆ ಬಡ್ಡಿಯನ್ನು ವಾರ್ಷಿಕ ಶೇ. 6 ರಂತೆ ಕೊಡಬೇಕು. ವರ್ಷಾವಧಿಯಲ್ಲಿ ಸ್ವಂತ ವೆಚ್ಚಕ್ಕಾಗಿ ರಾಮನು ₹ 12,000ಗಳನ್ನು ಲಕ್ಷ್ಮಣನು ₹ 8,000 ಹಿಂತೆಗೆದಿರುತ್ತಾರೆ ಮತ್ತು ಅದರ ಮೇಲಿನ ಬಡ್ಡಿಯು ಕ್ರಮವಾಗಿ ₹ 1,200 ಮತ್ತು ₹ 800 ಅಗಿರುತ್ತದೆ. ಈ ಮೇಲಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ದಿನಾಂಕ: 31ನೇ ಮಾರ್ಚ್ 2013ಕ್ಕೆ ಅವರು ₹ 38,000 ಲಾಭವನ್ನು ಗಳಿಸಿರುತ್ತಾರೆ.

ಲಾಭ ನಷ್ಟ ವಿನಿಯೋಗ ಖಾತೆಯನ್ನು ತಯಾರಿಸಿರಿ. **ಲಾಭ 9,000/–**

15) ರಾಜಪ್ಪ ಮತ್ತು ಶಿವಲಿಂಗಪ್ಪ 3:2ರ ಪ್ರಮಾಣದಲ್ಲಿ ಲಾಭವನ್ನು ಹಂಚಿಕೊಳ್ಳುವ ಪಾಲುದರರಾಗಿದ್ದು ಅವರ ಬಂಡವಾಳವು ಕ್ರಮವಾಗಿ ₹ 80,000 ಮತ್ತು ₹ 60,000 ಗಳಾಗಿರುತ್ತದೆ. ಪಾಲುದಾರಿಕೆ ಒಪ್ಪಂದದ ಪ್ರಕಾರ ಬಂಡವಾಳದ ಮೇಲೆ ವಾರ್ಷಿಕ ಶೇ. 5 ರಷ್ಟು ಬಡ್ಡಿ ಕೊಡಬೇಕು. ಶಿವಲಿಂಗಪ್ಪನಿಗೆ ಪ್ರತಿ ತಿಂಗಳು ₹ 400 ರಂತೆ ಮೊದಲ 8 ತಿಂಗಳಿಗೆ ಹಾಗೂ ₹ 600 ರಂತೆ ಉಳಿದ ತಿಂಗಳುಗಳಿಗೆ ಸಂಬಳ ಕೊಡಬೇಕು. ವರ್ಷಾವಧಿಯಲ್ಲಿ ಅವರು ತಮ್ಮ ಸ್ವಂತ ವೆಚ್ಚಕ್ಕಾಗಿ ಕ್ರಮವಾಗಿ ₹ 10,000 ಮತ್ತು ₹ 8000ಗಳನ್ನು ಹಿಂತೆಗೆದಿರುತ್ತಾರೆ. ಈ ಮೇಲಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ಅವರು ₹ 18,600 ಲಾಭಗಳಿಸಿರುತ್ತಾರೆ. ವರ್ಷಾಂತ್ಯಕ್ಕೆ ಅವರ ಲಾಭ-ನಷ್ಟದ ಹಂಚಿಕೆಯ ಖಾತೆಯನ್ನು ತಯಾರಿಸಿರಿ.

ಲಾಭ ₹ 6000/-

16) ಶೈಲಜ, ಶ್ರೀದೇವಿ ಮತ್ತು ಶೀಲ 5:3:2ರ ಪ್ರಮಾಣದಲ್ಲಿ ಲಾಭ ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದು ಅವರು ಕ್ರಮವಾಗಿ ₹ 1,00,000 ₹ 60,000 ಮತ್ತು ₹ 40,000 ಗಳ ಬಂಢವಾಳ ತೊಡಗಿಸಿರುತ್ತಾರೆ. ಪಾಲುದಾರಿಕೆಯ ಒಪ್ಪಂದದ ಪ್ರಕಾರ ಈ ಕೆಳಗಿನವುಗಳಿಗೆ ಅವರು ಹಕ್ಕು ಬಾದ್ಯಸ್ಥರಾಗಿರುತ್ತಾರೆ.

ಎ) ಬಂಡವಾಳದ ಮೇಲೆ ವಾರ್ಷಿಕ ಶೇ. 12 ರಂತೆ

ಬಿ) ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ ವಾರ್ಷಿಕ ಶೇ. 10 ರಂತೆ

ಸಿ) ಪ್ರತಿ ತಿಂಗಳಿಗೆ ₹ 1000 ದಂತೆ ಶ್ರೀದೇವಿಯವರಿಗೆ ಸಂಬಳ ಕೊಡಬೇಕು.

ಅವರು ಅದನ್ನು ಹಿಂತೆಗೆದಿರುವುದಿಲ್ಲ ವರ್ಷಾವಧಿಯಲ್ಲಿ ಅವರು ತಮ್ಮ ಸ್ವಂತ ವೆಚ್ಚಕ್ಕಾಗಿ ಕ್ರಮವಾಗಿ ₹ 16,000, ₹ 14,000 ಮತ್ತು ₹ 10,000 ಗಳನ್ನು ಹಿಂತೆಗೆದಿರುತ್ತಾರೆ ಮತ್ತು ಬಡ್ಡಿಯು ಕ್ರಮವಾಗಿ ₹ 1,600, ₹ 1,400, ₹ 1000 ಅಗಿರುತ್ತದೆ.

ಈ ಮೇಲಿನ ಹೊಂದಾಣಿಕೆಗಳನ್ನು ಮಾಡುವ ಮೊದಲು ₹ 39000 ಲಾಭವನ್ನು ಗಳಿಸಿರುತ್ತಾರೆ. ದಿನಾಂಕ: 31-3-2014ಕ್ಕೆ ಕೊನೆಗೊಳ್ಳುವ ವರ್ಷಂತ್ಯಕ್ಕೆ ಅವರ ಲಾಭ ನಷ್ಟ ಹಂಚಿಕೆ ಖಾತೆಯನ್ನು ತಯಾರಿಸಿರಿ.

ಲಾಭ ₹ 7000/-

17) ಸಾವಿತ್ರಿ ಮತ್ತು ಭಾರತಿ 3:2ರ ಪ್ರಮಾಣದಲ್ಲಿ ಲಾಭವನ್ನು ಹಂಚಿಕೊಳ್ಳುವ ಪಾಲುದಾರರಾಗಿದ್ದು ಅವರ ಬಂಡವಾಳವು ಕ್ರಮವಾಗಿ ₹ 50,000 ಮತ್ತು ₹ 40,000 ಅಗಿರುತ್ತದೆ. ವರ್ಷಾವಧಿಯಲ್ಲಿ ಅವರ ಸ್ವಂತ ವೆಚ್ಚ ಹಿಂತೆಗೆತವು ಸಾವಿತ್ರಿ ₹ 6,000 ಮತ್ತು ಭಾರತಿ ₹ 4,000 ಗಳಾಗಿರುತ್ತದೆ. ಭಾರತಿಯವರಿಗೆ ಪ್ರತಿ ತಿಂಗಳಿಗೆ ಸಂಬಳವಾಗಿ ₹ 250 ರಂತೆ ಕೊಡಬೇಕು. ಪಾಲುದಾರಿಕೆ ಒಪ್ಪಂದದ ಪ್ರಕಾರ ಪಾಲುದಾರರ ಬಂಡವಾಳದ ಮೇಲೆ ಬಡ್ಡಿಯನ್ನು ವಾರ್ಷಿಕ ಶೆ. 5 ರಂತೆ ಮತ್ತು ಸ್ವಂತ ವೆಚ್ಚದ ಹಿಂತೆಗೆತದ ಮೇಲೆ ವಾರ್ಷಿಕ ಶೇಕಡ 6 ರಂತೆ ನೀಡಬೇಕು.

ವರ್ಷಾಂತ್ಯಕ್ಕೆ ಅವರ ಲಾಭವು ಬಂಡವಾಳದ ಮೇಲಿನ ಬಡ್ಡಿ ಮತ್ತು ಪಾಲುದಾರರ ಸಂಬಳವನ್ನು ಕೊಡುವ ಮೊದಲು ಮತ್ತು ಸ್ವಂತ ವೆಚ್ಚದ ಮೇಲಿನ ಬಡ್ಡಿ ಆಕರಿಸಿದ ನಂತರ ₹ 14,000ಗಳಷ್ಟಿರುತ್ತದೆ.

ಲಾಭ ನಷ್ಟದ ಹಂಚಿಕೆಯ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿರಿ.

ಉತ್ತರ: ₹ 6500

ಬಂಢವಾಳ ಖಾತೆ : (ಎ) ಸಾವಿತ್ರಿ – 50220 (ಬಿ) ಭಾರತಿ – 43480

18) ದಿನಾಂಕ: 1–4–2013ರಂದು ರಜತ್, ಶರತ್ ಮತ್ತು ತೇಜಸ್ 5:3:2 ರ ಪ್ರಮಾಣದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದು ಅವರ ಬಂಡವಾಳವು ಕ್ರಮವಾಗಿ ₹ 30,000, ₹ 20,000 ಮತ್ತು ₹ 10,000 ಗಳಾಗಿರುತ್ತದೆ,. ಪಾಲುದಾರಿಕೆ ಒಪ್ಪಂದದ ಪ್ರಕಾರ ಪ್ರತಿ ತಿಂಗಳು ಶರತ್‌ನಿಗೆ ₹ 500 ರಂತೆ ತೇಜಸ್‌ನಿಗೆ ₹ 400 ರಂತೆ ಸಂಬಳ ನೀಡಲಾಗುವುದು ಎಲ್ಲಾ ಪಾಲುದಾರರು ತಮ್ಮ ಬಂಡವಾಳದ ಮೇಲೆ ವಾರ್ಷಿಕ ಶೇಕಡ 5%ರಂತೆ ಬಡ್ಡಿ ಪಡೆಯುವ ಹಕ್ಕುಳ್ಳವರಾಗಿದ್ದಾರೆ ವರ್ಷಾವಧಿಯಲ್ಲಿ ಅವರು ತಮ್ಮ ವೆಚ್ಚಕ್ಕಾಗಿ ಕ್ರಮವಾಗಿ ₹ 3000, ₹ 2000 ಮತ್ತು ₹ 1000 ಹಣ ಹಿಂತೆಗೆದಿರುತ್ತಾರೆ ಮತ್ತು ಸ್ವಂತ ವೆಚ್ಚದ ಮೇಲಿನ ಬಡ್ಡಿಯು ಕ್ರಮವಾಗಿ ₹ 300, ₹ 200, ಹಾಗೂ ₹ 100 ಆಗಿರುತ್ತದೆ.

ವರ್ಷಾಂತ್ಯದಲ್ಲಿ ಅವರ ಲಾಭವು ₹ 19,200 ಆಗಿರುತ್ತದೆ.

31ನೇ ಮಾರ್ಚ್ 2014ಕ್ಕೆ ಅಂತ್ಯವಾಗುವಂತೆ ಲಾಭ–ನಷ್ಟ ಹಂಚಿಕೆಯ ಖಾತೆಯನ್ನು ತೆಗೆಯಿರಿ.

₹ 6000/–

19) ದಿನಾಂಕ: 1–4–2001ರಂದು ಪ್ರಕಾಶ್ ಮತ್ತು ಪ್ರವೀಣ ಪಾಲುದಾರಿಕೆಯ ವ್ಯವಹಾರ ಪ್ರಾರಂಭಿಸಿದ್ದು ಅವರು ಕ್ರಮವಾಗಿ ₹ 50,000 ಮತ್ತು ₹ 40,000 ಬಂಡವಾಳ ತೊಡಗಿಸಿರುತ್ತಾರೆ. ಲಾಭವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ. ದಿನಾಂಕ: 31–3–2002ರ ವರ್ಷಾಂತ್ಯದಲ್ಲಿ ಅವರು ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡುವುದಕ್ಕಿಂತ ಮುಂಚೆ ₹ 18,000 ಲಾಭ ಗಳಿಸಿರುತ್ತಾರೆ.

ಎ) ಬಂಡವಾಳದ ಮೇಲೆ ಬಡ್ಡಿ ವಾರ್ಷಿಕ ಶೇ. 5%.

ಬಿ) ಸ್ವಂತ ವೆಚ್ಚದ ಮೇಲಿನ ಬಡ್ಡಿ : ಪ್ರಕಾಶ ₹ 300 ಮತ್ತು ಪ್ರವೀಣ ₹ 500.

ಸಿ) ವಾರ್ಷಿಕ ಸಂಬಳ ಪ್ರವೀಣನಿಗೆ ₹ 5,000 ವರ್ಷಾವಧಿಯಲ್ಲಿ ಅವರ ಸ್ವಂತ ವೆಚ್ಚ ಹಿಂತೆಗೆತ ಪ್ರಕಾಶ್ ₹ 8000 ಮತ್ತು ಪ್ರವೀಣ ₹ 10,000.

ಲಾಭ ನಷ್ಟ ವಿನಿಯೋಗ ಖಾತೆ ತಯಾರಿಸಿರಿ.

ಲಾಭ– ₹ 9300

20) ಸುಮಿತ್ರ, ಗೌರ ಮತ್ತು ಜಯ ದಿನಾಂಕ: 1–4–2010ರಂದು ಪಾಲುದಾರಿಕೆ ವ್ಯವಹಾರ ಪ್ರಾರಂಭಿಸಿದ್ದು ಕ್ರಮವಾಗಿ ₹ 5,00,000 ₹ 4,00,000, ₹ 3,00,000 ಬಂಡವಾಳ ತೊಡಗಿಸಿರುತ್ತಾರೆ. 3:2:1ರ ಪ್ರಮಾಣದಲ್ಲಿ ಲಾಭ ಹಂಚಿಕೊಳ್ಳಲು ತೀರ್ಮಾನಿಸಿರುತ್ತಾರೆ.

ಪಾಲುದಾರಿಕೆ ಒಪ್ಪಂದದಂತೆ ಪ್ರತಿ ತಿಂಗಳಿಗೆ ₹ 10,000 ದಂತೆ ಸುಮಿತ್ರಳಿಗೆ ಸಂಬಳ ಮತ್ತು ಗೌರಳಿಗೆ ವಾರ್ಷಿಕ ದಲ್ಲಾಳಿ ರೂ 50,000 ಹಾಗೂ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೆ. 6 ರಂತೆ ಕೊಡಬೇಕು.

ಪಾಲುದಾರರು ತಮ್ಮ ಸ್ವಂತ ವೆಚ್ಚಕ್ಕೆ ವ್ಯವಹಾರದಿಂದ ಸುಮಿತ್ರಳು ₹ 60,000, ಗೌರ ₹ 40,000 ಮತ್ತು ಜಯಾಳು ₹ 20,000 ಹಿಂತೆಗೆದಿರುತ್ತಾರೆ. ಸ್ವಂತ ವೆಚ್ಚದ ಮೇಲಿನ ಬಡ್ಡಿಯು ಕ್ರಮವಾಗಿ ಸುಮಿತ್ರ 2700 ಗೌರ ₹ 1800 ಮತ್ತು ಜಯಾ ₹ 900 ಆಗಿರುತ್ತದೆ.

2010–11ನೇ ವರ್ಷಾಂತ್ಯಕ್ಕೆ ಅವರ ನಿವ್ವಳ ಲಾಭವು ₹ 3,56,600 ಆಗಿರುತ್ತದೆ.

ಲಾಭ ನಷ್ಟ ಹಂಚಿಕೆಯ ಖಾತೆ ಹಾಗೂ ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿರಿ.

ಬಂಡವಾಳ: (ಎ) ಸುಮಿತ್ರ 6,57,300, ಗೌರ–4,72,200 ಜಯಾ 3,17,100.

21) ಅಶ್ವಿನಿ, ಭರಣಿ ಮತ್ತು ಕೃತಿಕಾ ಪಾಲುದಾರರಾಗಿದ್ದು ಲಾಭ-ನಷ್ಟವನ್ನು 2:2:1ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ದಿನಾಂಕ: 1-4-2012ರಲ್ಲಿ ಪಾಲುದಾರರ ಬಂಡವಾಳವು ಕ್ರಮವಾಗಿ ₹ 1,00,000 ₹ 80,000 ಮತ್ತು ₹ 60,000 ಗಳಾಗಿರುತ್ತದೆ.

ಪಾಲುದಾರಿಕೆಯ ಒಪ್ಪಂದವು ಈ ಕೆಳಗಿನವುಗಳಿಗೆ ಅನುಮತಿ ನೀಡಿದೆ.

ಎ) ಬಂಡವಾಳದ ಮೇಲೆ ಬಡ್ಡಿ ವಾರ್ಷಿಕ ಶೆ. 8 ರಂತೆ.

ಬಿ) ಅಶ್ವಿನಿಯ ಸಂಬಳ ಪ್ರತಿ ತಿಂಗಳಿಗೆ ₹ 500ರಂತೆ,

ಸಿ) ವರ್ಷಾವಧಿಯಲ್ಲಿ ಅವರ ಸ್ವಂತ ವೆಚ್ಚಕ್ಕೆ ಹಿಂತೆಗೆತ ಕ್ರಮವಾಗಿ ₹ 10,000, ₹ 8,000 ಮತ್ತು ₹ 6,000.

ಡಿ) ಸ್ವಂತ ವೆಚ್ಚದ ಮೇಲಿನ ಬಡ್ಡಿ ಕ್ರಮವಾಗಿ ₹ 1,000, ₹ 800, ₹ 600.

ವರ್ಷಾಂತ್ಯದಲ್ಲಿ ಅವರು ಪಾಲುದಾರರ ಸಂಬಳ ಕೊಟ್ಟ ನಂತರ ಮತ್ತು ಬಂಡವಾಳದ ಮೇಲಿನ ಬಡ್ಡಿ ಹಾಗೂ ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿಯನ್ನು ಕೊಡುವುದಕ್ಕೆ ಮೊದಲು ಲಾಭ ₹ 39,000 ಇತ್ತು. 31-3-2013ಕ್ಕೆ ಕೊನೆಗೊಳ್ಳುವ ವರ್ಷಾಂತ್ಯಕ್ಕೆ ಲಾಭ-ನಷ್ಟ ಹಂಚಿಕೆಯ ಖಾತೆಯನ್ನು ತಯಾರಿಸಿರಿ.

ಲಾಭ: 22,200

ಪ್ರಾಯೋಗಿಕ ಆಧಾರಿತ ಪ್ರಶ್ನೆಗಳು

1) ಪಾಲುದಾರಿಕೆ ಒಪ್ಪಂದದ ಅನುಪಸ್ಥಿತಿಯಲ್ಲಿ ಈ ಕೆಳಗಿನವುಗಳನ್ನು ಯಾವ ರೀತಿ ಪರಿಗಣಿಸುವಿರಿ.

ಎ) ಬಂಡವಾಳದ ಮೇಲೆ ಬಡ್ಡಿ

ಬಿ) ಸ್ವಂತ ವೆಚ್ಚದ ಹಿಂತೆಗೆತದ ಮೇಲಿನ ಬಡ್ಡಿ

ಸಿ) ಮುಂಗಡ ಸಾಲದ ಮೇಲಿನ ಬಡ್ಡಿ

ಡಿ) ಲಾಭ ನಷ್ಟದ ಹಂಚಿಕೆ

ಇ) ಪಾಲುದಾರನಿಗೆ ಸಂಬಳ

2) ಐದು ಕಾಲ್ಪನಿಕ ಅಂಕಿ-ಸಂಖ್ಯೆಗಳನ್ನು ಬಳಸಿಕೊಂಡು ಲಾಭ ನಷ್ಟದ ಹಂಚಿಕೆಯ ಖಾತೆಯನ್ನು ತಯಾರಿಸಿರಿ.

3) ಐದು ಕಾಲ್ಪನಿಕ ಅಂಕಿ-ಸಂಖ್ಯೆಗಳನ್ನು ಬಳಸಿಕೊಂಡು ಇಬ್ಬರು, ಪಾಲುದಾರರ ಬಂಡವಾಳ ಖಾತೆಗಳನ್ನು ಹೆಚ್ಚು ಕಡಿಮೆಯಾಗುತ್ತಿರುವ ಬಂಡವಾಳ ಪದ್ಧತಿಯಲ್ಲಿ ತಯಾರಿಸಿರಿ.

ಅಥವಾ

ಐದು ಕಾಲ್ಪನಿಕ ಅಂಕಿ ಸಂಖ್ಯೆಗಳನ್ನು ಬಳಸಿ ಇಬ್ಬರು ಪಾಲುದಾರರ ಚಾಲ್ತಿ ಖಾತೆಯನ್ನು ಸ್ಥಿರ ಬಂಡವಾಳ ಪದ್ಧತಿಯಲ್ಲಿ ತಯಾರಿಸಿರಿ.

❖ ❖ ❖ ❖ ❖

ಅಧ್ಯಾಯ – 3

ಪಾಲುಗಾರಿಕೆಯ ಖಾತೆಗಳು – ಪಾಲುಗಾರನ ಪ್ರವೇಶ

ಕಲಿಕೆಯ ಉದ್ದೇಶಗಳು :

ಈ ಅಧ್ಯಯವನ್ನು ಕಲಿತುಕೊಂಡ ಮೇಲೆ ನೀವೂಗಳು,

- ❒ ಪಾಲುಗಾರನ ಪ್ರವೇಶ ಹಾಗೂ ಪಾಲುಗಾರಿಕೆಸಂಸ್ಥೆ ಪುನರ್‌ಸ್ಥಾಪನೆಯ ರೀತಿಯ ಬಗ್ಗೆ ತಿಳಿದುಕೊಳ್ಳುತ್ತೀರಾ.
- ❒ ಹೊಸ ಪಾಲುಗಾರನು ಸೇರಿದಾಗ ಸಂಸ್ಥೆಯ ಲೆಕ್ಕಪುಸ್ತಕದಲ್ಲಿ ಮಾಡಿಕೊಳ್ಳಬೇಕಾದ ವಿಷಯಗಳ ಹೊಂದಾಣಿಕೆಗಳನ್ನು ಗುರುತಿಸುತ್ತೀರಾ.
- ❒ ತ್ಯಾಗಅನುಪಾತ ಹಾಗೂ ಹೊಸಅನುಪಾತಕ್ಕೆ ಸಂಬಂಧಿಸಿದಂತೆ ಪರಿಕಲ್ಪನೆ ಹಾಗೂ ಕಂಡುಹಿಡಿಯುವುದನ್ನು ತಿಳಿಯುತ್ತೀರಾ.
- ❒ ಆಸ್ತಿಗಳು ಹಾಗೂ ಅದರ ಹೊಣೆಗಾರಿಕೆಗಳ ಪುನರ್‌ಮೌಲ್ಯಮಾಪನಗಳನ್ನು ಅಗತ್ಯ ಹೊಂದಾಣಿಕೆಗಳನ್ನು ಮಾಡುತ್ತೀರಾ.
- ❒ ಮೀಸಲು ಹಾಗೂ ಶೇಖರಣೆಗೊಂಡ ಲಾಭ ಮತ್ತು ನಷ್ಟಗಳ ಬಗ್ಗೆ ಅಗತ್ಯ ಹೊಂದಾಣಿಕೆ ಮಾಡುತ್ತೀರಾ.
- ❒ ವಿಭಿನ್ನ ಸನ್ನಿವೇಶ ಹಾಗೂ ಸಂದರ್ಭಗಳಲ್ಲಿ ಕೀರ್ತಿಮೌಲ್ಯದ ಬಗ್ಗೆ ಮೌಲ್ಯ ಮಾಡುವ ವಿಧಗಳು ಹಾಗೂ ಪರಿಗಣಿಕೆಯ ಬಗ್ಗೆ ಒಂದು ಪರಿಕಲ್ಪನೆ ಮೂಡಿರುತ್ತದೆ.
- ❒ ಪಾಲುಗಾರರ ಬಂಡವಾಳವನ್ನು ಕಂಡು ಹಿಡಿಯುವ ಹಾಗೂ ಅಗತ್ಯ ಬಂದಲ್ಲಿ ಹೊಸ ಅನುಪಾತದಲ್ಲಿ ಬಂಡವಾಳವನ್ನು ಪಾಲುದಾರರಿಗೆ ಹಂಚುವುದನ್ನು ತಿಳಿಯುತ್ತೀರಾ.
- ❒ ಅಗತ್ಯವಿರುವ ಖಾತೆ ಪುಸ್ತಕಗಳನ್ನು ಹಾಗೂ ಅಡಾವೆ ಪತ್ರಿಕೆಯನ್ನು ತಯಾರಿಸುತ್ತೀರಾ.

ಪೀಠಿಕೆ:

ಭಾರತೀಯ ಪಾಲುಗಾರಿಕೆಯ ಖಾಯ್ದೆ 1932ರ ವಿಧಿ31ರ ಅಡಿಯಲ್ಲಿ ಯಾವುದೇ ಅರ್ಹವ್ಯಕ್ತಿಯನ್ನು ಪಾಲುಗಾರನನ್ನಾಗಿ ಸೇರಿಸಿಕೊಳ್ಳಬಹುದು. ಇದಕ್ಕಾಗಿ ಇತರೆ ಎಲ್ಲ ಪಾಲುದಾರರ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು. ಅಥವಾ ಪಾಲುಗಾರಿಕೆಯ ಕರಾರು ಪತ್ರದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿರಬೇಕು. ಪಾಲುಗಾರನನ್ನು ಈ ಕೆಳಕಂಡ ಕಾರಣಗಳಿಗಾಗಿ ಪಾಲುಗಾರಿಕೆಸಂಸ್ಥೆಗೆ ಸೇರಿಸಿಕೊಳ್ಳಬಹುದು.

- ಬಂಡವಾಳವನ್ನು ಹೆಚ್ಚಿಸಲು
- ವ್ಯವಹಾರವನ್ನು ವಿಸ್ತರಿಸಲು
- ಆಡಳಿತದಲ್ಲಿ ಸುಧಾರಣೆ ತರಲು ಮತ್ತು
- ಸಂಸ್ಥೆಯ ಕೀರ್ತಿ ಮೌಲ್ಯವನ್ನು ಹೆಚ್ಚಿಸಲು

3.1. ಪಾಲುದಾರನ ಪ್ರವೇಶ (Admission of a partner):

ಅರ್ಥ:

ಪಾಲುಗಾರಿಕೆಸಂಸ್ಥೆಯ ಅನುಕೂಲಕ್ಕಾಗಿ ಯಾವುದೇ ವ್ಯಕ್ತಿಯನ್ನು ಪಾಲುಗಾರನನ್ನಾಗಿ ಸೇರಿಸಿಕೊಳ್ಳುವುದಕ್ಕೆ ಪಾಲುದಾರನ ಪ್ರವೇಶ ಎನ್ನುತ್ತೇವೆ.

3.2. ಪಾಲುದಾರನ ಪ್ರವೇಶಕ್ಕೆ ಸಂಬಂಧಿಸಿದ ಅನುಪಾತಗಳು:

ಅ) ತ್ಯಾಗ ಅನುಪಾತ

ಆ) ಹೊಸ ಅನುಪಾತ ಅಥವಾ ಹೊಸಲಾಭದ ಭಾಗೀಕರಣದ ಅನುಪಾತ

ತ್ಯಾಗ ಅನುಪಾತ:

ಅರ್ಥ:

ಹೊಸಪಾಲುದಾರನ ನೇಮಕಾತಿಯ ಕಾರಣದಿಂದ ಹಳೆಯಪಾಲುದಾರರು ಹೊಸ ಪಾಲುದಾರನಿಗೆ ತಮ್ಮ ಲಾಭದ ಭಾಗದಲ್ಲಿ ಅರ್ಪಿಸುವ ಅಥವಾ ತ್ಯಾಗ ಮಾಡುವುದಕ್ಕೆ ತ್ಯಾಗ ಅನುಪಾತ ಎಂದು ಕರೆಯುತ್ತೇವೆ. ತ್ಯಾಗದ ಅನುಪಾತವು ಹೊಸ ಅನುಪಾತದ ಮತ್ತು ಹಳೆಯ ಅನುಪಾತದ ನಡುವಿನ ವ್ಯತ್ಯಾಸವಾಗಿರುತ್ತದೆ.

ತ್ಯಾಗ ಪಾಲು = ಹಳೆಯ ಪಾಲು – ಹೊಸಪಾಲು

ತ್ಯಾಗ ಅನುಪಾತವನ್ನು ಕಂಡುಹಿಡಿಯುವ ಅಗತ್ಯತೆ:

ಹೊಸ ಪಾಲುದಾರನು ಕೀರ್ತಿಮೌಲ್ಯವನ್ನು ನಗದುರೂಪದಲ್ಲಿ ತಂದಾಗ ಅದನ್ನು ತ್ಯಾಗ ಅನುಪಾತದಲ್ಲಿ ವಿತರಿಸಿಕೊಳ್ಳುವ/ಹಂಚಿಕೊಳ್ಳುವುದಕ್ಕಾಗಿ ತ್ಯಾಗ ಅನುಪಾತವನ್ನು ಕಂಡು ಹಿಡಿಯುತ್ತೇವೆ.

ತ್ಯಾಗ ಅನುಪಾತವನ್ನು ಕಂಡುಹಿಡಿಯಲು ಸಂಬಂಧಿಸಿದ ಲೆಕ್ಕಗಳು: (Problems)

ಈ ಕೆಳಕಂಡ ಸನ್ನಿವೇಶಗಳಲ್ಲಿ ತ್ಯಾಗ ಅನುಪಾತವನ್ನು ಕಂಡುಹಿಡಿಯಬಹುದು. ಅವು ಯಾವುವೆಂದರೆ:

1) ಹಳೆಯಪಾಲುಗಾರರ ಹಳೆಯಅನುಪಾತ ಹಾಗೂ ಕೇವಲ ಹೊಸಪಾಲುಗಾರನ ಲಾಭದ ಭಾಗವನ್ನು ಮಾತ್ರ ಲೆಕ್ಕದಲ್ಲಿ ಕೊಟ್ಟಿದ್ದರೆ.
2) ಹಳೆಯಪಾಲುಗಾರರ ಹಳೆಯಅನುಪಾತ, ಹೊಸಪಾಲುಗಾರನ ಪಾಲು ಮತ್ತು ಹೊಸಪಾಲುಗಾರನು ಪಡೆದ ಭಾಗವನ್ನು ಲೆಕ್ಕದಲ್ಲಿ ಕೊಟ್ಟಿದ್ದರೆ.
3) ಹಳೆಯ ಪಾಲುಗಾರರು ತಮ್ಮ ಪಾಲಿನಲ್ಲಿ ಹೊಸ ಪಾಲುದಾರನಿಗೆ ಭಾಗಶಃ ಪಾಲನ್ನು ಅರ್ಪಿಸಿದರೆ.
4) ಹಳೆಯ ಅನುಪಾತ ಹಾಗೂ ಹೊಸ ಅನುಪಾತವನ್ನು ಕೊಟ್ಟಾಗ.
5) ಹಳೆಯ ಪಾಲುದಾರರ ಹಳೆಯ ಅನುಪಾತ ಮತ್ತು ಹೊಸ ಪಾಲುಗಾರನ ಪಾಲನ್ನು ಕೊಟ್ಟಾಗ ಹಾಗೂ ಉಳಿದ ಪಾಲನ್ನು ಹಳೆಯ ಪಾಲುಗಾರರು ಹಂಚಿಕೊಳ್ಳುವ ಅನುಪಾತವನ್ನು ಕೊಟ್ಟಾಗ.

ಪ್ರಕರಣ 1: ಹಳೆಯ ಪಾಲುಗಾರರ ಹಳೆಯ ಅನುಪಾತ ಹಾಗೂ ಕೇವಲ ಹೊಸಪಾಲುಗಾರನ ಲಾಭದ ಭಾಗವನ್ನು ಮಾತ್ರ ಲೆಕ್ಕದಲ್ಲಿ ಕೊಟ್ಟಿದ್ದರೆ. ಈ ಪ್ರಕರಣದಲ್ಲಿ ಹಳೆ ಅನುಪಾತವೇ ತ್ಯಾಗ ಅನುಪಾತವಾಗಿರುತ್ತದೆ.

ನಿದರ್ಶನ 1.

'ಎ' ಮತ್ತು 'ಬಿ' ಇಬ್ಬರು ಪಾಲುದಾರರಾಗಿದ್ದು 3:2 ರ ಅನುಪಾತದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅವರು 'ಸಿ' ಯನ್ನು ಮುಂದೆ ಉಂಟಾಗುವ ಲಾಭದಲ್ಲಿ $\frac{1}{5}$ ಭಾಗಕ್ಕೆ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ತ್ಯಾಗ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗ ಅನುಪಾತ = ಹಳೆಯ ಪಾಲುಗಾರರ ಹಳೆಯಪಾಲು ಅಂದರೆ, 3:2

ಪ್ರಕರಣ 2: ಹಳೆಯ ಪಾಲುಗಾರರ ಹಳೆಯ ಅನುಪಾತವನ್ನು, ಹೊಸ ಪಾಲುಗಾರನ ಪಾಲನ್ನು ಹಾಗೂ ಹೊಸಪಾಲುಗಾರನಿಂದ ಹಳೆಯ ಪಾಲುಗಾರರು ಪಡೆದ ಪಾಲನ್ನು ಲೆಕ್ಕದಲ್ಲಿ ಕೊಟ್ಟಿದ್ದರೆ,

ಈ ಸಂದರ್ಭದಲ್ಲಿ ತ್ಯಾಗ ಅನುಪಾತವು ಹಳೆಯ ಪಾಲುಗಾರರು ತ್ಯಾಗ ಮಾಡಿದ ಪಾಲೇ ತ್ಯಾಗ ಅನುಪಾತವಾಗಿರುತ್ತದೆ.

ನಿದರ್ಶನ 2.

X ಮತ್ತು Y ಇಬ್ಬರು ಪಾಲುಗಾರರಾಗಿದ್ದು 2:1ರ ಅನುಪಾತದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅವರು Z ಅನ್ನು ಮುಂದೆ ಉಂಟಾಗುವ ಲಾಭದಲ್ಲಿ $\frac{1}{4}$ ಭಾಗಕ್ಕೆ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ಈ ಅನುಪಾತವನ್ನು $\frac{3}{20}$ ಮತ್ತು $\frac{2}{20}$ರ ಪ್ರಮಾಣದಲ್ಲಿ X ಮತ್ತು Y ಯಿಂದ ಪಡೆಯುತ್ತಾರೆ. ತ್ಯಾಗ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

X ಮತ್ತು Y ಯಿಂದ ತ್ಯಾಗ ಮಾಡಿದ ಪಾಲು = $\frac{3}{20}$ ಮತ್ತು $\frac{2}{20}$ ಆದ್ದರಿಂದ ತ್ಯಾಗ ಅನುಪಾತ=3:2

ಪ್ರಕರಣ 3: ಹಳೆಯ ಪಾಲುಗಾರರು ತಮ್ಮ ಪಾಲಿನಲ್ಲಿ ಹೊಸ ಪಾಲುದಾರನಿಗೆ ಸ್ವಲ್ಪ ಭಾಗ ಅಥವಾ ಭಾಗಶಃ ಪಾಲನ್ನು ಅರ್ಪಿಸಿದರೆ, ಈ ಪ್ರಕರಣದಲ್ಲಿ ತ್ಯಾಗಪಾಲನ್ನು- ಹಳೆಯ ಪಾಲು ಮತ್ತು ಅರ್ಪಿಸಿದ ಪಾಲನ್ನು ಗುಣಿಸಿದ ನಂತರ ಬಂದ ಪಾಲು ಆಗಿದೆ.

ನಿದರ್ಶನ 3.

'ಡಿ' ಮತ್ತು 'ಇ' ಇಬ್ಬರು ಪಾಲುಗಾರರಾಗಿದ್ದು 3:2ರ ಅನುಪಾತದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅವರು 'ಎಫ್'ಅನ್ನು ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. 'ಡಿ' ಅವರು $\frac{1}{2}$ ಹಾಗೂ 'ಇ' ಅವರು $\frac{1}{4}$ ಅವರ ತಮ್ಮ ಪಾಲಿನಲ್ಲಿ 'ಎಫ್'ಗೆ ಅರ್ಪಿಸುತ್ತಾರೆ. ತ್ಯಾಗ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯಪಾಲು × ಅರ್ಪಿಸಿದ ಪಾಲು

'ಡಿ'ಯಿಂದ ತ್ಯಾಗ ಮಾಡಿದ ಪಾಲು = $\frac{3}{5} \times \frac{1}{2} = \frac{3}{10}$

'ಇ'ಯಿಂದ ತ್ಯಾಗ ಮಾಡಿದ ಪಾಲು = $\frac{2}{5} \times \frac{1}{4} = \frac{2}{20}$

ತ್ಯಾಗ ಅನುಪಾತ = $\frac{3}{10} : \frac{2}{20} = \frac{6:2}{20} = \frac{6}{20} : \frac{2}{20} =$ **6:2** ಅಥವಾ **3:1**

ನಿದರ್ಶನ 4.

ರಾಮ್ ಮತ್ತು ಲಕ್ಷ್ಮಣ್ ಇಬ್ಬರು ಪಾಲುದಾರರಾಗಿದ್ದು ಲಾಭ-ನಷ್ಟಗಳನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದಾರೆ. ಅವರು ಪಾಲುಗಾರಿಕೆಯ ಸಂಸ್ಥೆಗೆ ಭರತ್‌ನನ್ನು ಸೇರಿಸಿಕೊಳ್ಳುತ್ತಾರೆ. ತಮ್ಮ ಪಾಲಿನಲ್ಲಿ ರಾಮ್ $\frac{1}{3}$ ಹಾಗೂ ಲಕ್ಷ್ಮಣ್ $\frac{1}{4}$ ಭಾಗವನ್ನು ಭರತ್‌ನಿಗೆ ಅರ್ಪಿಸಲು ಒಪ್ಪಿಕೊಳ್ಳುತ್ತಾರೆ. ತ್ಯಾಗ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯಪಾಲು × ಅರ್ಪಿಸಿದ ಪಾಲು

ರಾಮ್‌ನಿಂದ ತ್ಯಾಗ ಮಾಡಿದ ಪಾಲು = $\frac{1}{2}\times\frac{1}{3}=\frac{1}{6}$

ಲಕ್ಷ್ಮಣನಿಂದ ತ್ಯಾಗ ಮಾಡಿದ ಪಾಲು = $\frac{1}{2}\times\frac{1}{4}=\frac{1}{8}$

ತ್ಯಾಗ ಅನುಪಾತ = $\frac{1}{6}:\frac{1}{8}=\frac{4:3}{24}=\frac{4}{24}:\frac{3}{24}$ = **4:3.**

ಪ್ರಕರಣ 4: ಹಳೆಯ ಅನುಪಾತ ಹಾಗೂ ಹೊಸ ಅನುಪಾತವನ್ನು ಕೊಟ್ಟಾಗ,

ಈ ಪ್ರಕರಣದಲ್ಲಿ/ಸಂದರ್ಭದಲ್ಲಿ ಹಳೆಯ ಪಾಲುಗಾರರ ಹೊಸ ಪಾಲನ್ನು ಹಳೆಯ ಪಾಲಿನಿಂದ ಕಳೆದಾಗ ತ್ಯಾಗ ಅನುಪಾತವನ್ನು ಕಂಡುಹಿಡಿಯಬಹುದು.

ನಿದರ್ಶನ 5.

ಗಣೇಶ್ ಮತ್ತು ಗಿರೀಶ್ ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 3:2 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ಮಹೇಶ್ ಎಂಬುವರನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳುತ್ತಾರೆ. ಭವಿಷ್ಯದಲ್ಲಿ ಅವರೆಲ್ಲರೂ 4:3:3 ಪ್ರಮಾಣದಲ್ಲಿ ಲಾಭವನ್ನು ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಹಳೆಯ ಪಾಲುಗಾರರ ತ್ಯಾಗದ ಪ್ರಮಾಣವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯಪಾಲು – ಹೊಸ ಪಾಲು

ಗಣೇಶನಿಂದ ತ್ಯಾಗ ಮಾಡಿದ ಪಾಲು = $\frac{3}{5}-\frac{4}{10}=\frac{6-4}{10}=\frac{2}{10}$

ಗಿರೀಶನಿಂದ ತ್ಯಾಗ ಮಾಡಿದ ಪಾಲು = $\frac{2}{5}-\frac{3}{10}=\frac{4-3}{10}=\frac{1}{10}$

ತ್ಯಾಗ ಅನುಪಾತ = $\frac{2}{10}:\frac{1}{10}$ = **2 : 1**

ನಿದರ್ಶನ 6.

ರಾಮ್ ಮತ್ತು ರಹೀಮ್ ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 5:3 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು 'ರಾಬರ್ಟ್'ನನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳುತ್ತಾರೆ. ಭವಿಷ್ಯದಲ್ಲಿ ಅವರೆಲ್ಲರೂ 3:2:1 ಪ್ರಮಾಣದಲ್ಲಿ ಲಾಭವನ್ನು ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಹಳೆಯ ಪಾಲುಗಾರರ ತ್ಯಾಗದ ಪ್ರಮಾಣವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯ ಪಾಲು – ಹೊಸಪಾಲು

ರಾಮ್‌ನಿಂದ ತ್ಯಾಗಮಾಡಿದ ಪಾಲು $= \frac{5}{8} - \frac{3}{6} = \frac{15-12}{24} = \frac{3}{24}$

ರಹೀಮ್‌ನಿಂದ ತ್ಯಾಗಮಾಡಿದ ಪಾಲು $= \frac{3}{8} - \frac{2}{6} = \frac{9-8}{24} = \frac{1}{24}$

ತ್ಯಾಗ ಅನುಪಾತ $= \frac{3}{24} : \frac{1}{24} = \mathbf{3:1}$

ನಿದರ್ಶನ 7.

ರವಿ ಮತ್ತು ಶಶಿ ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 4:3 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ತಾರಾ ಅವರನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳುತ್ತಾರೆ. ಭವಿಷ್ಯದಲ್ಲಿ ಅವರೆಲ್ಲರೂ 2:1:1 ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಹಳೆಯ ಪಾಲುಗಾರರ ತ್ಯಾಗದ ಪ್ರಮಾಣವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯ ಪಾಲು – ಹೊಸಪಾಲು

ರವಿಯಿಂದ ತ್ಯಾಗ ಮಾಡಿದ ಪಾಲು $= \frac{4}{7} - \frac{2}{4} = \frac{16-14}{28} = \frac{2}{28}$

ಶಶಿಯಿಂದ ತ್ಯಾಗ ಮಾಡಿದ ಪಾಲು $= \frac{3}{7} - \frac{1}{4} = \frac{12-7}{28} = \frac{5}{28}$

ತ್ಯಾಗ ಅನುಪಾತ $= \frac{2}{28} : \frac{5}{28} = \mathbf{2:5}$

ನಿದರ್ಶನ 8.

'ಎ' ಮತ್ತು 'ಬಿ' ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 3:2 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು 'ಸಿ'ಯನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳುತ್ತಾರೆ ಮತ್ತು ಭವಿಷ್ಯದಲ್ಲಿ ಎಲ್ಲ ಪಾಲುಗಾರರು ಲಾಭ ನಷ್ಟಗಳನ್ನು ಸಮವಾಗಿ ಹಂಚಿಕೊಳ್ಳುತ್ತಾರೆ. ತ್ಯಾಗ ಪ್ರಮಾಣವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯ ಪಾಲು – ಹೊಸಪಾಲು

'ಎ'ಯಿಂದ ತ್ಯಾಗ ಮಾಡಿದ ಪಾಲು $= \frac{3}{5} - \frac{1}{3} = \frac{9-5}{15} = \frac{4}{15}$

'ಬಿ'ಯಿಂದ ತ್ಯಾಗ ಮಾಡಿದ ಪಾಲು $= \frac{2}{5} - \frac{1}{3} = \frac{6-5}{15} = \frac{1}{15}$

ತ್ಯಾಗ ಅನುಪಾತ $= \frac{4}{15} : \frac{1}{15} = \mathbf{4:1}$

ನಿದರ್ಶನ 9.

ರಶ್ಮಿ ಮತ್ತು ರಮ್ಯ ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ಅವರು ರಾಧಾ ಅವರನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳುತ್ತಾರೆ. ಭವಿಷ್ಯದಲ್ಲಿ ಅವರೆಲ್ಲರೂ 5:3:2 ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಹಳೆಯ ಪಾಲುಗಾರರ ತ್ಯಾಗದ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗಪಾಲು = ಹಳೆಯ ಪಾಲು – ಹೊಸಪಾಲು

ರಶ್ಮಿಯಿಂದ ತ್ಯಾಗ ಮಾಡಿದ ಪಾಲು = $\frac{1}{2}-\frac{5}{10}=\frac{5-5}{10}=\frac{0}{10}=0$

ರಮ್ಯಳಿಂದ ತ್ಯಾಗ ಮಾಡಿದ ಪಾಲು = $\frac{1}{2}-\frac{3}{10}=\frac{5-3}{10}=\frac{2}{10}=\frac{1}{5}$

ತ್ಯಾಗ ಅನುಪಾತ = $0 : \frac{1}{5}$ = **0: 1 ಅಂದರೆ ಇಡೀ ಪಾಲನ್ನು ರಮ್ಯ ಮಾತ್ರ ತ್ಯಾಗ ಮಾಡುತ್ತಾರೆ.**

ಪ್ರಕರಣ 5: ಹಳೆಯ ಪಾಲುದಾರರ ಹಳೆಯ ಅನುಪಾತ ಮತ್ತು ಹೊಸ ಪಾಲುಗಾರನ ಪಾಲನ್ನು ಕೊಟ್ಟಾಗ ಹಾಗೂ ಉಳಿದ ಪಾಲನ್ನು ಹಳೆಯ ಪಾಲುಗಾರರು ಹಂಚಿಕೊಳ್ಳುವ ಅನುಪಾತವನ್ನು ಕೊಟ್ಟಾಗ,

ಈ ಸಂದರ್ಭದಲ್ಲಿ ಮೊದಲು ನಾವು ಉಳಿದ ಪಾಲನ್ನು ಕಂಡುಹಿಡಿಯಬೇಕು. ಈ ಪ್ರಕರಣದಲ್ಲಿ ಮೊದಲು, ಉಳಿದ ಪಾಲನ್ನು ಕಂಡು ಹಿಡಿಯಬೇಕು. ಇದನ್ನು ಕಂಡು ಹಿಡಿಯಬೇಕು. ಇದನ್ನು ಕಂಡು ಹಿಡಿಯಲು ಒಂದರಿಂದ ಹೊಸ ಪಾಲುಗಾರನ ಪಾಲನ್ನು ಕಳೆಯಬೇಕು. ಆ ನಂತರ ಉಳಿದ ಸಾಲನ್ನು ಹಳೆಯ ಪಾಲುಗಾರರು ಒಪ್ಪಿದ ಪಾಲಿನಿಂದ ಗುಣಿಸಿದಾಗ ಹೊಸ ಅನುಪಾತವು ದೊರೆಯುತ್ತದೆ. ಆನಂತರ ಆ ಉಳಿದ ಪಾಲನ್ನು ಹಳೆಯ ಪಾಲುಗಾರನಿಗೆ ಅವರು ಒಪ್ಪಿರುವ ಪ್ರಮಾಣದಲ್ಲಿ ಹಂಚಬೇಕು. ಆಗ ಹೊಸ ಅನುಪಾತವು ದೊರೆಯುತ್ತದೆ. ಆನಂತರ ಹೊಸ ಅನುಪಾತವನ್ನು ಹಳೆಯ ಅನುಪಾತದಿಂದ ಕಳೆದು ತ್ಯಾಗ ಅನುಪಾತವನ್ನು ಕಂಡುಹಿಡಿಯಬಹುದು.

ನಿದರ್ಶನ 10.

ರಾಖಿ ಮತ್ತು ಜಾಕಿ ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು 7:5ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು 'ವಿಕಿ' ಅವರನ್ನು $\frac{1}{4}$ ಪಾಲಿಗೆ ಸೇರಿಸಿಕೊಳ್ಳುತ್ತಾರೆ. ರಾಖಿ ಮತ್ತು ಜಾಕಿ ಉಳಿದ ಪಾಲನ್ನು 2:1ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ತ್ಯಾಗ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ವಿಕ್ಕಿಯ ಪಾಲು = $\frac{1}{4}$

ಉಳಿದ ಪಾಲು = $1-\frac{1}{4}=\frac{4-1}{4}=\frac{3}{4}$

ಹೊಸ ಪ್ರಮಾಣ = ಒಪ್ಪಿದ ಪಾಲು × ಉಳಿದ ಪಾಲು

ರಾಖಿಯ ಹೊಸ ಪಾಲು = $\frac{2}{3}\times\frac{3}{4}=\frac{6}{12}$

ಜಾಕಿಯ ಹೊಸ ಪಾಲು = $\frac{1}{3}\times\frac{3}{4}=\frac{3}{12}$

ತ್ಯಾಗ ಪಾಲು = ಹಳೆಯ ಪಾಲು – ಹೊಸ ಪಾಲು

ರಾಖಿಯಿಂದ ತ್ಯಾಗ ಮಾಡಿದ ಪಾಲು = $\frac{7}{12}-\frac{6}{12}=\frac{7-6}{12}=\frac{1}{12}$

ಜಾಕಿಯಿಂದ ತ್ಯಾಗ ಮಾಡಿದ ಪಾಲು = $\frac{5}{12}-\frac{3}{12}=\frac{5-3}{12}=\frac{2}{12}$

ತ್ಯಾಗ ಅನುಪಾತ = $\frac{1}{12}:\frac{2}{12}$ = **1:2**

ನಿದರ್ಶನ *11.*

'ಪಿ' ಮತ್ತು 'ಕ್ಯೂ' ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು 2:1ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು 'ಆರ್' ಅವರನ್ನು $\frac{1}{6}$ರ ಪಾಲಿಗೆ ಸೇರಿಸಿಕೊಳ್ಳುತ್ತಾರೆ. 'ಪಿ' ಮತ್ತು 'ಕ್ಯೂ' ಅವರು ಉಳಿದ ಪಾಲನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ತ್ಯಾಗ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

'ಆರ್' ಅವರ ಪಾಲು = $\frac{1}{6}$

ಉಳಿದ ಪಾಲು = $1-\frac{1}{6}=\frac{6-1}{6}=\frac{5}{6}$

ಹೊಸ ಅನುಪಾತ = ಒಪ್ಪಿದ ಪಾಲು × ಉಳಿದ ಪಾಲು

'ಪಿ' ಅವರ ಹೊಸಪಾಲು = $\frac{3}{5}\times\frac{5}{6}=\frac{15}{30}$

'ಕ್ಯೂ' ಅವರ ಹೊಸಪಾಲು = $\frac{2}{5}\times\frac{5}{6}=\frac{10}{30}$

ತ್ಯಾಗ ಅನುಪಾತ = ಹಳೆಯ ಪಾಲು – ಹೊಸ ಪಾಲು

'ಪಿ'ಯಿಂದ ತ್ಯಾಗ ಮಾಡಿದ ಪಾಲು = $\frac{2}{3}-\frac{15}{30}=\frac{20-15}{30}=\frac{5}{30}$ or $\frac{1}{6}$

'ಕ್ಯೂ'ಯಿಂದ ತ್ಯಾಗ ಮಾಡಿದ ಪಾಲು = $\frac{1}{3}-\frac{10}{30}=\frac{10-10}{30}=\frac{0}{30}=0$

ತ್ಯಾಗ ಅನುಪಾತ = $\frac{1}{6}$: 0 = **1 : 0**

ಇಡೀ ಪಾಲನ್ನು P ಅವರು ತ್ಯಾಗ ಮಾಡಿರುತ್ತಾರೆ.

ಹೊಸಪ್ರಮಾಣ ಅಥವಾ ಹೊಸ ಅನುಪಾತ ಅಥವಾ ಹೊಸಲಾಭದ ಪಾಲಿನ ಅನುಪಾತ

ಅರ್ಥ:

ಭವಿಷ್ಯದಲ್ಲಿ ಬರುವ ಲಾಭ, ನಷ್ಟಗಳನ್ನು ಎಲ್ಲ ಪಾಲುದಾರರು ಹಂಚಿಕೊಳ್ಳುವ ಅನುಪಾತಕ್ಕೆ ಹೊಸ ಲಾಭದ ಪಾಲಿನ ಅನುಪಾತವೆಂದು ಕರೆಯುತ್ತೇವೆ. ಇದು ಹಳೆಯ ಪಾಲು ಹಾಗೂ ತ್ಯಜಿಸಿದ ಪಾಲಿನ ನಡುವಿನ ವ್ಯತ್ಯಾಸವಾಗಿರುತ್ತದೆ.

ಹೊಸಪಾಲು = ಹಳೆಯ ಪಾಲು – ತ್ಯಜಿಸಿದ ಪಾಲು

ಹೊಸಲಾಭದ ಪಾಲಿನ ಅನುಪಾತವನ್ನು ಕಂಡು ಹಿಡಿಯುವ ಉದ್ದೇಶಗಳು:

- ಸಂಸ್ಥೆಯ ಭವಿಷ್ಯದ ಲಾಭ ನಷ್ಟಗಳನ್ನು ಹಂಚಿಕೊಳ್ಳಲು
- ಸಂಸ್ಥೆಯ ವಜಾಗೊಳಿಸಿದ ಕೀರ್ತಿಮೌಲ್ಯವನ್ನು ವಿತರಣೆ ಮಾಡಲು
- ಸಂಸ್ಥೆಯ ಪಾಲುಗಾರರ ಬಂಡವಾಳ ಖಾತೆಗಳನ್ನು ಮರುಹೊಂದಾಣಿಕೆ ಮಾಡಿದಾಗ

ಹೊಸಲಾಭದ ಪಾಲಿನ ಅನುಪಾತವನ್ನು ಕಂಡುಹಿಡಿಯುವುದಕ್ಕಾಗಿ ಸಂಬಂಧಿಸಿದ ಲೆಕ್ಕಗಳು:

ಹೊಸಲಾಭದ ಪಾಲಿನ ಅನುಪಾತವನ್ನು ಕಂಡುಹಿಡಿಯುವುದಕ್ಕಾಗಿ ವಿವಿಧ ಮಾದರಿಯ ಪ್ರಕರಣಗಳು.

1) ಹಳೆಯ ಪಾಲುಗಾರರ ಪಾಲನ್ನು ಕೊಟ್ಟಾಗ
2) ತ್ಯಾಗ ಅನುಪಾತವನ್ನು ಕೊಟ್ಟಾಗ
3) ಹೊಸ ಪಾಲುಗಾರನಿಗೆ ಹಳೆಯ ಪಾಲುಗಾರರು ಅವರ ಲಾಭದ ಭಾಗಶಃ ಪಾಲನ್ನು ಅರ್ಪಿಸಿದಾಗ
4) ಹಳೆ ಪಾಲುಗಾರರ ಹಳೆಯ ಅನುಪಾತವನ್ನು ಕೊಟ್ಟು ಹಾಗೂ ಹೊಸ ಪಾಲುದಾರನ ಪಾಲನ್ನು ಮಾತ್ರ ಕೊಟ್ಟಾಗ
5) ಹೊಸ ಪಾಲುಗಾರನ ಲಾಭವನ್ನು ಕೊಟ್ಟು ಹಾಗೂ ಹಳೆಯ ಪಾಲುಗಾರರು ಉಳಿದ ಪಾಲನ್ನು ಹಂಚಿಕೊಳ್ಳುವ ಅನುಪಾತವನ್ನು ಕೊಟ್ಟಾಗ.

ಪ್ರಕರಣ 1: ಈ ಪ್ರಕರಣದಲ್ಲಿ ಹೊಸಪಾಲನ್ನು ಕಂಡುಹಿಡಿಯಲು ಹಳೆಯ ಪಾಲುಗಾರರು ತ್ಯಾಗದ ಪಾಲನ್ನು ಹಳೆಯ ಪಾಲಿನಿಂದ ಕಳೆಯಬೇಕು.

ನಿದರ್ಶನ 12.

ಅರುಣ್ ಮತ್ತು ವರುಣ್ ಇಬ್ಬರು ಪಾಲುದಾರರು ಲಾಭ ಮತ್ತು ನಷ್ಟವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ತರುಣ್‌ನನ್ನು $\frac{1}{5}$ರ ಪಾಲಿಗೆ ಸೇರಿಸಿಕೊಳ್ಳುತ್ತಾರೆ. ಮತ್ತು ಈ ಪಾಲನ್ನು ಅರುಣ್ ಮತ್ತು ವರುಣ್‌ನಿಂದ $\frac{2}{15}$ ಮತ್ತು $\frac{1}{15}$ರ ಪ್ರಮಾಣದಲ್ಲಿ ತರುಣ್ ಪಡೆಯುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ಹೊಸಪಾಲು = ಹಳೆಯ ಪಾಲು – ತ್ಯಾಗದ ಪಾಲು

ಅರುಣ್‌ನ ಹೊಸಪಾಲು = $\frac{3}{5}-\frac{2}{15}=\frac{9-2}{15}=\frac{7}{15}$

ವರುಣ್‌ನ ಹೊಸಪಾಲು = $\frac{2}{5}-\frac{1}{15}=\frac{6-1}{15}=\frac{5}{15}$

ತರುಣ್‌ನ ಹೊಸಪಾಲು = $\frac{1}{5}$ ಅಥವಾ $\frac{3}{15}$

ಹೊಸ ಲಾಭದ ಹಂಚುವ ಅನುಪಾತ = $\frac{7}{15}:\frac{5}{15}:\frac{3}{15}$ = **7:5:3**

ನಿದರ್ಶನ 13.

ಶರ್ಮ ಮತ್ತು ವರ್ಮ ಇಬ್ಬರು ಪಾಲುಗಾರರು ಲಾಭ ಮತ್ತು ನಷ್ಟವನ್ನು 2:1ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಗುಪ್ತ ಅವರನ್ನು $\frac{1}{4}$ರ ಪಾಲಿಗೆ ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ಮತ್ತು ಈ ಪಾಲನ್ನು ಗುಪ್ತ ಅವರು $\frac{3}{20}$ ಮತ್ತು $\frac{2}{20}$ರ ಪ್ರಮಾಣದಲ್ಲಿ ಶರ್ಮ ಮತ್ತು ವರ್ಮ ಅವರಿಂದ ಪಡೆಯುತ್ತಾರೆ. ಹೊಸಲಾಭದ ಪಾಲಿನ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ಹೊಸ ಪಾಲು = ಹಳೆಯ ಪಾಲು – ತ್ಯಾಗದ ಪಾಲು

ಶರ್ಮನ ಹೊಸಪಾಲು = $\frac{2}{3}-\frac{3}{20}=\frac{40-9}{60}=\frac{31}{60}$

ವರ್ಮನ ಹೊಸಪಾಲು = $\frac{1}{3}-\frac{2}{20}=\frac{20-6}{60}=\frac{14}{60}$

ಗುಪ್ತನ ಹೊಸಪಾಲು = $\frac{1}{4}$ ಅಥವಾ $\frac{15}{60}$

ಹೊಸ ಅನುಪಾತ = $\frac{31}{60}:\frac{14}{60}:\frac{15}{60}=$ **31:14:15**

ನಿದರ್ಶನ 14.

ಅಮರ್ ಮತ್ತು ಅಕ್ಬರ್ ಇಬ್ಬರು ಪಾಲುದಾರರು ಲಾಭ ಮತ್ತು ನಷ್ಟವನ್ನು 3:2ರ ಅನುಪಾತದಲ್ಲಿ ಹಂಚಿಕೊಳ್ಳತ್ತಿದ್ದರು. ಆಲನ್ ಅವರನ್ನು $\frac{1}{6}$ರ ಪಾಲಿಗೆ, ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ಮತ್ತು ಈ ಪಾಲನ್ನು $\frac{1}{24}$ ಮತ್ತು $\frac{1}{8}$ ರ ಪ್ರಮಾಣದಲ್ಲಿ ಆಲೆನ್ ಅವರು ಅಮರ್ ಮತ್ತು ಅಕ್ಬರ್ ನಿಂದ ಪಡೆಯುತ್ತಾರೆ. ಹೊಸಲಾಭದ ಪಾಲಿನ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ಹೊಸಪಾಲು = ಹಳೆಯ ಪಾಲು – ತ್ಯಾಗದ ಪಾಲು

ಅಮರ್‌ನ ಹೊಸ ಪಾಲು = $\frac{3}{5}-\frac{1}{24}=\frac{72-5}{120}=\frac{67}{120}$

ಅಕ್ಬರ್‌ನ ಹೊಸ ಪಾಲು = $\frac{2}{5}-\frac{1}{8}=\frac{16-5}{40}=\frac{11}{40}=\frac{33}{120}$

ಆಲೆನ್‌ನ ಹೊಸ ಪಾಲು = $\frac{1}{6}$ ಅಥವಾ $\frac{20}{120}$

ಹೊಸ ಅನುಪಾತ = $\frac{67}{120}:\frac{33}{120}:\frac{20}{120}$ = **67:33:20**

ಪ್ರಕರಣ 2: ತ್ಯಾಗ ಅನುಪಾತವನ್ನು ಕೊಟ್ಟಾಗ

ಈ ಸಂದರ್ಭದಲ್ಲಿ (ಪ್ರಕರಣದಲ್ಲಿ) ಮೊದಲು ತ್ಯಾಗದ ಪಾಲನ್ನು ಕಂಡುಹಿಡಿಯಬೇಕು. ಇದನ್ನು ಹಳೆಯ ಪಾಲುಗಾರರು ತ್ಯಾಗ ಮಾಡಿದ ಅನುಪಾತವನ್ನು ಹಾಗೂ ಹೊಸ ಪಾಲುಗಾರನ ಪಾಲನ್ನು ಗುಣಿಸುವ ಮೂಲಕ ಕಂಡುಹಿಡಿಯಬಹುದು. ಅನಂತರ ತ್ಯಾಗದ ಪಾಲನ್ನು ಹಳೆಯ ಪಾಲಿನಿಂದ ಕಳೆದಾಗ ಹೊಸ ಅನುಪಾತವನ್ನು ಕಂಡುಹಿಡಿಯಬಹುದು.

ನಿದರ್ಶನ 15.

ಸರಳ ಮತ್ತು ವರ್ಷ ಇಬ್ಬರು ಪಾಲುದಾರರು ಲಾಭ ಮತ್ತು ನಷ್ಟವನ್ನು 5:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಭವ್ಯ ಅವರನ್ನು $\frac{1}{6}$ರ ಪಾಲಿಗೆ ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಂಡರು. ಅವರು ಹಳೆಯ ಪಾಲುದಾರರಿಂದ 3:1ರ ಅನುಪಾತದಲ್ಲಿ ಪಾಲನ್ನು ಪಡೆಯುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗ ಮಾಡಿದ ಪಾಲು = ತ್ಯಾಗ ಅನುಪಾತ × ಹೊಸ ಪಾಲುದಾರನ ಪಾಲು

ಸರಳ ಅವರಿಂದ ತ್ಯಾಗ ಮಾಡಿದ ಪಾಲು = $\frac{3}{4}\times\frac{1}{6}=\frac{3}{24}$

ವರ್ಷಳಿಂದ ತ್ಯಾಗ ಮಾಡಿದ ಪಾಲು = $\frac{1}{4}\times\frac{1}{6}=\frac{1}{24}$

ಹೊಸ ಪಾಲು = ಹಳೆಯ ಪಾಲು – ತ್ಯಾಗ ಮಾಡಿದ ಪಾಲು

ಸರಳ ಅವರ ಹೊಸ ಪಾಲು= $\frac{5}{8}-\frac{3}{24}=\frac{15-3}{24}=\frac{12}{24}$

ವರ್ಷ ಅವರ ಹೊಸ ಪಾಲು = $\frac{3}{8}-\frac{1}{24}=\frac{9-1}{24}=\frac{8}{24}$

ಭವ್ಯ ಅವರ ಹೊಸ ಪಾಲು = $\frac{1}{6}$ ಅಂದರೆ $\frac{4}{24}$

ಹೊಸ ಲಾಭ ಪಾಲಿನ ಅನುಪಾತ = $\frac{12}{24}:\frac{8}{24}:\frac{4}{24}$ = **12:8:4** ಅಥವಾ **3:2:1**

ನಿದರ್ಶನ 16.

ವಿಶ್ವ ಮತ್ತು ಆಕಾಶ್ ಇಬ್ಬರು ಪಾಲುದಾರರು ಲಾಭ ಮತ್ತು ನಷ್ಟವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ಭೂಮಿಯವರನ್ನು $\frac{1}{4}$ರ ಪಾಲಿಗೆ, ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಂಡರು. ಅವರು ಹಳೆಯ ಪಾಲುದಾರರಿಂದ $\frac{2}{5}:\frac{3}{5}$ ರ ಅನುಪಾತದಲ್ಲಿ ತಮ್ಮ ಪಾಲನ್ನು ಪಡೆಯುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗ ಮಾಡಿದ ಪಾಲು = ತ್ಯಾಗ ಅನುಪಾತ × ಹೊಸ ಪಾಲುದಾರನ ಪಾಲು

ವಿಶ್ವ ಅವರಿಂದ ತ್ಯಾಗ ಮಾಡಿದ ಪಾಲು = $\frac{2}{5}\times\frac{1}{4}=\frac{2}{20}$

ಆಕಾಶ್‌ನಿಂದ ತ್ಯಾಗ ಮಾಡಿದ ಪಾಲು = $\frac{3}{5}\times\frac{1}{4}=\frac{3}{20}$

ಹೊಸ ಪಾಲು = ಹಳೆಯ ಪಾಲು – ತ್ಯಾಗ ಮಾಡಿದ ಪಾಲು

ವಿಶ್ವನ ಹೊಸ ಪಾಲು = $\frac{3}{5}-\frac{2}{20}=\frac{12-2}{20}=\frac{10}{20}$

ಆಕಾಶ್‌ನ ಹೊಸ ಪಾಲು = $\frac{2}{5}-\frac{3}{20}=\frac{8-3}{20}=\frac{5}{20}$

ಭೂಮಿಯವರ ಹೊಸ ಪಾಲು = $\frac{1}{4}=\frac{5}{20}$

ಹೊಸ ಅನುಪಾತ = $\frac{10}{20}:\frac{5}{20}:\frac{5}{20}$= **10:5:5** ಅಥವಾ **2:1:1**

ನಿದರ್ಶನ 17.

ರೋಹಿತ್ ಮತ್ತು ಮೋಹಿತ್ ಇಬ್ಬರು ಪಾಲುದಾರರು ಲಾಭ ಮತ್ತು ನಷ್ಟವನ್ನು 7:5ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ಲೋಹಿತ್ ಎಂಬುವರನ್ನು $\frac{1}{4}$ರ ಪಾಲಿಗೆ ತಮ್ಮ ಪಾಲುಗಾರಿಕೆಯ ಸಂಸ್ಥೆಗೆ ಸೇರಿಸಿಕೊಂಡರು. ಅವರು ಹಳೆಯ ಪಾಲುಗಾರರಿಂದ ಸಮನಾಗಿ ತಮ್ಮ ಪಾಲನ್ನು ಪಡೆದುಕೊಳ್ಳುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗದ ಪಾಲು = ತ್ಯಾಗದ ಅನುಪಾತ × ಹೊಸ ಪಾಲುದಾರನ ಪಾಲು

ರೋಹಿತ್ ತ್ಯಾಗ ಮಾಡಿದ ಪಾಲು = $\frac{1}{2}\times\frac{1}{4}=\frac{1}{8}$

ಮೋಹಿತ್ ತ್ಯಾಗ ಮಾಡಿದ ಪಾಲು = $\frac{1}{2}\times\frac{1}{4}=\frac{1}{8}$

ಹೊಸ ಪಾಲು = ಹಳೆಯ ಪಾಲು – ತ್ಯಾಗ ಮಾಡಿದ ಪಾಲು

ರೋಹಿತ್ ಅವರಿಂದ ಹೊಸ ಪಾಲು = $\frac{7}{12}-\frac{1}{8}=\frac{14-3}{24}=\frac{11}{24}$

ಮೋಹಿತ್ ಅವರಿಂದ ಹೊಸ ಪಾಲು = $\frac{5}{12}-\frac{1}{8}=\frac{10-3}{24}=\frac{7}{24}$

ಲೋಹಿತ್ ಅವರ ಪಾಲು $\frac{1}{4}$ ಅಂದರೆ $\frac{6}{24}$

ಹೊಸ ಲಾಭ ಪಾಲಿನ ಅನುಪಾತ = $\frac{11}{24}:\frac{7}{24}:\frac{6}{24}$ = **11:7:6.**

ನಿದರ್ಶನ 18.

M ಮತ್ತು N ಒಂದು ಪಾಲುಗಾರಿಕೆ ಸಂಸ್ಥೆಯ ಪಾಲುಗಾರರು. ಅವರು ಪಾಲುಗಾರಿಕೆಗೆ R ಅವರನ್ನು $\frac{1}{5}$ರ ಪಾಲಿಗೆ ಸೇರಿಸಿಕೊಳ್ಳುತ್ತಾರೆ. M ಮತ್ತು N ನಿಂದ ಸಮನಾಗಿ ಪಡೆಯುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ತ್ಯಾಗದ ಪಾಲು = ತ್ಯಾಗದ ಅನುಪಾತ × ಹೊಸ ಪಾಲುದಾರನ ಪಾಲು

ನಿರೂಪಣೆ :

ತ್ಯಾಗದ ಪಾಲು = ತ್ಯಾಗದ ಅನುಪಾತ × ಹೊಸ ಪಾಲುದಾರನ ಪಾಲು

M ಮತ್ತು N ನಿಂದ ತ್ಯಾಗ ಮಾಡಿದ ಪಾಲು $= \frac{1}{2} \times \frac{1}{5} = \frac{1}{10}$

ಹೊಸ ಪಾಲು = ಹಳೆಯ ಪಾಲು – ತ್ಯಾಗ ಮಾಡಿದ ಪಾಲು

(ಹಳೆಯ ಅನುಪಾತವನ್ನು ಲೆಕ್ಕದಲ್ಲಿ ಕೊಡದಿದ್ದಲ್ಲಿ ಅವರು ಲಾಭ, ನಷ್ಟಗಳನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದರು. ಅಂದರೆ 1:1)

M ನ ಹೊಸ ಪಾಲು $= \frac{1}{2} - \frac{1}{10} = \frac{5-1}{10} = \frac{4}{10}$

N ನ ಹೊಸ ಪಾಲು $= \frac{1}{2} - \frac{1}{10} = \frac{5-1}{10} = \frac{4}{10}$

R ಅವರ ಹೊಸ ಪಾಲು $= \frac{1}{5} = \frac{2}{10}$

ಹೊಸ ಲಾಭಪಾಲಿನ ಅನುಪಾತ $= \frac{4}{10} : \frac{4}{10} : \frac{2}{10} =$ **4:4:2** ಅಥವಾ **2:2:1.**

ಪ್ರಕರಣ 3: ಹೊಸಪಾಲುಗಾರನಿಗೆ ಹಳೆಯ ಪಾಲುಗಾರರು ಅವರ ಲಾಭದ ಭಾಗಶಃ ಪಾಲನ್ನು ಅರ್ಪಿಸಿದಾಗ.

ಈ ಪ್ರಕರಣದಲ್ಲಿ ಹಳೆಯ ಪಾಲುಗಾರರ ತ್ಯಾಗದ ಪಾಲನ್ನು ಕಂಡುಹಿಡಿಯಬೇಕು. ಇದನ್ನು ಕಂಡು ಹಿಡಿಯಲು ಹಳೆಯ ಪಾಲುಗಾರರ ಹಳೆಯ ಪಾಲಿನಿಂದ ಅರ್ಪಿಸಿದ ಪಾಲನ್ನು ಗುಣಿಸಬೇಕು. ಅನಂತರ ತ್ಯಾಗ ಮಾಡಿದ ಪಾಲನ್ನು ಹಳೆಯ ಪಾಲಿನಿಂದ ಕಳೆದಾಗ ಹೊಸ ಅನುಪಾತವನ್ನು ಕಂಡುಹಿಡಿಯಬಹುದು. ಹಳೆಯ ಪಾಲುಗಾರರ ತ್ಯಾಗದ ಪಾಲುಗಳನ್ನು ಕೂಡಿದಾಗ ಬರುವ ಮೊತ್ತವೇ ಹೊಸಪಾಲುಗಾರನ ಪಾಲು.

ನಿದರ್ಶನ 19.

ಪವನ್ ಮತ್ತು ಮದನ್ ಇಬ್ಬರು ಒಂದು ಪಾಲುಗಾರಿಕೆ ಸಂಸ್ಥೆಯ ಪಾಲುಗಾರರು. ಅವರು ಲಾಭ ನಷ್ಟಗಳನ್ನು 7:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಸುಮನ್ ಅವರನ್ನು ತಮ್ಮ ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಂಡರು. ಪವನ್ ಮತ್ತು ಮದನ್ ಅವರು ಅನುಕ್ರಮವಾಗಿ ತಮ್ಮ ಪಾಲಿನಿಂದ $\frac{1}{2}$ ಮತ್ತು $\frac{1}{4}$ ಪಾಲನ್ನು ಸುಮನ್‌ಗೆ ಅರ್ಪಿಸುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗದ ಪಾಲು = ಹಳೆಯ ಪಾಲು × ಅರ್ಪಿಸಿದ ಪಾಲು

ಪವನ್ ತ್ಯಾಗ ಮಾಡಿದ ಪಾಲು $= \frac{7}{10} \times \frac{1}{2} = \frac{7}{20}$

ಮದನ್‌ನಿಂದ ತ್ಯಾಗ ಮಾಡಿದ ಪಾಲು = $\frac{3}{10}\times\frac{1}{4}=\frac{3}{40}$

ಹೊಸ ಪಾಲು = ಹಳೆಯ ಪಾಲು – ತ್ಯಾಗದ ಪಾಲು

ಪವನ್ ಅವರ ಹೊಸ ಪಾಲು = $\frac{7}{10}-\frac{7}{20}=\frac{14-7}{20}=\frac{7}{20}$ ಅಥವಾ $\frac{14}{40}$

ಮದನ್ ಅವರ ಹೊಸ ಪಾಲು $=\frac{3}{10}-\frac{3}{40}=\frac{12-3}{40}=\frac{9}{40}$

ಸಮನ್ ಅವರ ಹೊಸ ಪಾಲು = ಪವನ್ + ಮದನ್ ಅವರ ತ್ಯಾಗದ ಪಾಲು = $\frac{7}{20}+\frac{3}{40}=\frac{14+3}{40}=\frac{17}{40}$

ಹೊಸ ಲಾಭ ಪಾಲಿನ ಅನುಪಾತ = $\frac{14}{40}:\frac{9}{40}:\frac{17}{40}$= **14:9:17.**

ನಿದರ್ಶನ 20.

ಪ್ರೀತಿ ಮತ್ತು ಪ್ರೇಮ ಇಬ್ಬರು ಒಂದು ಪಾಲುಗಾರಿಕೆ ಸಂಸ್ಥೆಯ ಪಾಲುಗಾರರು. ಅವರು ಲಾಭ ನಷ್ಟಗಳನ್ನು 3:2ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು ಪ್ರಿಯಾ ಅವರನ್ನು ತಮ್ಮ ಪಾಲುಗಾರಿಕೆ ಸಂಸ್ಥೆಗೆ ಸೇರಿಸಿಕೊಂಡರು. ಪ್ರೀತಿ ಮತ್ತು ಪ್ರೇಮ ಅನುಕ್ರಮವಾಗಿ ಇಬ್ಬರೂ $\frac{1}{4}$ ಪಾಲನ್ನು ಪ್ರಿಯ ಅವರಿಗೆ ಅರ್ಪಿಸುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

ತ್ಯಾಗದ ಪಾಲು = ಹಳೆಯ ಪಾಲು × ಅರ್ಪಿಸಿದ ಪಾಲು

ಪ್ರೀತಿ ತ್ಯಾಗ ಮಾಡಿದ ಪಾಲು = $\frac{3}{5}\times\frac{1}{4}=\frac{3}{20}$

ಪ್ರೇಮ ತ್ಯಾಗ ಮಾಡಿದ ಪಾಲು = $\frac{2}{5}\times\frac{1}{4}=\frac{2}{20}$

ಹೊಸ ಪಾಲು = ಹಳೆಯ ಪಾಲು – ತ್ಯಾಗದ ಪಾಲು

ಪ್ರೀತಿಯ ಹೊಸ ಪಾಲು = $\frac{3}{5}-\frac{3}{20}=\frac{12-3}{20}=\frac{9}{20}$

ಪ್ರೇಮ ಅವರ ಹೊಸ ಪಾಲು = $\frac{2}{5}-\frac{2}{20}=\frac{8-2}{20}=\frac{6}{20}$

ಪ್ರಿಯ ಅವರ ಹೊಸ ಪಾಲು = ಪ್ರೀತಿ + ಪ್ರೇಮ ಅವರ ತ್ಯಾಗದ ಪಾಲು = $\frac{3}{20}+\frac{2}{20}=\frac{3+2}{20}=\frac{5}{20}$

ಹೊಸ ಲಾಭದ ಪಾಲಿನ ಅನುಪಾತ = $=\frac{9}{20}:\frac{6}{20}:\frac{5}{20}$ = **9:6:5.**

ಪ್ರಕರಣ 4: ಹಳೆ ಪಾಲುಗಾರರ ಹಳೆಯ ಅನುಪಾತವನ್ನು ಕೊಟ್ಟು ಹಾಗೂ ಹೊಸ ಪಾಲುಗಾರನ ಪಾಲನ್ನು ಮಾತ್ರ ಕೊಟ್ಟಾಗ.

ಈ ಪ್ರಕರಣದಲ್ಲಿ ಮೊದಲು ಉಳಿದ ಪಾಲನ್ನು ಕಂಡುಹಿಡಿಯಬೇಕು. ಇದನ್ನು ಕಂಡುಹಿಡಿಯಲು ಒಂದರಿಂದ ಹೊಸ ಪಾಲುಗಾರನ ಪಾಲನ್ನು ಕಳೆಯಬೇಕು. ಆ ನಂತರ ಉಳಿದ ಪಾಲನ್ನು ಹಳೆಯ ಪಾಲಿನಿಂದ ಗುಣಿಸಿದಾಗ ಹೊಸ ಅನುಪಾತವನ್ನು ಕಂಡುಹಿಡಿಯಬಹುದು.

ನಿದರ್ಶನ 21.

ರಾಜಾ ಮತ್ತು ರಾಣಿ ಇಬ್ಬರು ಪಾಲುಗಾರರು. ಅವರು ಲಾಭ ಮತ್ತು ನಷ್ಟಗಳನ್ನು 3:2ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ಮಂತ್ರಿಯವರನ್ನು ತಮ್ಮ ಪಾಲುಗಾರಿಕೆಗೆ $\frac{1}{6}$ರ ಪಾಲಿನಂತೆ ಸೇರಿಸಿಕೊಂಡರು. ಹೊಸ ಅನುಪಾತವನ್ನು ಕಂಡಿಹಿಡಿಯಿರಿ.

ನಿರೂಪಣೆ :

ಮಂತ್ರಿಯವರ ಪಾಲು = $\frac{1}{6}$

ಉಳಿದ ಪಾಲು = $1-\frac{1}{6}=\frac{6-1}{6}=\frac{5}{6}$

ಹೊಸ ಪಾಲು = ಹಳೆಯ ಪಾಲು × ಉಳಿದ ಪಾಲು

ರಾಜಾ ಅವರ ಹೊಸ ಪಾಲು = $\frac{3}{5}\times\frac{5}{6}=\frac{15}{30}$

ರಾಣಿ ಅವರ ಹೊಸ ಪಾಲು = $\frac{2}{5}\times\frac{5}{6}=\frac{10}{30}$

ಮಂತ್ರಿಯವರ ಹೊಸ ಪಾಲು = $\frac{1}{6}$ ಅಥವಾ $\frac{5}{30}$

ಹೊಸಲಾಭ ಪಾಲಿನ ಅನುಪಾತ $=\frac{15}{30}:\frac{10}{30}:\frac{5}{30}$ = **15:10:5** ಅಥವಾ **3:2:1**

ನಿದರ್ಶನ 22.

X ಮತ್ತು Y ಇಬ್ಬರು ಪಾಲುಗಾರರು. ಅವರು ಲಾಭ ಮತ್ತು ನಷ್ಟಗಳನ್ನು 4:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಇವರು Z ಅವರನ್ನು ಪಾಲುಗಾರಿಕೆಗೆ $\frac{2}{9}$ರ ಪ್ರಮಾಣದಲ್ಲಿ ಸೇರಿಸಿಕೊಂಡರು. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

'Z' ಅವರ ಪಾಲು = $\frac{2}{9}$

ಉಳಿದ ಪಾಲು = $1-\frac{2}{9}=\frac{9-2}{9}=\frac{7}{9}$

ಹೊಸ ಪಾಲು = ಹಳೆಯ ಪಾಲು × ಉಳಿದ ಪಾಲು

X ಅವರ ಹೊಸ ಪಾಲು = $\frac{4}{7} \times \frac{7}{9} = \frac{28}{63}$

Y ಅವರ ಹೊಸ ಪಾಲು = $\frac{3}{7} \times \frac{7}{9} = \frac{21}{63}$

Z ಅವರ ಹೊಸ ಪಾಲು = $\frac{2}{9}$ ಅಥವಾ $\frac{14}{63}$

ಹೊಸ ಲಾಭ ಪಾಲಿನ ಅನುಪಾತ = $\frac{28}{63} : \frac{21}{63} : \frac{14}{63}$ = **28:21:14** ಅಥವಾ **4:3:2**

ಪ್ರಕರಣ–5: ಹೊಸ ಪಾಲುಗಾರನ ಲಾಭವನ್ನು ಕೊಟ್ಟು ಹಾಗೂ ಹಳೆಯ ಪಾಲುಗಾರರು ಉಳಿದ ಪಾಲನ್ನು ಹಂಚಿಕೊಳ್ಳುವ ಅನುಪಾತವನ್ನು ಕೊಟ್ಟಾಗ.

ಈ ಪ್ರಕರಣದಲ್ಲಿ ಮೊದಲು ಉಳಿದ ಪಾಲನ್ನು ಕಂಡುಹಿಡಿಯಬೇಕು. ಇದನ್ನು ಕಂಡುಹಿಡಿಯಲು ಒಂದರಿಂದ ಹೊಸ ಪಾಲುಗಾರನ ಪಾಲನ್ನು ಕಳೆಯಬೇಕು. ಆ ನಂತರ ಉಳಿದ ಪಾಲನ್ನು ಹಳೆಯ ಪಾಲುಗಾರರು ಒಪ್ಪಿದ ಪಾಲಿನಿಂದ ಗುಣಿಸಿದಾಗ ಹೊಸ ಅನುಪಾತವು ದೊರೆಯುತ್ತದೆ.

ನಿದರ್ಶನ 23.

P ಮತ್ತು Q ಇಬ್ಬರು ಪಾಲುಗಾರರು. ಅವರು ಲಾಭ ಮತ್ತು ನಷ್ಟಗಳನ್ನು 5:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅವರು R ಎಂಬ ಪಾಲುಗಾರನನ್ನು ಮುಂದೆ ಉಂಟಾಗುವ ಲಾಭಗಳಲ್ಲಿ $\frac{1}{5}$ರ ಭಾಗಕ್ಕೆ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. P ಮತ್ತು Q ಉಳಿದ ಲಾಭವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಹೊಸ ಅನುಪಾತವನ್ನು ಕಂಡುಹಿಡಿಯಿರಿ.

ನಿರೂಪಣೆ :

R ಅವರ ಪಾಲು = $\frac{1}{5}$

ಉಳಿದ ಪಾಲು = $1 - \frac{1}{5} = \frac{5-1}{5} = \frac{4}{5}$

ಹೊಸ ಪಾಲು = ಒಪ್ಪಿದ ಪಾಲು × ಉಳಿದ ಪಾಲು

P ಯವರ ಹೊಸ ಪಾಲು = $\frac{3}{5} \times \frac{4}{5} = \frac{12}{25}$

Q ಯವರ ಹೊಸ ಪಾಲು = $\frac{2}{5} \times \frac{4}{5} = \frac{8}{25}$

R ಯವರ ಹೊಸ ಪಾಲು = $\frac{1}{5}$ ಅಥವಾ $\frac{5}{25}$

ಹೊಸ ಲಾಭದ ಪಾಲಿನ ಅನುಪಾತ = $\frac{12}{25} : \frac{8}{25} : \frac{5}{25}$ = **12:8:5**

ನಿದರ್ಶನ 24.

ಸತ್ಯ ಮತ್ತು ಶಿವ ಇಬ್ಬರು ಪಾಲುಗಾರರಾಗಿದ್ದು ಅವರು ಲಾಭ ಮತ್ತು ನಷ್ಟಗಳನ್ನು 4:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಇವರು ಸುಂದರ್ ಎಂಬುವರನ್ನು ತಮ್ಮ ಸಂಸ್ಥೆಯ ಪಾಲುದಾರಿಕೆಗೆ $\frac{1}{6}$ರ ಪ್ರಮಾಣದಲ್ಲಿ ಸೇರಿಸಿಕೊಳ್ಳುತ್ತಾರೆ. ಸತ್ಯ ಮತ್ತು ಶಿವ ಉಳಿದ ಪಾಲನ್ನು ಸಮಾನವಾಗಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಪಾಲುಗಾರರ ಹೊಸ ಲಾಭ ಹಂಚುವಿಕೆಯ ಪ್ರಮಾಣವನ್ನು ಕಂಡುಹಿಡಿಯಿರಿ.

ನಿರೂಪಣೆ :

ಸುಂದರ್ ಅವರ ಪಾಲು = $\frac{1}{6}$

ಉಳಿದ ಪಾಲು $= 1 - \frac{1}{6} = \frac{6-1}{6} = \frac{5}{6}$

ಹೊಸ ಪಾಲು = ಒಪ್ಪಿದ ಪಾಲು × ಉಳಿದ ಪಾಲು

ಸತ್ಯ ಅವರ ಹೊಸ ಪಾಲು = $\frac{1}{2} \times \frac{5}{6} = \frac{5}{12}$

ಶಿವ ಅವರ ಹೊಸ ಪಾಲು = $\frac{1}{2} \times \frac{5}{6} = \frac{5}{12}$

ಸುಂದರ್ ಅವರ ಹೊಸ ಪಾಲು = $\frac{1}{6}$ ಅಥವಾ $\frac{2}{12}$

ಹೊಸ ಲಾಭದ ಪಾಲಿನ ಅನುಪಾತ = $\frac{5}{12} : \frac{5}{12} : \frac{2}{12}$ = **5:5:2**

3.2.1. ಪಾಲುಗಾರನ ಪ್ರವೇಶಕ್ಕೆ ಸಂಬಂಧಿಸಿದ ಹೊಂದಾಣಿಕೆಗಳು:

i) ಸಂಸ್ಥೆಯ ಆಸ್ತಿ ಹಾಗೂ ಹೊಣೆಗಾರಿಕೆಯ ಪುನರ್ ಮೌಲ್ಯಮಾಪನ

ii) ಮೀಸಲುಗಳು ಹಾಗೂ ವಿತರಣೆಯಾಗದ ಲಾಭ ಅಥವಾ ನಷ್ಟದ ಹಂಚಿಕೆ

iii) ಹೊಸ ಪಾಲುಗಾರನು ಬಂಡವಾಳವನ್ನಾಗಿ ತಂದ ನಗದು ಹಾಗೂ ಇತರೆ ಆಸ್ತಿ

iv) ಕೀರ್ತಿಮೌಲ್ಯ ಹಾಗೂ ಅದರ ಪರಿಗಣನೆ

v) ಪ್ರವೇಶದ ನಂತರ ಹೊಸಪಾಲುಗಾರನ ಆಧಾರದ ಮೇಲೆ ಹೊಸ ಅನುಪಾತದಲ್ಲಿ ಹಳೆಯ ಪಾಲುಗಾರರ ಬಂಡವಾಳ ಹೊಂದಾಣಿಕೆ, ನಗದು ರೂಪದಲ್ಲಿ ಹೊಂದಾಣಿಕೆ.

ಸಂಸ್ಥೆಯ ಆಸ್ತಿ ಹಾಗೂ ಹೊಣೆಗಾರಿಕೆಯ ಮರು ಮೌಲ್ಯಮಾಪನ

ಪಾಲುಗಾರನ ಪ್ರವೇಶ, ನಿವೃತ್ತಿ ಅಥವಾ ನಿಧನದ ನಂತರ ಸಂಸ್ಥೆಯ ಆಸ್ತಿಗಳನ್ನು ಹಾಗೂ ಹೊಣೆಗಾರಿಕೆಗಳನ್ನು ಪುನರ್ ಮೌಲ್ಯ ಮಾಡಲಾಗುವುದು. ಏಕೆಂದರೆ ಸಂಸ್ಥೆಯ ಸರಿಯಾದ ಪರಿಸ್ಥಿತಿಯನ್ನು ತಿಳಿಯಲು, ಪುನರ್ ಮೌಲ್ಯಮಾಪನ ಮಾಡಿದ ನಂತರ ಕೆಲವು ಆಸ್ತಿಗಳ ಹಾಗೂ ಜವಾಬ್ದಾರಿಗಳ ಮೌಲ್ಯದಲ್ಲಿ ಏರಿಕೆ ಅಥವಾ ಇಳಿಕೆ ಉಂಟಾಗಬಹುದು. ಆಸ್ತಿಗಳ ಹಾಗೂ ಹೊಣೆಗಾರಿಕೆಗಳು ಈ ಏರಿಕೆ ಅಥವಾ ಇಳಿಕೆಗಳನ್ನು ದಾಖಲು ಮಾಡಲು ಮರುಮೌಲ್ಯಂಕನ ಖಾತೆಯನ್ನು ತಯಾರಿಸಲಾಗುವುದು.

ಮರು ಮೌಲ್ಯಮಾಪನ ಖಾತೆಯ ಅರ್ಥ/ಲಾಭ ಮತ್ತು ನಷ್ಟ ಹೊಂದಾಣಿಕೆ ಖಾತೆ:

ಆಸ್ತಿಗಳ ಅಥವಾ ಹೊಣೆಗಾರಿಕೆಗಳ ಮೌಲ್ಯದಲ್ಲಿ ಏರಿಕೆ ಅಥವಾ ಇಳಿಕೆಯಾದಾಗ ಅದನ್ನು ದಾಖಲು ಮಾಡಲು ಹಾಗೂ ಮರು ಮೌಲ್ಯಮಾಪನದಿಂದ ಉಂಟಾಗುವ ಲಾಭ ನಷ್ಟಗಳನ್ನು ಕಂಡುಹಿಡಿಯಲು ತಯಾರಿಸುವ ಖಾತೆಗೆ ಮರು ಮೌಲ್ಯಮಾಪನ ಖಾತೆ ಎಂದು ಕರೆಯುತ್ತೇವೆ.

ಮರು ಮೌಲ್ಯಮಾಪನ ಖಾತೆಯನ್ನು ತಯಾರಿಸುವ ಸಂದರ್ಭಗಳು:

ಈ ಕೆಳಕಂಡ ಸಂದರ್ಭಗಳಲ್ಲಿ ಮರು ಮೌಲ್ಯಮಾಪನ ಖಾತೆಯನ್ನು ತಯಾರಿಸಲಾಗುವುದು.

- ಪಾಲುಗಾರನ ಪ್ರವೇಶ
- ಪಾಲುಗಾರನ ನಿವೃತ್ತಿ
- ಲಾಭ ಹಂಚುವ ಅನುಪಾತದಲ್ಲಿ ಬದಲಾವಣೆಯಾದಾಗ ಪಾಲುಗಾರನ ನಿಧನ

ಮರು ಮೌಲ್ಯಮಾಪನ ಖಾತೆಯ ತಯಾರಿಕೆ:

ಮರು ಮೌಲ್ಯಮಾಪನ ಖಾತೆಯು ಒಂದು ನಾಮವಾಚಕ ಖಾತೆ (Nominal account). ಆಸ್ತಿಯಲ್ಲಿ ಏರಿಕೆ, ಹೊಣೆಗಾರಿಕೆಯಲ್ಲಿ ಇಳಿಕೆ ಹಾಗೂ ದಾಖಲಾಗದ ಆಸ್ತಿಗಳು ಇವುಗಳು ಲಾಭದಾಯಕ; ಇವುಗಳನ್ನು ಮರು ಮೌಲ್ಯಮಾಪನ ಖಾತೆಗೆ ಜಮ(Credit) ಮಾಡಲಾಗುವುದು. ಅದಲ್ಲದೇ ಆಸ್ತಿಯಲ್ಲಿ ಇಳಿಕೆ, ಹೊಣೆಗಾರಿಕೆಯಲ್ಲಿ ಏರಿಕೆ ಹಾಗೂ ದಾಖಲಾಗದ ಸಾಲಗಳು ಇವು ನಷ್ಟದಾಯಕ; ಇವುಗಳನ್ನು ಮರು ಮೌಲ್ಯಮಾಪನ ಖಾತೆಗೆ ಖರ್ಚು (Debit) ಮಾಡಲಾಗುವುದು.

ಮರು ಮೌಲ್ಯಮಾಪನದಿಂದಾಗುವ ಆಸ್ತಿ ಹಾಗೂ ಹೊಣೆಗಾರಿಕೆಯ ಮೌಲ್ಯದಲ್ಲಿ ಆಗುವ ಬದಲಾವಣೆಗಳಿಗೆ ಸಂಬಂಧಿಸಿದ ರೋಜು ನಮೂನೆಗಳು. (Journal Entry)

ಆಸ್ತಿಯಲ್ಲಿ ಏರಿಕೆಗಾಗಿ

ಆಸ್ತಿ ಖಾತೆ	ಖರ್ಚು
ಮರು ಮೌಲ್ಯಮಾಪನ ಖಾತೆಗೆ	

ಆಸ್ತಿಯ ಇಳಿಕೆಗಾಗಿ

ಮರು ಮೌಲ್ಯಮಾಪನ ಖಾತೆ	ಖರ್ಚು
ಆಸ್ತಿ ಖಾತೆಗೆ	

ಹೊಣೆಗಾರಿಕೆಯ ಏರಿಕೆಗಾಗಿ

ಮರು ಮೌಲ್ಯಮಾಪನ ಖಾತೆ	ಖರ್ಚು
ಹೊಣೆಗಾರಿಕೆ ಖಾತೆಗೆ	

ಹೊಣೆಗಾರಿಕೆ ಇಳಿಕೆಗಾಗಿ

ಹೊಣೆಗಾರಿಕೆ ಖಾತೆ	ಖರ್ಚು
ಮರು ಮೌಲ್ಯಮಾಪನ ಖಾತೆಗೆ	

ದಾಖಲಾಗದ ಆಸ್ತಿ ಹಾಗೂ ಹೊಣೆಗಾರಿಕೆಯ ನಮೂದನೆಗೆ

ಹಳೆಯ ಸಂಸ್ಥೆಯ ಅಡಾವೆ ಪತ್ರಿಕೆಯಲ್ಲಿ ಇಲ್ಲದಿರುವ ಆಸ್ತಿಗಳು ಹಾಗೂ ಹೊಣೆಗಾರಿಕೆಗಳನ್ನು ದಾಖಲಾಗದ ಆಸ್ತಿ ಹಾಗೂ ಹೊಣೆಗಾರಿಕೆ ಎಂದು ಕರೆಯುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ತಯಾರಿಸಲಾಗುವ ರೋಜು ದಾಖಲೆಗಳು ಯಾವುದೆಂದರೆ,

ರೋಜು ನಮೂದನೆಗಳು:

ದಾಖಲಾಗದ ಆಸ್ತಿಗಳನ್ನು ನಮೂದನೆಗಾಗಿ

ದಾಖಲಾಗದ ಆಸ್ತಿಖಾತೆ	ಖರ್ಚು
ಮರು ಮೌಲ್ಯಮಾಪನ ಖಾತೆಗೆ	

ದಾಖಲಾಗದ ಹೊಣೆಗಾರಿಕೆಯ ನಮೂದನೆಗಾಗಿ

ಮರು ಮೌಲ್ಯಮಾಪನ ಖಾತೆ	ಖರ್ಚು
ದಾಖಲಾಗದ ಹೊಣೆಗಾರಿಕೆ ಖಾತೆಗೆ	

ಮರು ಮೌಲ್ಯಮಾಪನ ಖಾತೆಯನ್ನು ಮುಕ್ತಾಯಗೊಳಿಸುವುದು:

ಮರು ಮೌಲ್ಯಮಾಪನದಿಂದ ಆಗುವ ಲಾಭ ಅಥವಾ ನಷ್ಟವನ್ನು ಹಳೆಯ ಪಾಲುಗಾರರ ಬಂಡವಾಳ ಖಾತೆಗೆ, ಹಳೆಯ ಅನುಪಾತದಲ್ಲಿ ವರ್ಗಾಯಿಸಿ ಮರು ಮೌಲ್ಯಮಾಪನ ಖಾತೆಯನ್ನು ಅಂತಿಮಗೊಳಿಸಲಾಗುವುದು. ಮರು ಮೌಲ್ಯಮಾಪನಖಾತೆಯ ಜಮಾಭಾಗವು ಖರ್ಚು ಭಾಗಕ್ಕಿಂತ ಹೆಚ್ಚಾಗಿದ್ದರೆ ಅದು ಲಾಭ. ಅಲ್ಲದೇ ಮರು ಮೌಲ್ಯಮಾಪನ ಖಾತೆಯ ಖರ್ಚುಭಾಗವು ಜಮಾಭಾಗಕ್ಕಿಂತ ಹೆಚ್ಚಿದ್ದರೆ ಅದು ನಷ್ಟ.

ರೋಜು ನಮೂದನೆಗಳು:

ಮರು ಮೌಲ್ಯಮಾಪನ ಲಾಭ ವರ್ಗಾವಣೆಗಾಗಿ

ಮರು ಮೌಲ್ಯಮಾಪನ ಖಾತೆ	ಖರ್ಚು
ಹಳೆ ಪಾಲುಗಾರರ ಬಂಡವಾಳ ಖಾತೆಗಳು	

ಮರು ಮೌಲ್ಯಮಾಪನದ ನಷ್ಟ ವರ್ಗಾವಣೆಗಾಗಿ

ಹಳೆಪಾಲುಗಾರರ ಬಂಡವಾಳ ಖಾತೆಗಳು	ಖರ್ಚು
ಮರು ಮೌಲ್ಯಮಾಪನ ಖಾತೆಗೆ	

ಸಂಸ್ಥೆಯ ಅಢಾವೆ ಪತ್ರಿಕೆಯಲ್ಲಿರುವ ವಿತರಣೆಯಾಗದ ಮೀಸಲು/ನಿಧಿ, ಲಾಭ ಅಥವಾ ನಷ್ಟದ ಹಂಚಿಕೆ: ಲಾಭ ಮತ್ತು ನಷ್ಟದ ಖಾತೆಯ ಶಿಲ್ಕು:

ಹಳೆಯ ಸಂಸ್ಥೆಯ ಹಿಂದಿನ ಲಾಭದಿಂದ ಸೃಷ್ಟಿಸಲ್ಪಟ್ಟ ಲಾಭ ಹಾಗೂ ನಷ್ಟದ ಖಾತೆಯ ಶಿಲ್ಕು (ಶೇಖರಿಸಿದ ಲಾಭ ಅಥವಾ ನಷ್ಟ) ಸಾಮಾನ್ಯ ನಿಧಿ ಅಥವಾ ಇತರೆ ಯಾವುದೇ ನಿಧಿಯು ಸಂಸ್ಥೆಯ ಅಢಾವೆ ಪತ್ರಿಕೆಯಲ್ಲಿರುವುದನ್ನು ಹಳೆಯ ಪಾಲುಗಾರ ಬಂಡವಾಳ ಖಾತೆಗಳಿಗೆ ಹಳೆಯ ಅನುಪಾತದಲ್ಲಿ ವರ್ಗಾಯಿಸಬೇಕು. ಏಕೆಂದರೆ ಇದು ಹಳೆಯ ಪಾಲುಗಾರರ ಸ್ವತ್ತು.

ಸಾಮಾನ್ಯ ಮೀಸಲು ಅಥವಾ ನಿಧಿ/ ಹಾಗೂ ವಿತರಣೆಯಾಗದ ಲಾಭಗಳು ಅಥವಾ ನಷ್ಟಗಳ ವಿತರಣೆಗಾಗಿ ಮಾಡಬೇಕಾದ ರೋಜು ನಮೂದನೆಗಳು:

ಸಾಮಾನ್ಯ ಮೀಸಲು/ ಮೀಸಲು ನಿಧಿ / ಇತರ ಮೀಸಲಿಗಾಗಿ ರೋಜು ನಮೂನೆ:

ಸಾಮಾನ್ಯ ನಿಧಿ/ ಮೀಸಲು ನಿಧಿ/ ಇತರೆ ನಿಧಿಗಳ ಖಾತೆ	ಖರ್ಚು
ಹಳೆಯ ಪಾಲುಗಾರರ ಬಂಡವಾಳ ಖಾತೆಗೆ	

ಅಡಾವೆ ಪತ್ರಿಕೆಯಲ್ಲಿ ಹೊಣೆಗಾರಿಕೆಯ ಭಾಗದಲ್ಲಿರುವ ಲಾಭ ಮತ್ತು ನಷ್ಟ ಖಾತೆಯ ಶಿಲ್ಕು (ಕ್ರೆಡಿಟ್ ಶಿಲ್ಕು) ಅಥವಾ ಶೇಖರಿಸಿದ ಲಾಭದ ನಮೂದನೆಗಾಗಿ:

ಲಾಭ ಮತ್ತು ನಷ್ಟ ಖಾತೆ	ಖರ್ಚು
ಹಳೆಯ ಪಾಲುಗಾರರ ಬಂಡವಾಳ ಖಾತೆಗೆ	

ಅಡಾವೆ ಪತ್ರಿಕೆಯ ಆಸ್ತಿಯ ಭಾಗದಲ್ಲಿರುವ ಲಾಭ ಮತ್ತು ನಷ್ಟ ಖಾತೆಯ ಶಿಲ್ಕು (ಡೆಬಿಟ್ ಶಿಲ್ಕು) ಅಥವಾ ಶೇಖರಿಸಿದ ನಷ್ಟದ ನಮೂದನೆಗಾಗಿ:

ಹಳೆಯ ಪಾಲುಗಾರರ ಬಂಡವಾಳ ಖಾತೆಗೆ	ಖರ್ಚು
ಲಾಭ ಮತ್ತು ನಷ್ಟ ಖಾತೆಗೆ	

ಹೊಸಪಾಲುಗಾರನಿಂದ ತಂದ ಬಂಡವಾಳ:

ಹೊಸ ಪಾಲುಗಾರನಿಗೆ ಸಂಸ್ಥೆಯ ಆಸ್ತಿಗಳ ಮೇಲೆ ಹಕ್ಕಿರುತ್ತದೆ. ಇದಕ್ಕೆ ಪ್ರತಿಯಾಗಿ ಸಂಸ್ಥೆಗೆ ಬಂಡವಾಳವನ್ನು ತರುತ್ತಾನೆ. ಹೊಸ ಪಾಲುಗಾರನು ಬಂಡವಾಳವನ್ನು ನಗದು ರೂಪದಲ್ಲಾಗಲಿ, ಇತರೆ ಆಸ್ತಿಗಳ ರೂಪದಲ್ಲಾಗಲಿ ಈ ಎರಡೂ ರೂಪದಲ್ಲಾಗಲಿ ತರಬಹುದು. ಇಂತಹ ಸಂದರ್ಭದಲ್ಲಿ ಹೊಸ ಪಾಲುಗಾರನ ಬಂಡವಾಳ ಖಾತೆಯನ್ನು ಕ್ರೆಡಿಟ್ ಮಾಡಿ ಹಾಗೂ ನಗದು/ಬ್ಯಾಂಕ್/ಸಂಬಂಧಪಟ್ಟ ಆಸ್ತಿಗಳ ಖಾತೆಯನ್ನು ಡೆಬಿಟ್ ಮಾಡಬೇಕು.

ರೋಜು ನಮೂದನೆ:

ಹೊಸಪಾಲುಗಾರನ ಬಂಡವಾಳ ತಂದುದಕ್ಕಾಗಿ

ನಗದು/ಬ್ಯಾಂಕ್ ಖಾತೆ	ಖರ್ಚು
ಸಂಬಂಧಿಸಿದ ಆಸ್ತಿಗಳ ಖಾತೆ	ಖರ್ಚು
ಹೊಸಪಾಲುಗಾರನ ಬಂಡವಾಳ ಖಾತೆಗೆ	

ಕೀರ್ತಿಮೌಲ್ಯ/ಸುನಾಮ ಹಾಗೂ ಅದರ ಪರಿಗಣನೆ:

ಮಾಗಿ(Magee) ಅವರು ಕೀರ್ತಿಮೌಲ್ಯವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ. "ಭವಿಷ್ಯದಲ್ಲಿ ಸಂಸ್ಥೆಗೆ ಲಾಭವನ್ನು ಗಳಿಸುವ ಸಾಮರ್ಥ್ಯಕ್ಕೆ ಮೂಲತಃ ಕೀರ್ತಿಮೌಲ್ಯ ಎಂದು ಕರೆಯುತ್ತೇವೆ."

ಕೀರ್ತಿಮೌಲ್ಯವು ಸಂಸ್ಥೆಯ ಕೀರ್ತಿ ಅಥವಾ ಸುನಾಮೆಯ ಮೌಲ್ಯ. ಇದು ಸಂಸ್ಥೆಗೆ ಹೆಚ್ಚು ಗ್ರಾಹಕರನ್ನು ಆಕರ್ಷಿಸುತ್ತದೆ ಹಾಗೂ ಸಂಸ್ಥೆಗೆ ಹೆಚ್ಚು ಲಾಭ ಗಳಿಸಲು ಸಹಾಯ ಮಾಡುತ್ತದೆ. ಇದು ಒಂದು ಅಗೋಚರ ಆಸ್ತಿ. (Intangible Asset).

ಕೀರ್ತಿಮೌಲ್ಯದ ಮೇಲೆ ಪರಿಣಾಮ ಬೀರುವ ಅಂಶಗಳು:

- ಸಂಸ್ಥೆಯ ಹಿಂದಿನ ವ್ಯವಹಾರದ ಲಾಭಗಳು

- ವ್ಯವಹಾರದ ಸ್ಥಳ
- ವ್ಯವಹಾರದ ಲಾಭ ಗಳಿಸುವ ಸಾಮರ್ಥ್ಯ
- ವ್ಯವಹಾರದ ಸ್ವರೂಪ
- ವ್ಯವಸ್ಥಾಪಕ ಹಾಗೂ ನೌಕರರ ಸಾಮರ್ಥ್ಯ

ಪಾಲುಗಾರನ ಪ್ರವೇಶದ ಸಮಯದಲ್ಲಿ ಕೀರ್ತಿಮೌಲ್ಯವನ್ನು ಖಾತೆಗೆ ತೆಗೆದುಕೊಳ್ಳುವ ಅವಶ್ಯಕತೆ:

ಹೊಸ ಪಾಲುಗಾರನ ಪ್ರವೇಶವಾದಾಗ ಹಳೆಯ ಪಾಲುಗಾರರು ಭಾಗಶಃ ಲಾಭದ ಪಾಲನ್ನು ಹೊಸ ಪಾಲುಗಾರನಿಗೆ ತ್ಯಾಗ ಮಾಡುತ್ತಾರೆ. ಹಳೆಯ ಪಾಲುಗಾರರಿಗೆ ಲಾಭದಲ್ಲಿ ಆಗುವ ನಷ್ಟವನ್ನು ಸರಿದೂಗಿಸಲು ಹೊಸ ಪಾಲುಗಾರನು ನಗದಿನಲ್ಲಿ ತರುತ್ತಾರೆ ಅಥವಾ ಸಂಸ್ಥೆಯ ಕೀರ್ತಿ ಮೌಲ್ಯವನ್ನು ಮೌಲ್ಯ ಮಾಡುತ್ತಾರೆ ಅಥವಾ ಸೃಷ್ಟಿಸುತ್ತಾರೆ. ಈ ಕಾರಣದಿಂದ ಹಳೆಯ ಪಾಲುಗಾರರಿಗೆ ಹೊಸ ಪಾಲುಗಾರನಿಂದ ನಗದು ದೊರೆಯುತ್ತದೆ ಅಥವಾ ಅವರ ಬಂಡವಾಳದಲ್ಲಿ ಹೆಚ್ಚಳವಾಗುತ್ತದೆ.

ಕೀರ್ತಿಮೌಲ್ಯದ ಮೌಲ್ಯಮಾಪನ ವಿಧಾನಗಳು:

- ಸರಾಸರಿ ಲಾಭ ವಿಧಾನ (Average Profit Method)
- ಅಧಿಕ(ಹೆಚ್ಚುವರಿ)/ಲಾಭ ವಿಧಾನ (Super Profit Method)
- ಬಂಡವಾಳಗಾರಿಕೆಯ ವಿಧಾನ (Capitalisation Method)

ಸರಾಸರಿ ಲಾಭ ವಿಧಾನ (Average Profit Method)

ಈ ವಿಧಾನದಲ್ಲಿ ಕೊಟ್ಟಿರುವ ವರ್ಷಗಳ ಸಂಖ್ಯೆಯ ಲಾಭ ನಷ್ಟಗಳನ್ನು ಸರಾಸರಿ ಮಾಡಬೇಕು. ಆ ನಂತರ ಬಂದ ಆ ಸರಾಸರಿ ಲಾಭವನ್ನು ಒಪ್ಪಿದ ವರ್ಷಗಳ ಸಂಖ್ಯೆಯ ಖರೀದಿಯಿಂದ (no. of years of purchases) ಗುಣಿಸಿ ಕೀರ್ತಿಮೌಲ್ಯವನ್ನು ಕಂಡುಹಿಡಿಯುತ್ತೇವೆ.

ಕೀರ್ತಿಮೌಲ್ಯ = ಸರಾಸರಿ ಲಾಭ × ನಿರ್ದಿಷ್ಟ ವರ್ಷಗಳ ಸಂಖ್ಯೆಯ ಖರೀದಿ

ನಿದರ್ಶನ 25.

ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭದ ಎರಡು ವರ್ಷಗಳ ಖರೀದಿಗೆ ಸಂಸ್ಥೆಯು ಕೀರ್ತಿಮೌಲ್ಯವನ್ನು ಮೌಲೀಕರಿಸಬೇಕು. ಕಳೆದ ನಾಲ್ಕು ವರ್ಷಗಳ ಲಾಭ ಮತ್ತು ನಷ್ಟವು ಈ ಕೆಳಗಿನಂತಿತ್ತು.

2010-11 ₹ 6,000 ಲಾಭ

2011-12 ₹ 2,000 ನಷ್ಟ

2012-13 ₹ 10,000 ಲಾಭ

2013-14 ₹ 12,000 ಲಾಭ

ಸಂಸ್ಥೆಯ ಕೀರ್ತಿಮೌಲ್ಯವನ್ನು ಕಂಡುಹಿಡಿಯಿರಿ.

ನಿರೂಪಣೆ : ಸರಾಸರಿ ಲಾಭ $= \frac{6,000 - 2.000 + 10,000 + 12,000}{4} = \frac{26,000}{4} = 6,500$

ಕೀರ್ತಿಮೌಲ್ಯ = ಸರಾಸರಿ ಲಾಭ × ನಿರ್ದಿಷ್ಟ ವರ್ಷಗಳ ಸಂಖ್ಯೆ ಖರೀದಿ

= 6,500 × 2 = **₹ 13,000**

ನಿದರ್ಶನ 26.

ಕಳೆದ 3 ವರ್ಷದ, 2ರಷ್ಟು ಸರಾಸರಿ ಲಾಭದ ಮೇಲಿಗೆ ಕೀರ್ತಿಮೌಲ್ಯವನ್ನು ಮೌಲೀಕರಿಸಬೇಕು.

ಕಳೆದ ಮೂರು ವರ್ಷಗಳ ಲಾಭಗಳು – ₹16,000, ₹12,000 ಮತ್ತು ₹8,000. ಕೀರ್ತಿಮೌಲ್ಯವನ್ನು ಕಂಡುಹಿಡಿಯಿರಿ.

ನಿರೂಪಣೆ :

ಮೂರುವರ್ಷದ ಸರಾಸರಿ ಲಾಭ = $\frac{16,000+12,000+8,000}{3} = \frac{36,000}{3} = 12,000$

ಕೀರ್ತಿಮೌಲ್ಯ = ಸರಾಸರಿ ಲಾಭ × ಎರಡರಷ್ಟು = 12,000 × 2 = 24,000

ಅಧಿಕ ಲಾಭ ವಿಧಾನ:

ಈ ವಿಧಾನದಲ್ಲಿ ಅಧಿಕಲಾಭ, ನಿರ್ದಿಷ್ಟಪಡಿಸಿದ ವರ್ಷಗಳ ಖರೀದಿ ಸಂಖ್ಯೆಯಿಂದ ಗುಣಿಸಿದರೆ ಕೀರ್ತಿಮೌಲ್ಯವನ್ನು ಕಂಡುಹಿಡಿಯಬಹುದು. ಅಧಿಕ ಲಾಭವನ್ನು ಕಂಡುಹಿಡಿಯಲು ಸಾಮಾನ್ಯ ಲಾಭವನ್ನು ವಾಸ್ತವಿಕ ಲಾಭದಿಂದ ಕಳೆಯಬೇಕು.

ಬಂಡವಾಳಗಾರಿಕೆಯ ವಿಧಾನ:

ಈ ವಿಧಾನದಲ್ಲಿ ಸರಾಸರಿ ಸಾಮಾನ್ಯ ಲಾಭವನ್ನು ಸಾಮಾನ್ಯ ಲಾಭದ ದರ (Normal rate of returns) ನ ಆಧಾರದ ಮೇಲೆ ಬಂಡವಾಳಗಾರಿಕೆ ಮಾಡಬೇಕು. ಈ ಬಂಡವಾಳಗಾರಿಕೆಯ ಮೌಲ್ಯದಿಂದ, ನಿವ್ವಳ ಆಸ್ತಿಯನ್ನು ಕಳೆದು ಕೀರ್ತಿಮೌಲ್ಯವನ್ನು ಕಂಡುಹಿಡಿಯುತ್ತೇವೆ.

ಪಾಲುಗಾರನ ಪ್ರವೇಶವಾದಾಗ ಕೀರ್ತಿಮೌಲ್ಯದ ಪರಿಗಣನೆ:

- ಹೊಸ ಪಾಲುಗಾರನು ನಗದು ರೂಪದಲ್ಲಿ ಕೀರ್ತಿಮೌಲ್ಯವನ್ನು ತಂದು ಹಾಗೂ ಹಳೆಯ ಪಾಲುಗಾರರು ಹಿಂಪಡೆದಾಗ
- ನಗದು ರೂಪದಲ್ಲಿ ಕೀರ್ತಿಮೌಲ್ಯವನ್ನು ತಂದು ಮತ್ತು ಉಳಿಸಿಕೊಂಡಾಗ
- ಕೀರ್ತಿಮೌಲ್ಯವನ್ನು ಸೃಷ್ಟಿ ಮಾಡಿ ಉಳಿಸಿಕೊಂಡಾಗ
- ಕೀರ್ತಿಮೌಲ್ಯವನ್ನು ಸೃಷ್ಟಿಸಿ ವಜಾಗೊಳಿಸಿದಾಗ (Written off) ಕೀರ್ತಿಮೌಲ್ಯವನ್ನು ತಂದು ಮತ್ತು ಹಿಂಪಡೆದಾಗ

ರೋಜು ನಮೂದುಗಳು:

ಹೊಸಪಾಲುಗಾರನು ನಗದುರೂಪದಲ್ಲಿ ಕೀರ್ತಿಮೌಲ್ಯವನ್ನು ತಂದಿದ್ದಕ್ಕಾಗಿ

ನಗದು/ಬ್ಯಾಂಕ್ ಖಾತೆ	ಖರ್ಚು
ಕೀರ್ತಿಮೌಲ್ಯ ಖಾತೆಗೆ	

ಹಳೆಯ ಪಾಲುಗಾರರು ಕೀರ್ತಿಮೌಲ್ಯವನ್ನು ಹಂಚಿಕೊಂಡಿದ್ದಕ್ಕಾಗಿ

ಕೀರ್ತಿಮೌಲ್ಯ ಖಾತೆ	ಖರ್ಚು
ಹಳೆಯ ಪಾಲುಗಾರರ ಬಂಡವಾಳ ಖಾತೆಗೆ (ತ್ಯಾಗ ಅನುಪಾತ)	

ಹಳೆಯ ಪಾಲುಗಾರರು ಕೀರ್ತಿಮೌಲ್ಯವನ್ನು ಹಿಂಪಡೆದದ್ದಕ್ಕಾಗಿ

ಹಳೆಯ ಪಾಲುಗಾರರ ಬಂಡವಾಳ ಖಾತೆಗಳು	ಖರ್ಚು(ತ್ಯಾಗ ಅನುಪಾತ)
ನಗದು ಅಥವಾ ಬ್ಯಾಂಕ್ ಖಾತೆಗೆ	

ಹೊಸಪಾಲುಗಾರರು ನಗದುರೂಪದಲ್ಲಿ ಕೀರ್ತಿ ಮೌಲ್ಯವನ್ನು ತಂದಿದ್ದಕ್ಕಾಗಿ ರೋಜು ನಮೂದುಗಳು

ನಗದು ಅಥವಾ ಬ್ಯಾಂಕ್ ಖಾತೆ	ಖರ್ಚು
ಕೀರ್ತಿಮೌಲ್ಯ ಖಾತೆಗೆ	

ಹಳೆಯ ಪಾಲುಗಾರರು ಕೀರ್ತಿಮೌಲ್ಯವನ್ನು ಹಂಚಿಕೊಂಡಿದ್ದಕ್ಕಾಗಿ

ಕೀರ್ತಿಮೌಲ್ಯ ಖಾತೆ	ಖರ್ಚು (ತ್ಯಾಗ ಅನುಪಾತ)
ಹಳೆಯ ಪಾಲುಗಾರರ ಬಂಡವಾಳ ಖಾತೆಗೆ	

ಈ ಕೀರ್ತಿಯನ್ನು ಅಡಾವಿ ಪತ್ರಿಕೆಯ ಆಸ್ತಿಯ ಕಡೆ ತೋರಿಸಬೇಕು.

ಕೀರ್ತಿಮೌಲ್ಯವನ್ನು ಸೃಷ್ಟಿಸಿ ಸಂಸ್ಥೆಯಲ್ಲಿ ಉಳಿಸಿಕೊಂಡಾಗ

ಕೀರ್ತಿಮೌಲ್ಯ ಖಾತೆ	ಖರ್ಚು (ಹಳೆಯ ಅನುಪಾತ)
ಹಳೆಯ ಪಾಲುಗಾರರ ಖಾತೆಗಳಿಗೆ	

ಈ ಕೀರ್ತಿಮೌಲ್ಯವನ್ನು ಅಡಾವಿ ಪತ್ರಿಕೆಯಲ್ಲಿ ಆಸ್ತಿಯ ಕಡೆ ತೋರಿಸಬೇಕು. ಕೀರ್ತಿ ಮೌಲ್ಯವನ್ನು ಸೃಷ್ಟಿಸಿ ವಜಾಗೊಳಿಸಿದಾಗ

ಕೀರ್ತಿಮೌಲ್ಯವನ್ನು ಹಳೆಯ ಪಾಲುಗಾರರು ಹಂಚಿಕೊಂಡದ್ದಕ್ಕಾಗಿ

ಕೀರ್ತಿಮೌಲ್ಯ ಖಾತೆ	ಖರ್ಚು
ಹಳೆಯ ಪಾಲುಗಾರರ ಬಂಡವಾಳ ಖಾತೆಗಳಿಗೆ (ಹಳೆಯ ಅನುಪಾತ)	

ಕೀರ್ತಿಮೌಲ್ಯವನ್ನು ವಜಾಗೊಳಿಸಿದ್ದಕ್ಕಾಗಿ

ಎಲ್ಲಾ ಪಾಲುಗಾರರ ಬಂಡವಾಳ ಖಾತೆಗಳು (ಹೊಸ ಅನುಪಾತ)	ಖರ್ಚು
ಕೀರ್ತಿಮೌಲ್ಯ ಖಾತೆಗೆ	

ಪಾಲುಗಾರರ ಬಂಡವಾಳ ಖಾತೆ ತಯಾರಿಸುವುದು:

ಈ ಕೆಳಗಿನ ಅಂಶಗಳನ್ನು ನಮೂದಿಸಿ ಎಲ್ಲ ಪಾಲುದಾರರ ಬಂಡವಾಳ ಖಾತೆಗಳು ತಯಾರಿಸುತ್ತೇವೆ.

- ಅಡಾವೆಪತ್ರಿಕೆಯಲ್ಲಿ ಇರುವ ಹಳೆಯ ಪಾಲುಗಾರರ ಬಂಡವಾಳ ಶಿಲ್ಕು.
- ಆಸ್ತಿ ಮತ್ತು ಹೊಣೆಗಾರಿಕೆಗಳ ಮರುಮೌಲ್ಯಮಾಪನದಿಂದ ಆಗಿದ್ದ ಲಾಭ ಮತ್ತು ನಷ್ಟಗಳು
- ಅಡಾವೆ ಪತ್ರದಲ್ಲಿರುವ ವಿತರಣೆಯಾಗದ ಮಿಸಲುಗಳು ಮತ್ತು ಲಾಭ ನಷ್ಟ ಖಾತೆ
- ಹೊಸಪಾಲುಗಾರನು ನಗದು ಹಾಗೂ ಇತರೆ ಆಸ್ತಿಗಳ ರೂಪದಲ್ಲಿ ತಂದ ಬಂಡವಾಳ
- ಕೀರ್ತಿಮೌಲ್ಯದ ವಿತರಣೆ.
- ಬಂಡವಾಳ ಖಾತೆಗಳ ಶುಲ್ಕೀಕರಣ

ಪ್ರವೇಶದ ನಂತರ ಹೊಸ ಪಾಲುಗಾರನ ಬಂಡವಾಳದ ಆಧಾರದ ಮೇಲೆ ಹಳೆಯ ಪಾಲುಗಾರರ ಬಂಡವಾಳ ಹೊಂದಾಣಿಕೆ:

ಕೆಲವೊಮ್ಮೆ ಪಾಲುಗಾರರ ಬಂಡವಾಳ ಖಾತೆಯನ್ನು ಹೊಂದಾಣಿಕೆ ಮಾಡಲು ಲೆಕ್ಕದಲ್ಲಿ ಸೂಚಿಸಲಾಗುವುದು. ಆಗ ಈ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

- ಒಟ್ಟು ಬಂಡವಾಳವನ್ನು ಕಂಡುಹಿಡಿಯಿರಿ ಅದನ್ನು ಕಂಡು ಹಿಡಿಯಲು ಹೊಸ ಪಾಲುದಾರನ ಪಾಲಿನ ವಿಲೋಮದಿಂದ (Recipocal) ಅವರು ತಂದ ಬಂಡವಾಳವನ್ನು ಗುಣಿಸಿಬೇಕು.
- ಹೊಸ ಲಾಭ ಪಾಲು ಅನುಪಾತವನ್ನು ಕಂಡುಹಿಡಿಯಿರಿ. (ಲೆಕ್ಕದಲ್ಲಿ ಕೊಟ್ಟಿಲ್ಲದಿದ್ದಾಗ)

- ಹೊಸ ಅನುಪಾತದಲ್ಲಿ ಒಟ್ಟು ಬಂಡವಾಳವನ್ನು ವಿತರಣೆ ಮಾಡಿ.
- ಎಲ್ಲ ಪಾಲುಗಾರರ ಖಾತೆಯನ್ನು ತಯಾರಿಸಿ ಮತ್ತು ಎಲ್ಲ ಹೊಂದಾಣಿಕೆಗಳಾದ ಕೀರ್ತಿಮೌಲ್ಯ, ನಿಧಿ ಇತ್ಯಾದಿಗಳನ್ನು ನಮೂದಿಸಿ, ಕಂಡುಹಿಡಿದ ಬಂಡವಾಳವನ್ನು ಶಿಲ್ಕು ಮುಂದುವರೆದಿದ್ದು (Balance c/d) ಎಂದು ಬರೆಯಬೇಕು.
- ಅಂತಿಮವಾಗಿ ಬಂಡವಾಳಖಾತೆಗಳನ್ನು ಬ್ಯಾಲನ್ಸ್ ಮಾಡಬೇಕು. ಬಂಡವಾಳ ಖಾತೆಯಲ್ಲಿ Surplus (ಹೆಚ್ಚುವರಿ) ಅಥವಾ Deficit (ಕೊರತೆ) ಶಿಲ್ಕು ಇದ್ದಲ್ಲಿ ಕ್ರಮವಾಗಿ ನಗದಲ್ಲಿ ಹೊಂದಾಣಿಕೆ ಮಾಡಬೇಕು.

ಯಾವುದೇ ಪಾಲುಗಾರನ ಖಾತೆಯ ಡೆಬಿಟ್ ಕಡೆಯೂ ಕ್ರೆಡಿಟ್ ಕಡೆಗಿಂತ ಹೆಚ್ಚಾಗಿದ್ದಲ್ಲಿ ಇದನ್ನು ಡಿಪಸಿಯೆಟ್ (ಕೊರತೆ) ಎಂದು ಕರೆಯುತ್ತೇವೆ. ಇಂತಹ ಸಂದರ್ಭದಲ್ಲಿ ಪಾಲುಗಾರನು ನಗದು ತರಬೇಕಾಗುತ್ತದೆ. ಅದಕ್ಕಾಗಿ ಬಂಡವಾಳ ಖಾತೆಯನ್ನು ಕ್ರೆಡಿಟ್ ಮಾಡಿ ನಗದು ಅಥವಾ ಬ್ಯಾಂಕ್ ಖಾತೆಯನ್ನು ಡೆಬಿಟ್ ಮಾಡಬೇಕು.

ರೋಜು ನಗದು

ನಗದು ಅಥವಾ ಬ್ಯಾಂಕು ಖಾತೆ	ಖರ್ಚು
ಪಾಲುಗಾರನ ಬಂಡವಾಳ ಖಾತೆಗೆ	

ಯಾವುದೇ ಪಾಲುಗಾರನ ಬಂಡವಾಳ ಖಾತೆಯಲ್ಲಿ ಕ್ರೆಡಿಟ್ ಕಡೆಯೂ ಡೆಬಿಟ್‌ಗಿಂತ ಹೆಚ್ಚಿದಲ್ಲಿ ಇದನ್ನು Surplus (ಹೆಚ್ಚುವರಿ) ಎಂದು ಕರೆಯಲಾಗುತ್ತದೆ. ಇಂತಹ ಸಂದರ್ಭದಲ್ಲಿ ಪಾಲುಗಾರನು ನಗದನ್ನು ಹಿಂಪಡೆಯುತ್ತಾನೆ. ಇದಕ್ಕಾಗಿ ಬಂಡವಾಳಖಾತೆಯನ್ನು ಡೆಬಿಟ್ ಮಾಡಬೇಕು ಹಾಗೂ ನಗದು ಅಥವಾ ಬ್ಯಾಂಕ್ ಖಾತೆಯನ್ನು ಕ್ರೆಡಿಟ್ ಮಾಡಬೇಕು.

ರೋಜು ದಾಖಲೆ

ಪಾಲುಗಾರನ ಬಂಡವಾಳ ಖಾತೆ	ಖರ್ಚು
ನಗದು ಅಥವಾ ಬ್ಯಾಂಕ್ ಖಾತೆಗೆ	

ನಿದರ್ಶನ 27.

ಅನಿಲ್ ಮತ್ತು ಸುನಿಲ್ ಪಾಲುಗಾರರಾಗಿದ್ದು ತಮ್ಮ ಲಾಭ ಮತ್ತು ನಷ್ಟಗಳನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31–03–2014ರಂದು ಅವರ ಅಡಾವೆ ಪತ್ರಿಕೆ ಈ ಕೆಳಗಿನಂತಿದೆ.

31–03–2014ರ ಅಡಾವೆ ಪತ್ರಿಕೆ

ಹೊಣೆಗಾರಿಕೆಗಳು	₹	ಆಸ್ತಿಗಳು	₹
ಧನಿಗಳು	20,000	ಬ್ಯಾಂಕಿನಲ್ಲಿ ನಗದು	5,000
ಕೊಡತಕ್ಕ ಹುಂಡಿ	6,000	ಋಣಿಗಳು	18,000
ಸಾಮಾನ್ಯ ಮೀಸಲು	4,000	ಸರಕು	17,000
ಬಂಡವಾಳಗಳು:		ಕಟ್ಟಡಗಳು	30,000
ಅನಿಲ್	40,000	ಪೀಠೋಪಕರಣಗಳು	10,000
ಸುನಿಲ್	30,000	ಯಂತ್ರೋಪಕರಣಗಳು	20,000
	1,00,000		**1,00,000**

01–04–2014ರಂದು ಈ ಕೆಳಗಿನ ಕರಾರುಗಳ ಮೇಲೆ ವಿಮಲ್‌ನನ್ನು ಪಾಲುಗಾರಿಕೆಗೆ ಪ್ರವೇಶ ನೀಡಲಾಯಿತು.